ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 27 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 189 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಡಿಕೆಶಿ ದಿಢೀರ್ ದೆಹಲಿ ಪ್ರಯಾಣ

ನವೆಂಬರ್ ಕ್ರಾಂತಿ ಚರ್ಚೆ ನಡುವೆ ಕುತೂಹಲ ಮೂಡಿಸಿದ ಡಿಸಿಎಂ

ಬೆಂಗಳೂರು, ಅ.26– ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯುತ್ತಿರುವ ರಾಜಕೀಯ ಚಟುವಟಿಕೆಗಳು ದಿನದಿಂದ ದಿನಕ್ಕೆ ರೋಚಕತೆಯನ್ನು ಹೆಚ್ಚಿಸುತ್ತಿವೆ. ರಾಜ್ಯ ಸರ್ಕಾರದಲ್ಲಿ ನವೆಂಬರ್ ಕ್ರಾಂತಿ, ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನಾರಚನೆ ಕುರಿತು ಭಾರಿ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಮಧ್ಯಾಹ್ನ ದಿಢೀರನೆ ದೆಹಲಿಗೆ ಪ್ರಯಾಣ ಬೆಳೆಸಿರುವುದು ತೀವ್ರ ಕುತೂಹಲ ಮೂಡಿಸಿದೆ.


ಡಿ.ಕೆ.ಶಿವಕುಮಾರ್

ಮಾಧ್ಯಮಗಳಿಗೆ 'ದೆಹಲಿಗೆ ಹೋಗಲ್ಲ, ಹೋಗಲ್ಲ' ಎಂದು ಇಂದು ಬೆಳಗ್ಗೆಯೂ ಹೇಳಿಕೆ ನೀಡಿದ್ದ ಬೆನ್ನಲ್ಲೇ ಅವರು ದೆಹಲಿ ವಿಮಾನ ಹತ್ತಿರುವುದು ರಾಜಕೀಯ ವಲಯದಲ್ಲಿ ಹಲವು ಕುತೂಹಲ ಹುಟ್ಟುಹಾಕಿದೆ. ಇಂದು ಮಧ್ಯಾಹ್ನ ಬೆಂಗಳೂರಿನಿಂದ ದೆಹಲಿಗೆ ಹಾರಿದ ಡಿ.ಕೆ.ಶಿವಕುಮಾರ್ ಅವರು ಸಂಜೆಯ ಹೊತ್ತಿಗೆ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಈ ದಿಢೀರ್ ಪ್ರಯಾಣದ ಹಿನ್ನೆಲೆಯಲ್ಲಿ ಹಲವು ಊಹಾಪೋಹಗಳು ಹರಿದಾಡುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪ್ರವಾಸಕ್ಕೂ ಮುನ್ನವೇ ಡಿ.ಕೆ ಶಿವಕುಮಾರ್ ದೆಹಲಿಗೆ ತೆರಳಿರುವುದು ಇನ್ನಷ್ಟು ಕುತೂಹಲ ಮೂಡಿಸಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಅಧಿಕಾರದ ಹಂಚಿಕೆ ಕುರಿತು ದೀರ್ಘ ಕಾಲದಿಂದ ಚರ್ಚೆಗಳು ನಡೆಯುತ್ತಿವೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವ ಕುಮಾರ್ ನಡುವಿನ ಅಧಿಕಾರ ಹಂಚಿಕೆಯ ಒಪ್ಪಂದದ ಬಗ್ಗೆ ಹಲವು ವದಂತಿಗಳು ಹಬ್ಬಿವೆ. ಇತ್ತೀಚೆಗೆ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರ ಹೇಳಿಕೆಯು ರಾಜಕೀಯ ವಲಯದಲ್ಲಿ ■ 6ನೇ ಪುಟಕ್ಕೆ

ಸಂಪುಟ ಪುನರ್‌ರಚನೆ ಚರ್ಚೆ ಅಂತಿಮ ಹಂತಕ್ಕೆ ಬಂದಿರಬಹುದು

ಬೆಳಗಾವಿ, ಅ.26– ಸರ್ಕಾರ ಅಧಿಕಾರಕ್ಕೆ ಬಂದ 30 ತಿಂಗಳ ನಂತರ ಸಂಪುಟ ಪುನರ್‌ರಚನೆ ಮಾಡಲಾಗುತ್ತದೆ ಎನ್ನಲಾಗಿತ್ತು. ಈಗ ಆ ಚರ್ಚೆ ಅಂತಿಮ ಹಂತಕ್ಕೆ ಬಂದಿರಬೇಕು. ಯಾರನ್ನು ಸಚಿವ ಸ್ಥಾನದಿಂದ ಕೈಬಿಡುತ್ತಾರೆ ಎಂಬ ವಿಚಾರ ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು. ಈ ಬಗ್ಗೆ ನಮ್ಮ ಹಂತದಲ್ಲಿ ಚರ್ಚೆಯಾಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.


ಸತೀಶ ಜಾರಕಿಹೊಳಿ

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಂಪುಟ ಪುನರ್ ರಚನೆ ಆದಾಗ ಹಳಬರು ಹೋಗಿ, ಹೊಸಬರು ಬರುತ್ತಾರೆ. ಸಂಪುಟದಲ್ಲಿ 34 ಜನರಿಗೆ ಮಾತ್ರ ಸಚಿವ ಸ್ಥಾನ ನೀಡಬೇಕಿದೆ. ಅನೇಕ ಹಿರಿಯರು ಆಕಾಂಕ್ಷಿಗಳಾಗಿದ್ದಾರೆ. ಯಾರು ಸಚಿವರಾಗುತ್ತಾರೆ ಎಂದು ನಾವೇ ಹೇಳುವುದು ಕಷ್ಟ ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ. ಬಹಳಷ್ಟು ಹಿರಿಯರು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ಅಂತಿಮವಾಗಿ ಲಕ್ಷ್ಮಿ ಯಾರಿಗೆ ಒಲಿಯುತ್ತಾಳೆ ಕಾದು ನೋಡೋಣ ಎಂದರು. ಸಚಿವ ಸ್ಥಾನ ತ್ಯಾಗದ ಬಗ್ಗೆ ಕೃಷ್ಣ ಬೈರೇಗೌಡ ಮಾತನಾಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಪಕ್ಷದ ಹೈಕಮಾಂಡ್ ಸೂಚನೆಯನ್ನು ಎಲ್ಲರೂ ಪಾಲಿಸಬೇಕು. ಸಚಿವ ಸ್ಥಾನ ತೊರೆದವರು ಪಕ್ಷದ ಪರವಾಗಿ ಕೆಲಸ ಮಾಡಬೇಕು. ಸಚಿವರಾದವರು ಜನರ ಕೆಲಸ ಮಾಡಬೇಕು ಎಂದರು.

ಸರಗೂರು ಬಳಿ ಹುಲಿ ದಾಳಿಗೆ ದನಗಾಹಿ ಬಲಿ

10 ದಿನ ಹಿಂದಷ್ಟೇ ಬಡಗಲಪುರದಲ್ಲಿ ರೈತನ ಮೇಲೆ ಹುಲಿ ದಾಳಿ ನಡೆಸಿತ್ತು

ಮೈಸೂರು, ಅ.26(ಎಂಟಿವೈ, ನಾಗೇಶ್)– ಸರಗೂರು ತಾಲೂಕಿನ ಮುಳ್ಳೂರು ಸಮೀಪದ ಬೆಣ್ಣೆಗೆರೆ ಗ್ರಾಮದ ಬಳಿ ದನ ಮೇಯಿಸುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ಹುಲಿಯೊಂದು ದಾಳಿ ನಡೆಸಿ, ಹತ್ಯೆಗೈದಿರುವ ಘಟನೆ ಭಾನುವಾರ ಬೆಳಗ್ಗೆ ನಡೆ ದಿದ್ದು, ಇದರಿಂದ ಸರಗೂರು ತಾಲೂಕಿನ ಕಾಡಂಚಿನ ಗ್ರಾಮದ ಜನರು ಭಯಭೀತಗೊಂಡಿದ್ದಾರೆ.

ಸರಗೂರು ತಾಲೂಕಿನ ಬೆಣ್ಣೆಗೆರೆ ಗ್ರಾಮದ ರಾಜಶೇಖರ(54) ಹುಲಿ ದಾಳಿಗೆ ತುತ್ತಾಗಿ ಮೃತ ಪಟ್ಟವರಾಗಿದ್ದು, ಗ್ರಾಮಸ್ಥರು ಹುಲಿ ಹಾವಳಿ ನಿಯಂತ್ರಿಸುವಂತೆ ಹಕ್ಕೊತ್ತಾಯ ಮಾಡಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮವಾದ ಮುಳ್ಳೂರು ಸಮೀಪದ ಬೆಣ್ಣೆಗೆರೆ ಗ್ರಾಮದ ಬಳಿ ಒಡೆಯನಪುರ, ಕುದುರೆಗುಂಡಿ ಹಳ್ಳದಿಂದ ನುಗು ಹೊಳೆಯವರೆಗೆ ನೂರಾರು ಎಕರೆ ಪ್ರದೇಶದಲ್ಲಿ ದಟ್ಟ ಪೊದೆ ಬೆಳೆದುಕೊಂಡಿದ್ದು, ಆ ಭಾಗದಲ್ಲಿ ವನ್ಯಜೀವಿ ಗಳು ಆಶ್ರಯ ಪಡೆದಿದ್ದು, ಪದೇ ಪದೇ ಕಾಡಂಚಿನ ಗ್ರಾಮದ ಜನರು ಸಾಕಿರುವ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದೆ. ಇಂದು ಬೆಳಗ್ಗೆ ತಮ್ಮ ಹೊಲದಲ್ಲಿ ದನ ಮೇಯಿಸಲು ರಾಜಶೇಖರ್ ತೆರಳಿದ್ದಾಗ ಪೊದೆಯಲ್ಲಿ ಅಡಗಿದ್ದ ಹುಲಿಯೊಂದು ಏಕಾಏಕಿ ಅವರ ಮೇಲೆ ದಾಳಿ ನಡೆಸಿದೆ. ಪಂಜದಿಂದ ಮುಖದ ಭಾಗಕ್ಕೆ ಬಲವಾಗಿ ಹೊಡೆದ ಹುಲಿ, ತೋಳಿಗೆ ಕಚ್ಚಿದೆ. ಹುಲಿ ದಾಳಿ ಮಾಡಿದ್ದನ್ನು ಕಂಡ ರಾಜಶೇಖರ್ ಅವರ ಮನೆಯ ■ 6ನೇ ಪುಟಕ್ಕೆ


ರಾಜಶೇಖರ

10 ದಿನದ ಹಿಂದೆ

ಸರಗೂರು ತಾಲೂಕಿನ ಬಡಗಲಪುರದಲ್ಲಿ ಅ.17ರಂದು ಹುಲಿಯೊಂದು ದಾಳಿ ನಡೆಸಿ ಮಹದೇವೇಗೌಡ ಎಂಬುವರನ್ನು ಗಂಭೀರವಾಗಿ ಗಾಯಗೊಳಿಸಿತ್ತು. ಮಹದೇವೇಗೌಡ ಅವರ ಮುಖಕ್ಕೆ ಗಂಭೀರವಾಗಿ ಗಾಯವಾಗಿದ್ದು, ಒಂದು ಕಣ್ಣು ಸಂಪೂರ್ಣವಾಗಿ ದೃಷ್ಟಿ ಕಳೆದುಕೊಂಡಿದ್ದರೆ, ಮತ್ತೊಂದು ಕಣ್ಣು ಅರ್ಧ ಭಾಗದಷ್ಟು ದೃಷ್ಟಿಶಕ್ತಿ ಕಳೆದು ಕೊಂಡಿದೆ. ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹದೇವೇಗೌಡ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡಿದೆ.

ಕ್ರಮ ಕೈಗೊಳ್ಳಿ

ಕಾಡಂಚಿನ ಗ್ರಾಮಗಳಲ್ಲಿ ವನ್ಯ ಜೀವಿಗಳ ಹಾವಳಿ ಮುಂದುವರೆ ದಿದ್ದು, ಅದಕ್ಕೆ ಕಡಿವಾಣ ಹಾಕಲು ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. 10 ದಿನದಲ್ಲಿ ಎರಡು ಪ್ರತ್ಯೇಕ ಸ್ಥಳದಲ್ಲಿ ಹುಲಿ ದಾಳಿ ನಡೆಸಿ ಒಬ್ಬರನ್ನು ಕೊಂದು ಹಾಕಿದ್ದರೆ, ಮತ್ತೊಬ್ಬರಿಗೆ ಗಂಭೀರವಾಗಿ ಗಾಯಗೊಳಿಸಿದೆ. ಬಡಗಲಪುರ, ಮುಳ್ಳೂರು, ಬೆಣ್ಣೆಗೆರೆ ಸೇರಿದಂತೆ ಸುತ್ತಮುತ್ತಲಿನ ಕಾಡಂಚಿನ ಗ್ರಾಮಗಳಲ್ಲಿ 3 ರಿಂದ 4 ಹುಲಿಗಳು ಸಂಚರಿಸುತ್ತಿರುವ ಬಗ್ಗೆ ಮಾಹಿತಿ ಇದ್ದು, ದಾಳಿಯಂತಹ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸಬೇಕು.

-ಬಡಗಲಪುರ ನಾಗೇಂದ್ರ,
ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ಮೈಸೂರು ಮಿತ್ರ ಸೋಮವಾರ 27 ಅಕ್ಟೋಬರ್ 2025

ಪ್ರಾಣಿಗಳ ಶೋಷಣೆ ವಿರುದ್ಧ ಜಾಗೃತಿ



ಪ್ರಾಣಿಗಳನ್ನು ಸಮುದಾಯ ಆರ್ಥಿಕತೆ ಭಾಗವಾಗಿ ನೋಡಬೇಡಿ ಎಂದು 'ಫೇಸ್ ದಿ ಟ್ರೂತ್' ಶೀರ್ಷಿಕೆಯಡಿ ಪ್ರಾಣಿ ಹಕ್ಕು ಹೋರಾಟಗಾರರು ಜಾಗೃತಿ ಮೂಡಿಸಿದರು.

ಮೈಸೂರು, ಅ.26(ಎಸ್‌ಪಿಎನ್)– ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ಪ್ರಾಣಿಗಳನ್ನು ಸಮುದಾಯ ಆರ್ಥಿಕತೆಯ ಭಾಗವಾಗಿ ನೋಡಬೇಡಿ, ಬದಲಾಗಿ ಪ್ರಾಣಿಗಳು ಪ್ರಕೃತಿಯ ಒಂದು ಭಾಗ ಎಂದು ಪರಿಗಣಿಸಿ ಎಂದು 'ಫೇಸ್ ದಿ ಟ್ರೂತ್' ಶೀರ್ಷಿಕೆಯಡಿ ವೀಗನ್ ಇಂಡಿಯಾ ಮೂವ್ಮೆಂಟ್ (ವಿಐಎಂ), ಬೆಂಗಳೂರು ಬ್ರಿಗೇಡ್ ಫಾರ್ ಅನಿಮಲ್ ಲಿಬರೇಷನ್ (ಬಿಬಿಎಎಲ್) ಹಾಗೂ ವೀಗನ್ ಆಫ್ ಮೈಸೂರು ಪದಾಧಿಕಾರಿಗಳು ಟೌನ್‌ಹಾಲ್ ಬಳಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಮೈಸೂರಿನ ವಿವಿಧ ಭಾಗಗಳಿಂದ ಬಂದಿದ್ದ ಪ್ರಾಣಿ ಹಕ್ಕುಗಳ ಹೋರಾಟಗಾರರು ಹಾಲು, ಮಾಂಸ, ಮೊಟ್ಟೆ, ಉಡುಪು, ಮನರಂಜನೆ ಮತ್ತು ಇತರೆ ಕೈಗಾರಿಕಾ ಸ್ಥಳಗಳಲ್ಲಿ ನಡೆಯುವ ಪ್ರಾಣಿಗಳ ಶೋಷಣೆ ಕ್ರೂರತೆಯಿಂದ ಕೂಡಿದೆ. ಈ ವಾಸ್ತವಾಂಶಗಳನ್ನು ಜನತೆಗೆ ತೋರಿಸುವುದೇ ಈ ಜಾಗೃತಿಯ ಉದ್ದೇಶ. ಪ್ರಾಣಿಗಳು ವಸ್ತುಗಳು ಅಥವಾ ಉತ್ಪನ್ನಗಳಲ್ಲ. ಅವುಗಳಿಗೂ ಜೀವನದ ಮೌಲ್ಯ ಮತ್ತು ಸಂವೇದನೆಯಿದೆ ಎಂಬುದನ್ನು ಕೆಲ ಪಾದಚಾರಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಜೊತೆಗೆ ಪ್ರಾಣಿ ಶೋಷಣೆಯ ಫಲಕಗಳನ್ನು ಪ್ರದರ್ಶಿಸಿದರು. ಸಾರ್ವಜನಿಕರು ಪ್ರಾಣಿಗಳ ಬಗ್ಗೆ ಅವರ ದೃಷ್ಟಿಕೋನವನ್ನು ಬದಲಿಸಿಕೊಳ್ಳುವಂತೆ ಮನವಿ ಮಾಡಿದರಲ್ಲದೆ, ಆಹಾರ, ಉಡುಪು, ಮನರಂಜನೆ ಅಥವಾ ಸಂಶೋಧನೆಗಾಗಿ ಪ್ರಾಣಿಗಳನ್ನು ಶೋಷಿಸುವ ಹಕ್ಕು ನಮಗಿಲ್ಲ. ಪ್ರಾಣಿಗಳು ನಮ್ಮಂತೆಯೇ ನೋವು, ಸಂತೋಷ ಮತ್ತು ಭಯವನ್ನು ಅನುಭವಿಸುವ ಸಂವೇದನಾಶೀಲ ಜೀವಿಗಳು ಎಂದು ಎಲ್ಲರೂ ಭಾವಿಸಬೇಕು ಎಂದರು.

ಈ ವೇಳೆ ಹೋರಾಟಗಾರರಾದ ಅಮ್ಜೋರ್ ಚಂದ್ರನ್, ದೀಲೀಪ್‌ಕುಮಾರ್, ನಾಗೇಶ್ ಉಡುಪ, ಸಿಂಚನ, ಶುಭದಾ, ತುಳಸಿದೀಪಕ್, ಸಂಜೀವ್, ರಾಹುಲ್ ರವಿಹಾಲ್, ವಸುದಾ, ಅನುರಾಗ್, ಜೀವನ್, ಅಭಿಷೇಕ್ ಸೇರಿದಂತೆ ಇತರರಿದ್ದರು.

ನ.2, ವಿಶೇಷಚೇತನರಿಗೆ ಕೃತಕ ಕೈ, ಕಾಲಿನ ಅಳತೆ ತೆಗೆದುಕೊಳ್ಳುವ ಕಾರ್ಯಕ್ರಮ

ಮೈಸೂರು,ಅ.26(ಜಿಎ)–ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆ, ಆರ್‌ಬಿಐ ನೋಟು ಮುದ್ರಣ ಘಟಕ, ಆಶ್ರಯ್ ಸೇವಾ ಸಂಸ್ಥಾನ್, ಜೈನ್ ಮಿಲನ್ ಚಾರಿಟಬಲ್ ಟ್ರಸ್ಟ್‌ಗಳ ಸಂಯುಕ್ತಾಶ್ರಯದಲ್ಲಿ ನ.2ರಂದು ನಜರ್‌ಬಾದ್ ಬಳಿಯ ಸಮತ ಭವನ್‌ನಲ್ಲಿ ವಿಶೇಷ ಚೇತನರಿಗೆ ಮಾಡ್ಯುಲರ್ ಕೃತಕ ಅಂಗಗಳ ಕೈ, ಕಾಲಿನ ಅಳತೆ ಪಡೆಯಲಾಗುವುದು ಎಂದು ಲಯನ್ಸ್ ಸಂಸ್ಥೆಯ ಕಾರ್ಯದರ್ಶಿ ಹೇಮಂತ್‌ಕುಮಾರ್ ಬನ್ಸಾಲಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1991ರಿಂದ ಕೃತಕ ಅಂಗಗಳ ಕೈ, ಕಾಲನ್ನು ಉಚಿತವಾಗಿ ನೀಡಲಾಗುತ್ತಿದೆ. ಅದರಂತೆ ಈ ಬಾರಿ 200 ಮಂದಿಗೆ ನೀಡಲು ನಿರ್ಧರಿಸಿದ್ದು, ಅಂದು ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಅಳತೆ ಪಡೆದು, ಮುಂದಿನ 45 ದಿನಗಳೊಳಗೆ ಕೃತಕ ಕೈ, ಕಾಲು ವಿತರಿಸಲಾಗುವುದು. ಶಿಬಿರಕ್ಕೆ ಬರುವವರು ಆಧಾರ್ ಕಾರ್ಡ್, ಅಂಗವಿಕಲರ ಪೂರ್ಣ ಭಾವಚಿತ್ರ, ಅಂಗವಿಕಲತೆಯ ಪ್ರಮಾಣ ಪತ್ರ(ವೈದ್ಯರು ನೀಡಿರುವುದು), ಇಲ್ಲವಾದರೆ ಸ್ಥಳ ದಲ್ಲಿಯೇ ವೈದ್ಯರು ತಪಾಸಣೆ ಮಾಡು ಕೃತಕ ಕಾಲು, ಕೈ ಅಗತ್ಯತೆ ಬಗ್ಗೆ ವರದಿ ನೀಡುತ್ತಾರೆ. ಈಗಾಗಲೇ ಮೈಸೂರು, ನಂಜನಗೂಡು, ಹುಬ್ಬಳ್ಳಿ–ಧಾರವಾಡ, ಸೇರಿದಂತೆ ರಾಜ್ಯನಾನ ಭಾಗದಿಂದ ನೋಂದಣಿಯಾಗಿದೆ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ, ಸಿ.ಎನ್. ಮಂಜೇಗೌಡ, ಡಾ.ಶುಶ್ರೂತ್‌ಗೌಡ, ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ಕೆ.ಎಸ್.ರಾಘವೇಂದ್ರ ಮತ್ತಿತರರು ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9342188160, 9845284727, 9886166243 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಾವೀರ್ ಚಂದ್ ಬನ್ಸಾಲಿ, ಗೋಲ್ಡನ್ ಸುರೇಶ್, ಎಸ್.ಪ್ರಮೀಳ, ಎಂ.ಎಂ.ರಮೇಶ್, ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಸ್ತನ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದವರು ವೈದ್ಯರೊಂದಿಗೆ ವಾಕ್

ಮಾರಕ ರೋಗದ ಬಗ್ಗೆ ವಿಶಿಷ್ಟ ಜಾಗೃತಿ



ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸ್ತನ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದವರು ವೈದ್ಯರೊಂದಿಗೆ ರಾಂಪ್ ಮೇಲೆ ಹೆಜ್ಜೆ ಹಾಕಿದರು.

ಮೈಸೂರು, ಅ.26(ವಿವಿಹೆಚ್)– ವಿಶ್ವ ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಭಾರತ್ ಆಸ್ಪತ್ರೆ ಮತ್ತು ಆಂಕೋಲಾಜಿ ಇನ್‌ಸ್ಟಿಟ್ಯೂಟ್ (ಬಿಹೆಚ್‌ಐಓ) ಆಯೋಜಿಸಿದ್ದ ಭಾವನಾತ್ಮಕ ಮತ್ತು ಸ್ಫೂರ್ತಿದಾಯಕ ಕಾರ್ಯಕ್ರಮದಲ್ಲಿ, ಸ್ತನ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದವರು ವೈದ್ಯರೊಂದಿಗೆ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ರಾಂಪ್ ಮೇಲೆ ಹೆಜ್ಜೆ ಹಾಕಿದರು.

ಈ ವಿಶಿಷ್ಟ ರಾಂಪ್ ವಾಕ್ ಧೈರ್ಯ, ಆತ್ಮವಿಶ್ವಾಸ ಮತ್ತು ಭಯದ ಮೇಲೆ ಭರವಸೆಯ ಜಯವನ್ನು ಸಂಕೇತಿಸಿತು. ಸ್ತನ ಕ್ಯಾನ್ಸರ್ ಮುಂಚಿತ ಪತ್ತೆ, ಸಮಯೋಚಿತ ಚಿಕಿತ್ಸೆ ಮತ್ತು ನಿಯಮಿತ ತಪಾಸಣೆಗಳ ಮಹತ್ವವನ್ನು ಸಾರ್ವಜನಿಕರಲ್ಲಿ ಬಲವಾಗಿ ಸಾರುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.

ಭಾರತ್ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆಯ ಡಾ.ಎಂ.ವಿಜಯ್‌ಕುಮಾರ್ ಮಾತನಾಡಿ, ಅಕ್ಟೋಬರ್ ತಿಂಗಳನ್ನು 'ಪಿಂಕ್ ಹೋಪ್ ತಿಂಗಳು' ಎಂದು ಕರೆದು, ಸ್ತನ ಕ್ಯಾನ್ಸರ್ ಜಾಗೃತಿಗೆ ಒತ್ತು ನೀಡಿದರು. ಇದು ಮಹಿಳೆಯರಲ್ಲಿ ಅತಿ ಸಾಮಾನ್ಯ ಕ್ಯಾನ್ಸರ್ ಆಗಿದೆ. ಮೊದಲ ಹಂತದಲ್ಲಿ ಪತ್ತೆಹಚ್ಚಿದರೆ ಸ್ತನ ಕ್ಯಾನ್ಸರ್ ಸಂಪೂರ್ಣ ಗುಣಪಡಿಸಬಹುದು. ಅವರು ನೋವಿಲ್ಲದ ಗಡ್ಡೆ ಕಂಡರೆ ತಕ್ಷಣ ವೈದ್ಯರನ್ನು ಸಂಪರ್ಕಿಸಲು ಮತ್ತು 40 ವರ್ಷ ಮೇಲ್ಪಟ್ಟ ಮಹಿಳೆಯರು ವಾರ್ಷಿಕ ಮ್ಯಾಮೋಗ್ರಫಿ ಮಾಡಿಸಿಕೊಳ್ಳಲು ಸಲಹೆ ನೀಡಿದರು.

ಶೇ.90ರಷ್ಟು ಸ್ತನ ಕ್ಯಾನ್ಸರ್‌ಗಳನ್ನು ಆರಂಭಿಕ ಪತ್ತೆಯಿಂದ ಗುಣಪಡಿಸಬಹುದು, ಆದರೆ ಭಾರತದಲ್ಲಿ ಶೇ.60ಕ್ಕಿಂತ ಹೆಚ್ಚು ಪ್ರಕರಣಗಳು ಮುಂದುವರಿದ ಹಂತದಲ್ಲಿ ಪತ್ತೆಯಾಗುತ್ತಿರುವುದು ಆತಂಕಕಾರಿ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ 63 ವರ್ಷದ ಸಾವಿತ್ರಿ ತಮ್ಮ ಅನುಭವವನ್ನು ಹಂಚಿಕೊಂಡರು. ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದ ಮಹಿಳೆಯರಾದ ಅರುಣ ಶರ್ಮ, ದೇವಕಿ, ಜಯಶ್ರೀ, ರಮಾ ಮತ್ತು ಸುಧಾ ಅವರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಭಾರತ್ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆಯ ಸಿಇಓ ಗೌತಮ್ ಧಾಮರ್ಲ, ನೆಕ್ಸಸ್ ಸೆಂಟರ್ ಹೆಡ್ ಕುಮಾರ್ ಮೋಹನನ್ ಮತ್ತು ಫ್ಯಾಷನ್ ಪಾಲುದಾರರಾದ ಮಾಡೆಲ್ ಆಕಾಂಕ್ಷಾಗೌಡ ಇನ್ನಿತರರಿದ್ದರು.

150 ವಿಶೇಷ ಚೇತನ ಮಕ್ಕಳಿಗೆ ಶ್ರವಣ ಸಾಧನ ವಿತರಣೆ



ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯಲ್ಲಿ ಶ್ರವಣದೋಷವುಳ್ಳ 150 ವಿಶೇಷಚೇತನ ಮಕ್ಕಳಿಗೆ ಶ್ರವಣ ಸಾಧನಗಳನ್ನು ಭಾನುವಾರ ವಿತರಣೆ ಮಾಡಲಾಯಿತು.

ಮೈಸೂರು, ಅ.26(ಎಂಕೆ)– ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯ ನಾಲೆಡ್ಜ್ ಪಾರ್ಕ್ ಸಭಾಂಗಣದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್, ಲಯನ್ಸ್ ಇಂಟರ್‌ನ್ಯಾಷನಲ್‌ನ ಲಯನ್ಸ್ ಕ್ಲಬ್ ಆಫ್ ಮೈಸೂರು, ನಿಸರ್ಗ ಮತ್ತು ಮಯೂರಿ ಹಾಗೂ ಬೆಂಗಳೂರಿನ ಕ್ಯಾನ್ ಫಿನ್ ಹೋಮ್ಸ್ ಲಿಮಿಟೆಡ್ ವತಿಯಿಂದ ಶ್ರವಣದೋಷವುಳ್ಳ 150 ವಿಶೇಷ ಚೇತನ ಮಕ್ಕಳಿಗೆ 'ಶ್ರವಣ ಸಾಧನ'ಗಳನ್ನು ವಿತರಣೆ ಮಾಡಲಾಯಿತು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸಿಎಸ್‌ಆರ್ ಉಪಕ್ರಮದಡಿ ಆಯೋಜಿಸಿದ್ದ ಶ್ರವಣ ಸಾಧನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿದ ಕ್ಯಾನ್ ಫಿನ್ ಹೋಮ್ಸ್ ಲಿಮಿಟೆಡ್‌ನ ಸಿಇಓ ಸುರೇಶ್ ಎಸ್.ಐಯ್ಯರ್, 5 ಶಾಲೆಗಳಿಂದ ಆಗಮಿಸಿದ್ದ ವಿಶೇಷ ಚೇತನ ಮಕ್ಕಳಿಗೆ ಶ್ರವಣ ಸಾಧನಗಳನ್ನು ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ವಿಶೇಷ ಚೇತನರಲ್ಲಿನ ದೈಹಿಕ ದೋಷವು ನ್ಯೂನತೆಯಲ್ಲ. ಅದಕ್ಕೂ ಹೆಚ್ಚಾಗಿ ಬೇರೊಂದು ವಿಶೇಷತೆ ಅವರಲ್ಲಿರುತ್ತದೆ. ಪ್ರತಿ ಮಕ್ಕಳು ವಿಶೇಷ ಪ್ರತಿಭೆಯನ್ನಿಟ್ಟುಕೊಂಡಿರುತ್ತಾರೆ. ಇಂತಹ ಮಕ್ಕಳಿಗೆ ಉಜ್ವಲವಾದ ಭವಿಷ್ಯವಿದೆ ಎಂದು ಹೇಳಿದರು. ಬದುಕಿನಲ್ಲಿ ಎಲ್ಲಾ ಸಮಸ್ಯೆಗಳನ್ನು ಎದುರಿಸುತ್ತಾ ಮುಂದೆ ಸಾಗಬೇಕು. ಕನಸಿನ ಗುರಿಯನ್ನು ಬೆನ್ನು ಹತ್ತಿ ಸಾಧಕರಾಗಿ ನಿಲ್ಲಬೇಕು. ಈ ನಿಟ್ಟಿನಲ್ಲಿ ಕ್ಯಾನ್ ಫಿನ್ ಹೋಮ್ಸ್ ಸಂಸ್ಥೆ ಸದಾ ನಿಮ್ಮೊಂದಿಗಿರುತ್ತದೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಅತ್ಯುತ್ತಮ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಪುಷ್ಪಾವತಿ ಮಾತನಾಡಿ, ಆಯಿಷ್ ಸಂಸ್ಥೆಯು 12 ರೀತಿಯ ಅಂಗವೈಕಲ್ಯತೆಗಳನ್ನು ಗುರುತಿಸಿ, ಚಿಕಿತ್ಸೆ ಜೊತೆಗೆ ಪುನರ್ವಸತಿ ಸೌಲಭ್ಯ ಕಲ್ಪಿಸುತ್ತಾ ಬಂದಿದೆ. ಪ್ರತೀ ವರ್ಷ 73 ಸಾವಿರ ಜನ ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಅವರಲ್ಲಿ ಬಹುತೇಕರು ಶ್ರವಣ ದೋಷವುಳ್ಳವರಾಗಿರುತ್ತಾರೆ ಎಂದು ತಿಳಿಸಿದರು.

ಶ್ರವಣ ದೋಷವುಳ್ಳ ಮಕ್ಕಳಿಗೆ ಶ್ರವಣ ಸಾಧನಗಳ ವಿತರಣಾ ಕಾರ್ಯಕ್ರಮ ಆಯೋಜನೆ ಶ್ಲಾಘನೀಯ. ಇತ್ತೀಚಿನ ವರ್ಷಗಳಲ್ಲಿ ತುಂಬಾ ಮಕ್ಕಳು ಶ್ರವಣ ದೋಷದಿಂದ ಜೀವನ ನಡೆಸುತಿದ್ದು, ಅವರಲ್ಲಿ ಹೆಚ್ಚಿನವರಿಗೆ ಮಾತು ಬರುವುದಿಲ್ಲ. ಕೇವಲ ಸನ್ನೆಯ ಮೂಲಕವೇ ವ್ಯವಹರಿಸುತ್ತಾರೆ. ಶ್ರವಣ ಸಾಧನದಿಂದ ಅವರಿಗೆ ಶಬ್ದಗಳನ್ನು ಗ್ರಹಿಸಲು ಅನುಕೂಲವಾಗಲಿದೆ. ಶ್ರವಣ ಸಾಧನಗಳನ್ನು ಉತ್ತಮವಾಗಿ ಹಾಗೂ ಸುರಕ್ಷಿತವಾಗಿ ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಲಿಕೆಗೆ ಉಪಯುಕ್ತ: ಶಬ್ದದ ಗ್ರಹಿಕೆಯಿಲ್ಲದೇ ಶಾಲೆಗಳಲ್ಲಿ ಪಾಠ ಕೇಳುತ್ತಿದ್ದ ವಿಶೇಷ ಚೇತನ ಮಕ್ಕಳಿಗೆ ಶ್ರವಣ ಸಾಧನ ಅಳವಡಿಕೆಯಿಂದ ಸನ್ನೆಯ ಜೊತೆಗೆ ಶಬ್ದಗಳನ್ನು ಕೇಳುವ ಭಾಗ್ಯ ದೊರೆತಿದೆ. ಇದರಿಂದ ಕಲಿಕೆಗೆ ಹೆಚ್ಚು ಉಪಯುಕ್ತವಾಗಲಿದೆ. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬುನಾದಿಯನ್ನು ತಾವೇ ನಿರ್ಮಿಸಿಕೊಳ್ಳುವಂತಾಗಲಿ. ಕೇವಲ ಶಾಲೆಗಳಲ್ಲಿ ಪಾಠವಲ್ಲದೇ, ಕೌಶಲ್ಯಗಳನ್ನು ಹೆಚ್ಚು ಹೆಚ್ಚು ಕಲಿಯಬೇಕು. ಸ್ವತಂತ್ರ ಬದುಕನ್ನು ನಡೆಸುವಂತಾಗಬೇಕು ಎಂದರು.

ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್ ಜನರಲ್ ಮ್ಯಾನೇಜರ್ ಪ್ರಕಾಶ್ ಶಾನ್ಭೋಗ್, ಉಪ ಮಹಾಪ್ರಬಂಧಕ ಪ್ರಶಾಂತ್ ಜೋಶಿ, ಕೆನರಾ ಬ್ಯಾಂಕ್ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಕೆ.ಎನ್.ಶಾಮರಾವ್, ಲಯನ್ಸ್‌ಕ್ಲಬ್ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಮೂರ್ತಿ, ಉಪಾಧ್ಯಕ್ಷ ಜೆ.ವಿ. ಮಹೇಶ್ ವರ್ಮ, ಲಯನ್ಸ್ ಕ್ಲಬ್ ಜಿಲ್ಲಾಧ್ಯಕ್ಷ ಕುಮಾರ್, ಪದಾಧಿಕಾರಿಗಳಾದ ಸುಮಿತ್ರಾ ಮೂರ್ತಿ, ಜಯಕುಮಾರ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಚಿತ್ರಕಲಾ ಸ್ಪರ್ಧೆಯಲ್ಲಿ ಅರಳಿದ ಕಲಾಂರ ಚಿತ್ರಗಳು





ಎಪಿಜೆ ಅಬ್ದುಲ್ ಕಲಾಂ ಅವರ 95ನೇ ಜನ್ಮ ದಿನೋತ್ಸವ ಅಂಗವಾಗಿ ಟೀಂ ಮೈಸೂರು ವತಿಯಿಂದ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಕಲಾಕುಂಚದಲ್ಲಿ ಕಲಾಂರ ಚಿತ್ರ ಬಿಡಿಸಿದರು. ಮತ್ತೊಂದು ಚಿತ್ರದಲ್ಲಿ ವಿಜೇತರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನಗದು ಹಾಗೂ ಸ್ಮರಣಿಕೆ ವಿತರಿಸಿದರು.

ಮೈಸೂರು,ಅ.26(ಜಿಎ)–ಎಪಿಜೆ ಅಬ್ದುಲ್ ಕಲಾಂ ಅವರ 95ನೇ ಜನ್ಮ ದಿನೋತ್ಸವ ಅಂಗವಾಗಿ ಟೀಂ ಮೈಸೂರು ವತಿಯಿಂದ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಸ್ಪರ್ಧಾಳುಗಳು ಪಾಲ್ಗೊಂಡು ಕಲಾಕುಂಚದಲ್ಲಿ ಕಲಾಂರ ಚಿತ್ರ ಬಿಡಿಸಿ, ನಗದು ಬಹುಮಾನ ಗಿಟ್ಟಿಸಿಕೊಂಡರು.

ಮೈಸೂರಿನ ಪೊಲೀಸ್ ಆಯುಕ್ತ ಕಚೇರಿ ಮುಂಭಾಗವಿರುವ ಮಕ್ಕಳ ಉದ್ಯಾನವನದಲ್ಲಿ 1ರಿಂದ 6ನೇ ತರಗತಿ, 7ರಿಂದ 10ನೇ ತರಗತಿ ಹಾಗೂ ಪಿಯುಸಿ ಮೇಲ್ಪಟ್ಟ ವಿದ್ಯಾರ್ಥಿಗಳಿಗಾಗಿ ಕಲಾಂ ಜೀವನ ಕುರಿತಂತೆ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ 160 ಸ್ಪರ್ಧಾಳುಗಳು ಪಾಲ್ಗೊಂಡು ಚಿತ್ರ ಬಿಡಿಸಿದರು. ಮೂರು ವಿಭಾಗದ ವಿಜೇತರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಶಾಸಕ ಟಿ.ಎಸ್.ಶ್ರೀವತ್ಸ ನಗದು ಹಾಗೂ ಸ್ಮರಣಿಕೆ ವಿತರಿಸಿದರು.

1ರಿಂದ 6ನೇ ತರಗತಿ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ನಿರ್ಮಲ ಕಾನ್ವೆಂಟ್‌ನ ಸ್ನೇಹಾರ್ಚನ, ಭಾರತೀಯ ವಿದ್ಯಾಭವನ ಶಾಲೆಯ ತೀರ್ಥ ಬಿ.ಸೋನಿ ದ್ವಿತೀಯ ಹಾಗೂ ಲೀಡ್ಸ್ ಕೇಂದ್ರಿಯ ವಿದ್ಯಾಲಯದ ಜಿ.ನಮಿತ್ ತೃತೀಯ ಬಹುಮಾನ ಪಡೆದುಕೊಂಡರು.

7ರಿಂದ 10ನೇ ತರಗತಿ ವಿಭಾಗದಲ್ಲಿ ಸೋಸಲೆಯ ಆದರ್ಶ ವಿದ್ಯಾಲಯದ ವಿ.ಜಗದೀಶ್ ಪ್ರಥಮ, ಕ್ಯಾಪಿಟಲ್ ಪಬ್ಲಿಕ್ ಶಾಲೆಯ ಪಾವನಿ ದ್ವಿತೀಯ, ಎಸ್‌ಜೆಸಿಯ ಎಸ್.ಕ್ಷಿತಿ ತೃತೀಯ ಬಹುಮಾನ ತಮ್ಮದಾಗಿಸಿಕೊಂಡರು. ಪಿಯುಸಿ ಮೇಲ್ಪಟ ವಿದ್ಯಾರ್ಥಿಗಳ ವಿಭಾಗದಲ್ಲಿ ಬಿಜಿಎಸ್ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿನಿ ಬಿ.ತೇಜಸ್ವಿನಿ ಪ್ರಥಮ, ಕಾವ ಕಾಲೇಜಿನ ಕೆ.ಸುನೀಲ್ ಕುಮಾರ್ ದ್ವಿತೀಯ ಹಾಗೂ ಜೆಟಿಟಿಸಿ ಕಾಲೇಜಿನ ಎಂ.ಅಮೃತ್ ತೃತೀಯ ಬಹುಮಾನ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಟೀ ಮೈಸೂರು ತಂಡದ ಮುಖ್ಯಸ್ಥ ಗೋಕುಲ ಗೋವರ್ಧನ್, ಕಿರಣ್, ಜಯರಾಮ್, ಮನೋಹರ್, ಹಿರಿಯಣ್ಣ, ರಾವ್ ಪ್ರಸಾದ್, ಅನಿಲ್‌ಜೈನ್, ಹರೀಶ್, ಕುಮಾರ್, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಸುವರ್ಣ ಮಹೋತ್ಸವ

ಮೈಸೂರು: ಜಿಲ್ಲಾಡಳಿತ, ಮೈಸೂರು ಮತ್ತು ಕೊಡಗು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಚೇರಿ, ಮೈಸೂರು ಮತ್ತು ಕೊಡಗು ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪನೆಗೊಂಡು 50 ವರ್ಷಗಳಾದ ಹಿನ್ನೆಲೆ ಅ.27ರಂದು ಬೆಳಗ್ಗೆ 10 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಸುವರ್ಣ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಉಪಸ್ಥಿತಿಯಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.10.2025 ಸೋಮವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಬೆಳಗ್ಗೆ 6 ಗಂಟೆಗೆ ಗಂಗಾ ಪೂಜೆಯೊಂದಿಗೆ ಕಳಸ ತರುವುದು, ಶ್ರೀ ಸ್ವಾಮಿಯ ಕಳಸ ಸ್ಥಾಪನೆ, ಶ್ರೀ ಗಣಪತಿ ಪೂಜೆ, ಶ್ರೀ ಶನೇಶ್ವರ ಸ್ವಾಮಿ ಪೂಜೆ, 7.30ಕ್ಕೆ ಮಹಾ ರುದ್ರಾಭಿಷೇಕ, 8.30ಕ್ಕೆ ಗರಡಿಕೇರಿ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಿಂದ 11ನೇ ವರ್ಷದ ಹಾಲರವಿ ಕಳಸ ದೇವಸ್ಥಾನಕ್ಕೆ ತರುವುದು, ಬೆಳಗ್ಗೆ 11ಕ್ಕೆ ಶ್ರೀ ಸ್ವಾಮಿಯ ಸುವರ್ಣ ಕೊಳಗಕ್ಕೆ ವಿಶೇಷ ಅಭಿಷೇಕ, ಶ್ರೀ ಮಲೆ ಮಹದೇಶ್ವರ ಸ್ವಾಮಿ ಮಹಾ ಹೋಮ, ಪೂರ್ಣಾಹುತಿ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ದೀಪೋತ್ಸವ, ಸಂಜೆ 6 ಗಂಟೆಗೆ ಶ್ರೀ ಮಲೆ ಮಹದೇಶ್ವರ ಕಂಸಾಳೆ ತಂಡದ ಶ್ರೀ ಕೈಲಾಸ ಮೂರ್ತಿ ಮತ್ತು ವೃಂದದವರಿಂದ ಕಂಸಾಳೆ ಮತ್ತು ಜಾನಪದ ಗೀತೆ, ಸಂಜೆ 7 ಗಂಟೆಗೆ ಶ್ರೀ ಶಂಕರಿ ಸುಗಮ ಸಂಗೀತ ತಂಡದಿಂದ ಭಜನೆ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಮತ್ತು ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ, ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳಗ್ಗೆ 10.30ಕ್ಕೆ ಸುಮಂಗಲಿಯರ ಪೂಜೆ, ಪ್ರಾಕಾರದ ಉತ್ಸವ, ಸಂಜೆ 7.30ಕ್ಕೆ ರಾಜಬೀದಿಗಳಲ್ಲಿ ಶ್ರೀ ಶಿವಪಾದ, ಗುರುಸೇವಾ, ನಂದಿಧ್ವಜದ ಜೊತೆಗೆ ಉತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಶ್ರೀ ಆವನಿ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ (ಶ್ರೀ ಆವನಿ ಶೃಂಗೇರಿ ಮಠ, ಮೈಸೂರು ಶಾಖೆ):** ಶ್ರೀ ವಿಶ್ವಾವಸುನಾಮ ಸಂವತ್ಸರ–2025 ಕಾರ್ತಿಕ ಮಾಸದ ವಿಶೇಷ ಪೂಜೆ, ಬೆಳಗ್ಗೆ 8ಕ್ಕೆ ಮಹಾ ಸಂಕಲ್ಪ, ಅಭಿಷೇಕ ಮತ್ತು ವಿಶೇಷ ಪೂಜೆ, ಮಹಾಮಂಗಳಾರತಿ, ಸಂಜೆ 6.30ಕ್ಕೆ ಡಾ.ಕೃ.ಪಾ. ಮಂಜುನಾಥ್ (ಕನ್ನಡ ಉಪನ್ಯಾಸಕರು ಮತ್ತು ಗಮಕ ವ್ಯಾಖ್ಯಾತೃ) ಅವರಿಂದ ಉಪನ್ಯಾಸ, ವಿಷಯ: ಹರಿಹರ ವಿರಚಿತ ಕೋಳೂರು ಕೊಡಗೂರು ರಗಳೆಯಲ್ಲಿನ ಮುಗ್ಧಭಕ್ತಿ, ರಾತ್ರಿ 8.15ಕ್ಕೆ ದೀಪಾರಾಧನೆ, ಮಹಾಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಲಕ್ವ/ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ), ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಉಬ್ಬಿದ ರಕ್ತನಾಳ, ಮೊಡವೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಎಸ್‌ಎಫ್‌ಐ:** ಶೈಕ್ಷಣಿಕ ಜಾಥಾಕ್ಕೆ ಸ್ವಾಗತ, ಸ್ಥಳ: ಹಳೇ ಡಿಸಿ ಕಚೇರಿ ಬಳಿ, ಬೆಳಗ್ಗೆ 11ಕ್ಕೆ.

■ **ಮಹಾರಾಜ ಕಾಲೇಜು (ಮೈಸೂರು ವಿವಿ):** ಸ್ವಾಗತ ಮತ್ತು ಅಭಿವಿನ್ಯಾಸ ಕಾರ್ಯಕ್ರಮ–2025–26, ಉದ್ಘಾಟನೆ: ಉಪನ್ಯಾಸಕ ನಾಗರಾಜ್ ಬೀಜಗನಹಳ್ಳಿ, ಅಧ್ಯಕ್ಷತೆ: ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ. ಹೆಚ್.ಸಿ. ದೇವರಾಜೇಗೌಡ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಮುನಿರಾಜ ರೆಂಜಾಳ, 6.15–ಗೀತಾರಾಧನ, 6.35, ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಿ.ಪುಷ್ಪಲತಾ. ವ್ಯಾಖ್ಯಾನ–ಡಾ.ಲತಾ ಮೈಸೂರು, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, ಬಿ.ಸುನಂದ ದಿಲೀಪ್, 7.45–ಚಿತ್ರಗೀತೆಗಳು, 8.30–ಚಿತ್ರಗೀತೆಗಳು, 9.05–ಸ್ತನ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ) 1.ಕುವೆಂಪು ಅವರ ಆತ್ಮಚರಿತ್ರೆ ನೆನಪಿನ ದೋಣಿಯಲ್ಲಿ ಪ್ರಸ್ತಾಪಿತವಾಗಿರುವ ಮಾನವ ಜನ್ಮ ದೊಡ್ಡದು ಕುರಿತು ಕುವೆಂಪು ಅವರೇ ಮಾಡಿರುವ ಭಾಷಣದ ಧ್ವನಿ ಮುದ್ರಣ, 2. ಭಾರತೀಯ ಸಂಸ್ಕೃತಿ ಹಾಗೂ ಸಂಸ್ಕೃತ ಭಾಷೆ ಈ ಕುರಿತು ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಕೃಷ್ಣಮೂರ್ತಿ ಅವರು ಮಾಡಿರುವ ಭಾಷಣದ ಧ್ವನಿಮುದ್ರಣ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ನಿಲಯದ ಕಲಾವಿದರಿಂದ ನಾದಲಹರಿ, ನಿರ್ದೇಶನ–ತುಮಕೂರು. ಬಿ.ರವಿಶಂಕರ್, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ–ವಿಶ್ವ ಸ್ಟ್ರೋಕ್ ದಿನಾಚರಣೆ ಸಂದರ್ಭದಲ್ಲಿ ಪಾರ್ಶ್ವವಾಯು ಅಂದರೆ ಸ್ಟ್ರೋಕ್ ಕಾರಣಗಳು ಮತ್ತು ಚಿಕಿತ್ಸೆ ಕುರಿತು ನರರೋಗ ಮತ್ತು ರಕ್ತನಾಳ ತಜ್ಞರಾದ ಮೈಸೂರಿನ ಡಾ.ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಅಟಲ್ ಪಿಂಚಣಿ ಯೋಜನೆ ಕುರಿತು ಮಾಹಿತಿ. 1.20–ಭಾವಗೀತೆಗಳು–ಜಿ.ಎಸ್.ಲಕ್ಷ್ಮಿ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕುನ್ನಕುಡಿ ವೈದ್ಯನಾಥನ್–ವೈಯೋಲಿನ್ ವಾದನ, 4.00 ಮಹಿಳಾರಂಗ–ಭಾವಸಂಗಮ, ಭಾವಗೀತೆಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ: ಕವಿತಾ, 4.30–ಹಿಂದಿ ಚಿತ್ರಗೀತೆಗಳು, 4.45–ಹಿಂದಿ ಪಾಠ–ಪ್ರಸ್ತುತಿ: ಸ್ಮಿತಾ ಚಿಪ್ಳೂಣ್ಕರ್, 5.00–ತುರ್ತು ಚಿಕಿತ್ಸೆ ಕುರಿತ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ–ಕ್ರಿಟಿಕಲ್ ಕೇರ್ ಅಂದರೆ ತೀವ್ರನಿಗಾ ಚಿಕಿತ್ಸೆಯ ಮಹತ್ವ ಹಾಗೂ ಅಗತ್ಯ ಕುರಿತು ತಿಳಿಸಿಕೊಡಲಿದ್ದಾರೆ ಭಾರತೀಯ ತೀವ್ರನಿಗಾ ಚಿಕಿತ್ಸಾ ತಜ್ಞ ವೈದ್ಯರ ಸಂಘ, ಮೈಸೂರು ಘಟಕದ ಅಧ್ಯಕ್ಷರಾದ ಡಾ.ವೈದ್ಯನಾಥನ್.ಆರ್, ಸಂಸ್ಥಾಪಕ ಕಾರ್ಯದರ್ಶಿ ಡಾ.ರಘುನಾಥ್ ಹಾಗೂ ನಿಕಟಪೂರ್ವ ಅಧ್ಯಕ್ಷ ಡಾ.ಮಹದೇವ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ ಮತ್ತು ಡಾ.ಕುಲದೀಪ್.ಎನ್, ಪ್ರಾಯೋಜಕರು–ಭಾರತೀಯ ತೀವ್ರನಿಗಾ ಚಿಕಿತ್ಸಾ ತಜ್ಞ ವೈದ್ಯರ ಸಂಘ, ಮೈಸೂರು ಘಟಕ, ಮೈಸೂರು. 5.35–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಸಿಹಿನೀರಿನಲ್ಲಿ ಮುತ್ತು ಕೃಷಿ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ವೆಂಕಟಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಯುವ ಸೆಲೆಬ್ರಿಟಿ ಧಾರಾವಾಹಿ ಕಲಾವಿದ ಮೈಸೂರಿನ ಋತ್ವಿಕ್ ಕೃಪಾಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ದಿಗ್ವಿಜಯ್.ಬಿ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಅರಿಯಾಕುಡಿ ರಾಮಾನುಜ ಅಯ್ಯಂಗಾರ್–ಹಾಡುಗಾರಿಕೆ, 10.00 ನಿನಾದ: ವೈಣಿಕ ವಾಗ್ಗೇಯ ವಾಹಿನಿ, 10.30–ಸವಿನೆನಪು.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ಇಂಡಕ್ಷನ್ ಕಾರ್ಯಕ್ರಮ (ಬಿಎಸ್ಸಿ (ಎನ್), ಪಿಬಿ ಬಿಎಸ್ಸಿ(ಎನ್) ಮತ್ತು ಎಂಎಸ್‌ಸಿ(ಎನ್), ಸ್ಥಳ: ಶ್ರೀ ರಾಜೇಂದ್ರ ಸೆಂಟಿನರಿ ಆಡಿಟೋರಿಯಂ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11 ಗಂಟೆಗೆ.

■ **ಶಾರದಾ ವಿಲಾಸ ಕಾಲೇಜು (ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಅಂಡ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಪಿಜಿ ಸೆಂಟರ್ ಎಂಕಾಂ):** ಕಾಮರ್ಸ್ ವೀಕ್–2025, ಸ್ಥಳ: ವೆಂಕಟಕೃಷ್ಣಯ್ಯ ಹಾಲ್, ಶಾರದಾ ವಿಲಾಸ್ ವಿದ್ಯಾ ಸಂಸ್ಥೆ ಆವರಣ, ಬೆಳಗ್ಗೆ 11 ಗಂಟೆಗೆ.

■ **ಕರ್ನಾಟಕ ಸೇನಾಪಡೆ:** ಮಹಾತ್ಮ ಗಾಂಧೀಜಿ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ಮಹಾತ್ಮ ಗಾಂಧೀಜಿ ಸದ್ಭಾವನ ಪ್ರಶಸ್ತಿ ಪ್ರದಾನ ಹಾಗೂ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ದಿವ್ಯ ಸಾನ್ನಿಧ್ಯ: ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪುಷ್ಪಾರ್ಚನೆ: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ರೋಟರಿ ಶಾಖೆ ಸಭಾಂಗಣ, ಮುಡಾ ಎದುರು, ಬೆಳಗ್ಗೆ 11.30ಕ್ಕೆ.

■ **ಶ್ರೀ ಸಂಗಮೇಶ್ವರ ದೇವಸ್ಥಾನ:** ಕಾರ್ತಿಕ ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವ, ಶರಣ ಚಿಂತನೆ,ದಿವ್ಯ ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳು, ಉದ್ಘಾಟನೆ: ಶ್ರೀ ನೀಲಕಂಠೇಶ್ವರ ಮಠದ ವಿದ್ವಾನ್ ಶ್ರೀ ಸಿದ್ದಮಲ್ಲಸ್ವಾಮಿಗಳು, ಸಮ್ಮುಖ: ನಂಜನಗೂಡು ತಾಲೂಕು ಶ್ರೀ ವಿರಕ್ತ ಮಠದ ಶ್ರೀ ಸದಾಶಿವ ಸ್ವಾಮಿ, ಉಪನ್ಯಾಸ: ಶರಣ ಚಿಂತಕ ಶ್ರೀ ಶಂಕರ ದೇವನೂರು, ವಿಷಯ: ಶರಣರ ಮೌಲಿಕ ಚಿಂತನೆ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಉಪನ್ಯಾಸ ಸಂಜೆ 7 ಗಂಟೆಗೆ, ಮಹಾಪ್ರಸಾದ ರಾತ್ರಿ 8 ಗಂಟೆಗೆ.

ಮೈಸೂರಿನ ರಾಷ್ಟ್ರಮಟ್ಟದ ಶೋನಲ್ಲಿ

ಮುದ್ದು ಶ್ವಾನಗಳ ದರ್ಬಾರ್



ಮೈಸೂರಿನ ಬೋಗಾದಿ ಅನುಷ್ ಅವರ ಬೆಲ್ಜಿಯನ್ ಮೆಲನಿಯಸ್ ತಳಿಯ ಶ್ವಾನ ಚೆಂಡನ್ನು ಹಿಡಿಯಲು ಮೇಲಕ್ಕೆ ಹಾರುತ್ತಿರುವುದು.



ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಅವರು 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ದಿವಂಗತ ಡಾ.ಕೆ.ಬಿ.ಗಣಪತಿ ಹಾಗೂ ಮಾಜಿ ಶಾಸಕ ದಿ.ವಾಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಡಾಗ್ ಶೋ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



52 ತಳಿಗಳ 432 ಶ್ವಾನಗಳು ಸ್ಪರ್ಧೆಯಲ್ಲಿ ಭಾಗಿ

ಮೈಸೂರು,ಅ.26(ಎಂಟಿವೈ)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಭಾನುವಾರ ಮುದ್ದು ಶ್ವಾನಗಳ ದರ್ಬಾರ್ ನಡೆಯಿತು. ಎಲ್ಲಿ ನೋಡಿದರೂ ಒಂದಕ್ಕಿಂತ ಒಂದು ಸುಂದರ ಶ್ವಾನಗಳೇ ವಯ್ಯಾರ ಪ್ರದರ್ಶಿಸಿ ಗಮನ ಸೆಳೆದವು.

ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ಆಯೋಜಿಸಿದ್ದ 11ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆ, ತಮಿಳುನಾಡು, ಕೇರಳ, ಆಂಧ್ರ, ತೆಲಂಗಾಣ, ರಾಂಚಿ ಸೇರಿದಂತೆ ವಿವಿದೆಡೆಯಿಂದ ಆಗಮಿಸಿದ್ದ 52 ತಳಿಗಳ 432 ಶ್ವಾನಗಳು ವಿವಿಧ ವಿಭಾಗದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ತಮ್ಮ ಸಾಮರ್ಥ್ಯ ಪ್ರದರ್ಶಿಸಿದವು. 11 ಗ್ರೂಪ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಶ್ವಾನಗಳು ತಮ್ಮ ಮಾಲೀಕರ ಆಜ್ಞೆಯನ್ನು ಪಾಲಿಸುವ ಮೂಲಕ ಸೈ ಎನಿಸಿಕೊಂಡವು.

ಚಾಲನೆ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆಯೋಜಿಸಿದ್ದ ಡಾಗ್ ಶೋಗೆ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ದಿವಂಗತ ಡಾ.ಕೆ.ಬಿ. ಗಣಪತಿ ಹಾಗೂ ಮಾಜಿ ಶಾಸಕ ದಿ.ವಾಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕರಾದ ಜಿ.ಟಿ.ದೇವೇ ಗೌಡ, ಟಿ.ಎಸ್.ಶ್ರೀವತ್ಸ ಚಾಲನೆ ನೀಡಿ, ಶ್ವಾನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಶ್ವಾನ ಕರೆತಂದಿರುವ ಪಾಲಕರಿಗೆ ಶುಭ ಕೋರಿದರು.



ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಶ್ವಾನಗಳಿಗೆ ಕೆಲ ಮಾನದಂಡ ನಿಗದಿ ಮಾಡಲಾಗಿತ್ತು. ಆರೋಗ್ಯವಂತ ಹಾಗೂ ಮೈಕ್ರೋ ಚಿಪ್ ಅಳವಡಿಸಿರುವ ಮತ್ತು ನೋಂದಣಿ ಮಾಡಿ ಕೊಂಡಿರುವ ಶ್ವಾನಗಳಿಗೆ ಮಾತ್ರ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು.

> **ದೇಸಿ ತಳಿಗೆ ಪ್ರಾಮುಖ್ಯತೆ ನೀಡಿ**
>
> ಮೈಸೂರಲ್ಲಿ ಶ್ವಾನ ಪ್ರದರ್ಶನ ನಡೆಸುತ್ತಿರುವುದು ಒಳ್ಳೆಯ ಬೆಳವಣಿಗೆ. ಶ್ವಾನ ಪ್ರದರ್ಶನಗಳಲ್ಲಿ ದೇಸಿ ತಳಿಯ ಶ್ವಾನಗಳ ಪ್ರದರ್ಶನಕ್ಕೆ ಆಧ್ಯತೆ ನೀಡಬೇಕು. ದೇಸಿ ತಳಿಯ ಶ್ವಾನಗಳ ಸಂರಕ್ಷಣೆಗೆ ಎಲ್ಲರೂ ಮುಂದಾಗಬೇಕು.
>
> – ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು.

ಯಾವ ತಳಿ: ಸ್ಪರ್ಧೆಯಲ್ಲಿ ಚಿಕ್ಕ ಶ್ವಾನವಾದ ಮಿನಿಯೇಚರ್ ಪಿಂಚರ್, ಅತಿ ದೊಡ್ಡ ಗಾತ್ರದ ಶ್ವಾನವಾದ ಸೇಂಟ್ ಬರ್ನಾಡ್, ಗ್ರೇಟ್ ಡೇನ್, ಇಂಗ್ಲೀಷ್ ಮ್ಯಾಸ್ತೀಫ್, ಬುಲ್‌ಡಾಗ್, ಸೈಬೀರಿಯನ್ ಹಸ್ಕಿ, ಗೋಲ್ಡನ್ ರಿಟ್ರೀವರ್, ಲ್ಯಾಬ್ರಡಾರ್ ರಿಟ್ರೀವರ್, ಜರ್ಮನ್ ಶೆಫರ್ಡ್, ಪಗ್, ಚೌಚೌ, ಸ್ವಿಡ್ಸ್ ಸೇರಿದಂತೆ ಇನ್ನಿತರ ತಳಿಗಳ ಶ್ವಾನಗಳು ಶ್ವಾನ ಪ್ರದರ್ಶನದಲ್ಲಿ ಎಲ್ಲರ ಮನಸೂರೆಗೊಂಡವು.

ಅಲ್ಲದೆ, ದೇಸಿ ತಳಿಗಳಾದ ಮುಧೋಳ್, ಕೋಂಬಾಯ್, ಕ್ಯಾರವಾನ್ ಹೌಂಡ್, ರಾಜ್ಯಪಾಳ್ಯಂ ಸೇರಿದಂತೆ ಇನ್ನಿತರ ಶ್ವಾನಗಳ ಪ್ರದರ್ಶನಕ್ಕೂ ಹೆಚ್ಚಿನ ಆಧ್ಯತೆ ನೀಡಲಾಗಿತ್ತು. ವಿವಿದೆಡೆಯಿಂದ ಶ್ವಾನ ಪ್ರಿಯರು ತಾವು ಸಾಕಿರುವ ದೇಸಿ ತಳಿಯ ಶ್ವಾನಗಳನ್ನು ಪ್ರದರ್ಶನಕ್ಕೆ ತಂದಿದ್ದರು.



ಮೈಸೂರಿನ ಸಿದ್ಧಾರ್ಥನಗರದ ವಿದ್ಯಾಸಾಗರ ಸಾಕಿರುವ ಗ್ರೇಸಿ ಹೆಸರಿನ ಶ್ವಾನವನ್ನು ಬಾಲಕಿಯೊಬ್ಬಳು ಕುತೂಹಲದಿಂದ ನೋಡುತ್ತಿರುವುದು.


ಶ್ವಾನಗಳಿಗೆ ಎಲ್ಲಿಲ್ಲದ ಕೇರ್: ಬಹುತೇಕ ಶ್ವಾನಗಳಿಗೆ ಬಿಸಿಲಿನ ಬೇಗೆಯಿಂದ ಸಂರಕ್ಷಿಸಲು ಶ್ವಾನಗಳ ಮಾಲೀಕರು ತಮ್ಮ ಕಾರ್‌ನಲ್ಲಿ ಎಸಿ ಆನ್ ಮಾಡಿ, ಕಾರೊಳಗೆ ಶ್ವಾನಗಳನ್ನಿರಿಸಿದ್ದರು. ಅಲ್ಲದೆ, ಪದೇ ಪದೆ ಶ್ವಾನಗಳ ಮೈಮೇಲೆ ನೀರನ್ನು ಸಿಂಪಡಿಸಿ ದೇಹ ತಣಿಸುತ್ತಿದ್ದರು. ಮಂಜುಗಡ್ಡೆ(ಐಸ್ ಟ್ಯೂಬ್)ಯನ್ನು ಬಟ್ಟೆಯಲ್ಲಿ ಸುತ್ತಿ ಶ್ವಾನಗಳ ದೇಹದ ಮೇಲಿಟ್ಟು ಆರೈಕೆ ಮಾಡುತ್ತಿದ್ದರು. ಮತ್ತೆ ಕೆಲವರು ಏರ್ ಬ್ಲೋವರ್‌ನಿಂದ ಗಾಳಿ ಬೀಸುತ್ತಿದ್ದರು.

ಮೂರು ವೃತ್ತದಲ್ಲಿ ವೈಯ್ಯಾರದ ಸ್ಪರ್ಧೆ: ಶ್ವಾನಗಳಿಗೆ ಮೂರು ಸರ್ಕಲ್‌ನಲ್ಲಿ ಸ್ಪರ್ಧೆ ನಡೆಸಲಾಯಿತು. ಶ್ವಾನಗಳ ಹಲ್ಲಿನ ತಪಾಸಣೆ, ಅವುಗಳ ಆರೋಗ್ಯ, ನಡಿಗೆ, ಮಾಲೀಕರ ಆಜ್ಞೆ ಪಾಲನೆ, ಬೆಳವಣಿಗೆ, ನಡಿಗೆ, ನಿಲ್ಲುವಿಕೆ, ಕೂರುವಿಕೆ, ಮೈಮೇಲಿನ ಕೂದಲು ಸೇರಿದಂತೆ ವಿವಿಧ ಆಯಾಮಗಳಲ್ಲಿ ಪರಿಶೀಲನೆ ಸ್ಪರ್ಧೆ ನಡೆಸಲಾಯಿತು. ಈ ಸ್ಪರ್ಧೆಗೆ ಮಲೇಷಿಯಾದ ಡೆರಿಕ್ ಶೆವ್, ಚೆನ್ನೈನಿಂದ ಡಾ.ಸಿ.ವಿ. ಸುದರ್ಶನ್ ಹಾಗೂ ಬೆಂಗಳೂರಿನ ಎಂ.ಆರ್.ಮಂಜುನಾಥ್ ಅವರು ಪ್ರಮುಖ ತೀರ್ಪುಗಾರರಾಗಿ ಸ್ಪರ್ಧೆ ನಡೆಸಿಕೊಟ್ಟರು.

ಮುಂಜಾಗ್ರತಾ ಕ್ರಮ: ಶ್ವಾನಸ್ಪರ್ಧೆ ಸ್ಥಳದಲ್ಲಿ ಶ್ವಾನಗಳಿಗೆ ಬೇಕಾಗುವ ಆರೋಗ್ಯಸೇವೆ, ಶ್ವಾನಗಳ ಆಹಾರ ಪದಾರ್ಥ ಮಾರಾಟ ಮಳಿಗೆ, ಶ್ವಾನಗಳ ಬೆಲ್ಟ್, ಚೈನ್ ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಮಳಿಗೆ ತೆರೆಯಲಾಗಿತ್ತು. ಅಲ್ಲದೆ, ಶ್ವಾನಗಳ ಸ್ಪರ್ಧೆಗೆ ವಾಟರ್‌ಪ್ರೂಫ್ ಪೆಂಡಾಲ್ ವ್ಯವಸ್ಥೆ ಕಲ್ಪಿಸಲಾಗಿತ್ತು.

ಫೋಟೋ ಕ್ಲಿಕ್ಕಿಸಿಕೊಂಡ ಶ್ವಾನ ಪ್ರಿಯರು: ಡಾಗ್ ಶೋ ವೀಕ್ಷಣೆಗೆಂದು ಆಗಮಿಸಿದ್ದ ಶ್ವಾನ ಪ್ರಿಯರು ಮುದ್ದು ಮುದ್ದಾದ ಶ್ವಾನಗಳೊಂದಿಗೆ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು. ಅದರಲ್ಲೂ ಮಕ್ಕಳು ಶ್ವಾನಗಳನ್ನು ಮುದ್ದಾಡುತ್ತಾ ಫೋಟೋ ತೆಗೆಸಿಕೊಳ್ಳಲು ಮುಗಿಬಿದ್ದಿದ್ದರು.

ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, ಕೆನೈನ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಬಿ.ಪಿ.ಮಂಜುನಾಥ್, ಉಪಾಧ್ಯಕ್ಷರಾದ ಡಾ.ಎಸ್.ಸಿ.ಸುರೇಶ್, ಡಾ.ಡಿ.ಟಿ.ಜಯರಾಮಯ್ಯ, ಕಾರ್ಯದರ್ಶಿ ಡಾ.ಸಂಜೀವ್‌ಮೂರ್ತಿ, ಜಂಟಿ ಕಾರ್ಯದರ್ಶಿಗಳಾದ ಟಿ.ಶಶಿಕುಮಾರ್, ಎಂ.ಹೆಚ್.ತೇಜಸ್ವಿ, ಎಲ್.ಎಸ್. ಸಂದೀಪ್, ಖಜಾಂಚಿ ಎಂ.ಸಿ. ವಿನೋದ್, ಸದಸ್ಯ ಪ್ರಸಾದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಶ್ವಾನಗಳು ಮತ್ತು ಅವರ ಮಾಲೀಕರು



ಮೈಸೂರಿನ ರಾಮಕೃಷ್ಣನಗರದ ತನ್ಮಯ್ ಮತ್ತು ತನಿಷ್ಕಾ ತಮ್ಮ ಗೋಲ್ಡನ್ ರಿಟ್ರೀವರ್ ತಳಿಯ ಟೆಡ್ಡಿ ಶ್ವಾನ ಪ್ರದರ್ಶಿಸುತ್ತಿರುವುದು.

ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಜರ್ಮನ್ ಶೆಫರ್ಡ್ ಚಾಂಪಿಯನ್, ಗೋಲ್ಡನ್ ರಿಟ್ರೀವರ್‌ಗೆ ಪ್ರಥಮ ಸ್ಥಾನ



'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ದಿವಂಗತ ಡಾ.ಕೆ.ಬಿಗಣಪತಿ ಸ್ಮರಣಾರ್ಥ 11ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಬೆಸ್ಟ್ ಇನ್ ಶೋ ಪಟ್ಟ ಅಲಂಕರಿಸಿದ ಜರ್ಮನ್ ಶೆಫರ್ಡ್ ಶ್ವಾನದ ಮಾಲೀಕರಿಗೆ ಪ್ರಶಸ್ತಿ ನೀಡಲಾಯಿತು.

11ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಟಾಪ್-8 ಗೆದ್ದ ಶ್ವಾನಗಳ ಪಟ್ಟಿ

ಬೆಸ್ಟ್ ಇನ್ ಶೋ(ಚಾಂಪಿಯನ್): ಜರ್ಮನ್ ಶೆಫರ್ಡ್, **ಎರಡನೇ ಅತ್ಯುತ್ತಮ:** ಡಾಬರ್‌ಮನ್, **ಮೂರನೇ ಅತ್ಯುತ್ತಮ:** ಗ್ರೇಟ್ ಡೆನ್, **ನಾಲ್ಕನೇ ಅತ್ಯುತ್ತಮ:** ಲ್ಯಾಬ್ರೇಡರ್ ರೆಟ್ರೀವರ್, **ಐದನೇ ಅತ್ಯುತ್ತಮ:** ಬಾಕ್ಸರ್, **ಆರನೇ ಅತ್ಯುತ್ತಮ:** ಪಗ್, **ಏಳನೇ ಅತ್ಯುತ್ತಮ:** ಬ್ಯಾಸೆಟ್ ಹೌಂಡ್, **ಎಂಟನೇ ಅತ್ಯುತ್ತಮ:** ಗೋಲ್ಡನ್ ರೆಟ್ರೀವರ್

12ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಟಾಪ್-8 ಗೆದ್ದ ಶ್ವಾನಗಳ ಪಟ್ಟಿ

ಬೆಸ್ಟ್ ಇನ್ ಶೋ(ಚಾಂಪಿಯನ್): ಗೋಲ್ಡನ್ ರೆಟ್ರೀವರ್, **ಎರಡನೇ ಅತ್ಯುತ್ತಮ:** ಜರ್ಮನ್ ಶೆಫರ್ಡ್, **ಮೂರನೇ ಅತ್ಯುತ್ತಮ:** ಬಾಕ್ಸರ್, **ನಾಲ್ಕನೇ ಅತ್ಯುತ್ತಮ:** ಬೀಗಲ್, **ಐದನೇ ಅತ್ಯುತ್ತಮ:** ಡಾಬರ್‌ಮನ್, **ಆರನೇ ಅತ್ಯುತ್ತಮ:** ವಿಪೆಟ್, **ಏಳನೇ ಅತ್ಯುತ್ತಮ:** ಡ್ಯಾಷ್‌ಹಂಡ್ ಸ್ಟ್ಯಾಂಡರ್ಡ್, **ಎಂಟನೇ ಅತ್ಯುತ್ತಮ:** ಪಗ್

ಮೈಸೂರು, ಅ.26(ವಿವಿಹೆಚ್)– ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕೆನೈನ್ ಕ್ಲಬ್ ಆಫ್ ಮೈಸೂರು ಸಂಸ್ಥೆ ವತಿಯಿಂದ ಭಾನುವಾರ ಆಯೋಜಿಸಿದ್ದ 11ಮತ್ತು 12ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ 11ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಜರ್ಮನ್ ಶೆಫರ್ಡ್ ಚಾಂಪಿಯನ್ ಆದರೆ, 12ನೇ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಗೋಲ್ಡನ್ ರಿಟ್ರೀವರ್ ಮೊದಲನೇ ಪಟ್ಟ ಅಲಂಕರಿಸಿತು.

'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ದಿವಂಗತ ಡಾ.ಕೆ.ಬಿ. ಗಣಪತಿ ಸ್ಮರಣಾರ್ಥ 11ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಬೆಸ್ಟ್ ಇನ್ ಶೋ (ಚಾಂಪಿಯನ್) ಪಟ್ಟ ಅಲಂಕರಿಸಿದ ಜರ್ಮನ್ ಶೆಫರ್ಡ್ ಶ್ವಾನಕ್ಕೆ ಪ್ರಶಸ್ತಿ ನೀಡಲಾಯಿತು.

ಮಾಜಿ ಶಾಸಕ ದಿ.ವಾಸು ಸ್ಮರಣಾರ್ಥವಾಗಿ 12ನೇ ನೇ ರಾಷ್ಟ್ರಮಟ್ಟದ ಶ್ವಾನ ಸ್ಪರ್ಧೆಯಲ್ಲಿ ಬೆಸ್ಟ್ ಇನ್ ಶೋ (ಚಾಂಪಿಯನ್) ಪಟ್ಟ ಅಲಂಕರಿಸಿದ ಗೋಲ್ಡನ್ ರೆಟ್ರೀವರ್ ಶ್ವಾನಕ್ಕೆ ಪ್ರಶಸ್ತಿ ನೀಡಲಾಯಿತು.

ಕೆನೈನ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಬಿ.ಪಿ.ಮಂಜುನಾಥ್, ಉಪಾಧ್ಯಕ್ಷರಾದ ಡಾ.ಎಸ್.ಸಿ.ಸುರೇಶ್, ಡಾ.ಡಿ.ಟಿ.ಜಯರಾಮಯ್ಯ, ಕಾರ್ಯದರ್ಶಿ ಡಾ. ಸಂಜೀವ್ ಮೂರ್ತಿ, ಜಂಟಿ ಕಾರ್ಯದರ್ಶಿಗಳಾದ ಟಿ.ಶಶಿಕುಮಾರ್, ಎಂ.ಹೆಚ್.ತೇಜಸ್ವಿ, ಎಲ್.ಎಸ್. ಸಂದೀಪ್, ಖಜಾಂಚಿ ಎಂ.ಸಿ. ವಿನೋದ್, ಸದಸ್ಯ ಪ್ರಸಾದ್, ಅಭಿಷೇಕ್, ಕುಮಾರಸ್ವಾಮಿ, ಸುಮನ್, ಹರ್ಷ, ಸಂಜಯ್, ಶೇಖರ್, ಮೋಹನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಲೇಷಿಯಾದ ಡೆರಿಕ್ ಶೆವ್, ಚನ್ನೈನ ಡಾ.ಸಿ.ವಿ.ಸುದರ್ಶನ್ ಹಾಗೂ ಬೆಂಗಳೂರಿನ ಎಂ.ಆರ್.ಮಂಜುನಾಥ್ ಅವರು ಪ್ರಮುಖ ತೀರ್ಪುಗಾರರಾಗಿ ಶ್ವಾನ ಸ್ಪರ್ಧೆ ನಡೆಸಿಕೊಟ್ಟರು.

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ವಾರ್ಷಿಕೋತ್ಸವ, ಆದರ್ಶ ಗೃಹಿಣಿ ಪ್ರಶಸ್ತಿ ಪ್ರದಾನ

ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮರ ಆದರ್ಶಗಳು ಸಮಾಜಕ್ಕೆ ಅಗತ್ಯ

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಅಭಿಮತ

ಮೈಸೂರು,ಅ.26(ಪಿಎಂ)– ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಜೀವನ ಮೌಲ್ಯ ಹಾಗೂ ಆದರ್ಶಗಳು ಸಮಾಜಕ್ಕೆ ಅಗತ್ಯ ಎಂದು ಮೈಸೂರು ವಿವಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರೀಶ್ವರ ರಾಜೇಂದ್ರ ಭವನದಲ್ಲಿ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಬಳಗದ 7ನೇ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಹೇಮರೆಡ್ಡಿ ಮಲ್ಲಮ್ಮರ ಕಾಯಕನಿಷ್ಠೆ, ದೈವಭಕ್ತಿ ಹಾಗೂ ಉತ್ತಮ ಸಂಸ್ಕಾರವನ್ನು ಇಂದಿನ ಯುವ ಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದೆ. ಹೇಮರೆಡ್ಡಿ ಮಲ್ಲಮ್ಮ ಅವರ ಬಗ್ಗೆ ತಿಂಗಳ ಹಿಂದೆ ನನಗೆ ಹೆಚ್ಚು ಗೊತ್ತಿರಲಿಲ್ಲ. ಈ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿದ ಹಿನ್ನೆಲೆಯಲ್ಲಿ ಮಲ್ಲಮ್ಮರ ಬಗ್ಗೆ ಅಧ್ಯಯನಕ್ಕಾಗಿ ಹಲವು ಪುಸ್ತಕಗಳನ್ನು ಓದಿದೆ. ಆಗ ಅವರ ಸಾರ್ಥಕ ಬದುಕಿನ ಬಗ್ಗೆ ನನಗೆ ಹೆಚ್ಚು ತಿಳಿಯಿತು ಎಂದರು.

ಮನುಷ್ಯನ ಚಿಂತನೆಗಳು ಅವನು ವ್ಯಕ್ತಿತ್ವ ಸೃಷ್ಟಿಸುತ್ತದೆ. ಹಾಗಾಗಿ ನಾವು ಹೇಗೆ ಯೋಚನೆ ಮಾಡುತ್ತೇವೆಯೋ ಅಂತೆಯೇ ನಮ್ಮ ವ್ಯಕ್ತಿತ್ವ ಬೆಳೆಯುತ್ತದೆ ಎಂದು ಗೌತಮ ಬುದ್ಧ ಹೇಳಿದ್ದು, ಅದೇ ರೀತಿಯಲ್ಲಿ ಒಳ್ಳೆಯ ಚಿಂತನೆಗಳನ್ನು ಸಮಾಜಕ್ಕೆ ಪಸರಿಸುವ ನಿಟ್ಟಿನಲ್ಲಿ ಹೇಮರೆಡ್ಡಿ ಮಲ್ಲಮ್ಮ ಬಳಗ ಮೈಸೂರಿನಲ್ಲಿ ಮುನ್ನಡೆಯುತ್ತಿದೆ. ಬಳಗದ ಮೂಲಕ ಸಂಘಟಿತರಾಗಿ ಸಮುದಾಯ ಹಾಗೂ ಸಮಾಜಕ್ಕೆ ಏನಾದರೂ ಒಳ್ಳೆಯದನ್ನು ಮಾಡಬೇಕೆಂದು ವಿಶಾಲವಾದ ಹೃದಯದೊಂದಿಗೆ ಬಳಗದವರು ಹೆಜ್ಜೆ ಹಾಕುತ್ತಿರುವುದು ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರೀಶ್ವರ ರಾಜೇಂದ್ರ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ವಾರ್ಷಿಕೋತ್ಸವದಲ್ಲಿ ಡಾ.ನಾಗಲಕ್ಷ್ಮಿ ಭಟ್ಟಾಚಾರ್ಯ, ಶಿವರುದ್ರಮ್ಮ, ಶಿವಲಿಂಗಮ್ಮ ಅವರಿಗೆ 'ಆದರ್ಶ ಗೃಹಿಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮತ್ತೊಬ್ಬರ ಸಾಧನೆ ಬಗ್ಗೆ ವಿಶಾಲ ಹೃದಯದಿಂದ ಪ್ರಶಂಸೆ ವ್ಯಕ್ತಪಡಿಸುವುದರಲ್ಲಿ ಪ್ರತಿ ಮನುಷ್ಯನ ಒಳ್ಳೆಯ ಗುಣಗಳು ಅಡಗಿವೆ ಎಂದು ಇತ್ತೀಚೆಗೆ ಟಿಬೆಟಿಯನ್ ಧರ್ಮಗುರು ದಲೈಲಾಮ ಹೇಳಿದ್ದಾರೆ. ಅದೇ ರೀತಿ ಈ ಬಳಗವು ಇಂದು ಮೂವರು ಆದರ್ಶ ಮಹಿಳೆಯರನ್ನು ಗುರುತಿಸಿ ಗೌರವಿಸಿರುವುದು ಉತ್ತಮ ಕಾರ್ಯ ಎಂದು ಹೇಳಿದರು.

ಇದಕ್ಕೂ ಮುನ್ನ ವೈದ್ಯೆ ಡಾ.ನಾಗಲಕ್ಷ್ಮಿ ಭಟ್ಟಾಚಾರ್ಯ, ರೆಡ್ಡಿ ಸಮುದಾಯದ ಹಿರಿಯ ಮಹಿಳಾ ಸಾಧಕರಾದ ಶಿವರುದ್ರಮ್ಮ, ಶಿವಲಿಂಗಮ್ಮ ಅವರಿಗೆ 'ಆದರ್ಶ ಗೃಹಿಣಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, ಸಮುದಾಯದ ಹಲವು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಭಾ ಕಾರ್ಯಕ್ರಮಕ್ಕೂ ಮುನ್ನ ಆನಂದ್‌ಕುಮಾರ್ ಮತ್ತು ತಂಡದಿಂದ ಜಾನಪದ ಗಾಯನ ಕಾರ್ಯಕ್ರಮ ನಡೆಯಿತು.

ಹಿರಿಯ ಸಾಹಿತಿ ಪ್ರೊ.ಶಶಿಕಲಾ ವಸ್ತ್ರದ, ಬಳಗದ ಅಧ್ಯಕ್ಷ ಡಾ.ಜಿ.ಎಂ.ವಾಮದೇವ, ಗೌರವಾಧ್ಯಕ್ಷ ಡಾ.ಟಿ.ತಿಪ್ಪೇಸ್ವಾಮಿ, ಉಪಾಧ್ಯಕ್ಷ ಜಿ.ಶಿವಲಿಂಗಸ್ವಾಮಿ, ಕಾರ್ಯದರ್ಶಿ ಡಾ.ವಿಠಲರೆಡ್ಡಿ ಎಫ್.ಚುಳಕಿ, ಸಂಚಾಲಕ ಆರ್. ಶಾರದ ಶಿವಲಿಂಗಸ್ವಾಮಿ ಮತ್ತಿತರರು ಹಾಜರಿದ್ದರು.

ರೇಸ್ ಕೋರ್ಸ್ ಅಧ್ಯಕ್ಷರಿಗೆ ಅಭಿನಂದನೆ



ಮೈಸೂರು ರೇಸ್ ಕೋರ್ಸ್‌ನಲ್ಲಿ ಪ್ರತಿಷ್ಠಿತ 50ನೇ ವರ್ಷದ ಡರ್ಬಿ ರೇಸ್ ಆಯೋಜಿಸಿದ್ದ ಹಿನ್ನೆಲೆಯಲ್ಲಿ ರೇಸ್ ಕೋರ್ಸ್ ಚೇರ್ಮನ್ ಜಿ.ವೆಂಕಟೇಶ್ ಅವರನ್ನು ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಎಸ್.ವೆಂಕಟೇಶ್ ಕುಮಾರ್, ಸಿಇಓ ಎಸ್.ರಾಜು, ಸಿ.ಪ್ರಕಾಶ್, ಕಿರಣ್ ಹಾಗೂ ರಮೇಶ್ ಅವರು ಅಭಿನಂದಿಸಿದರು.

ಮೈಸೂರು–ಬನ್ನೂರು ರಸ್ತೆಯಲ್ಲಿ ವಾಹನ ಡಿಕ್ಕಿಯಿಂದ ನರಿ ಸಾವು

ಮೈಸೂರು, ಅ.26(ಎಂಟಿವೈ)– ಮೈಸೂರು–ಬನ್ನೂರು ಮುಖ್ಯ ರಸ್ತೆಯ ತಂತಿಗುಳ್ಳು ಸಮೀಪ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ನರಿಯೊಂದು ಸಾವನ್ನಪ್ಪಿದೆ. ಬನ್ನೂರಿನಿಂದ ಮೈಸೂರಿನ ಕಡೆಗೆ ಸಾಗುತ್ತಿದ್ದ ಅಪರಿಚಿತ ವಾಹನ ರಸ್ತೆ ದಾಟುತ್ತಿದ್ದ ನರಿಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದು, ತೀವ್ರ ಗಾಯದಿಂದ ನರಿ ಸ್ಥಳದಲ್ಲೇ ಸಾವನ್ನಪ್ಪಿದೆ ಎಂದು ತಿಳಿದುಬಂದಿದೆ.

ಬೇಟೆಗಾರರ ಹಾವಳಿಯಿಂದಾಗಿ ನರಿಗಳ ಸಂತತಿ ಅಳವಿನಂಚಿನಲ್ಲಿದ್ದು, ಈ ನಡುವೆ ಕೆಲವೆಡೆ ನರಿಗಳು ಕಾಣಿಸಿಕೊಳ್ಳುತ್ತಿರುವುದು ಆಶಾದಾಯಕವಾಗಿದೆ. ಆದರೆ ರಸ್ತೆ ಅಪಘಾತದಿಂದ ಹೆಚ್ಚು ನರಿಗಳು ಸಾವನ್ನಪ್ಪುತ್ತಿರುವುದು ಆತಂಕಕಾರಿ ಸಂಗತಿ. ಮೈಸೂರು ಸೇರಿದಂತೆ ವಿವಿಧೆಡೆಯಿಂದ ಮಾಂಸದ ಅಂಗಡಿ ತ್ಯಾಜ್ಯವನ್ನು ರಸ್ತೆ ಬದಿ ಸುರಿದು ಹೋಗುತಿದ್ದು, ಅದನ್ನು ತಿನ್ನಲು ಬರುವ ನರಿಗಳು ವಾಹನಕ್ಕೆ ಸಿಲುಕಿ ಜೀವ ಕಳೆದುಕೊಳ್ಳುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟವರು ಸೂಕ್ತ ಕ್ರಮ ಕೈಗೊಳ್ಳಬೇಕಿದೆ ಎಂದು ವನ್ಯಜೀವಿ ತಜ್ಞರು ಮನವಿ ಮಾಡಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಹುಡುಗ : ಸಾರಿ ಕಣೆ, ನಾನು ನಿನ್ನನ್ನು ಮದುವೆಯಾಗಲು ಸಾಧ್ಯವಿಲ್ಲ.
ಹುಡುಗಿ : ಯಾಕೆ?
ಹುಡುಗ : ನಮ್ಮ ಮನೆಯಲ್ಲಿ ಯಾರೂ ಒಪ್ತಾ ಇಲ್ಲ.
ಹುಡುಗಿ : ನಿಮ್ಮ ಮನೆಯಲ್ಲಿ ಯಾರ್‍ಯಾರು ಇದ್ದೀರಿ?
ಹುಡುಗ : ನನ್ನ ಹೆಂಡತಿ ಮತ್ತು ಮಕ್ಕಳು!

ಮೈಸೂರು ಮಿತ್ರ
ಸೋಮವಾರ, 27 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಮಗಾಗುವ ಗಾಯ ಅಥವಾ ಘಾಸಿಗಳು ನಮ್ಮೊಳಗಿರುವ ಅತ್ಯುತ್ತಮ ಮತ್ತು ಅತ್ಯಂತ ಸುಂದರ ಮುಖವನ್ನು ಅನಾವರಣಗೊಳಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣು ತಿರುಗಿ ಕೆಟ್ಟಳು, ಗಂಡು ಕೂತು ಕೆಟ್ಟ

ನಿಮ್ಮ ಪತ್ರಗಳು

■ ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲಿನ ಜಾಹೀರಾತುಗಳಿಗೆ ಕಡಿವಾಣ ಹಾಕಲಿ

ಮಾನ್ಯರೆ,

ತಂಬಾಕು ಉತ್ಪನ್ನಗಳಾದ ಪಾನ್ ಮಸಾಲ-ಗುಟ್ಕಾದಂತಹ ಪದಾರ್ಥಗಳು ಆರೋಗ್ಯಕ್ಕೆ ಹಾನಿಕರ ಎಂಬ ಅಂಶ ಗೊತ್ತಿದ್ದರೂ ಸರ್ಕಾರ ತನ್ನ ಸ್ವಾಮ್ಯದ ಸಾರಿಗೆ ಬಸ್ ಹಾಗೂ ರೈಲು ಗಾಡಿಗಳ ಮೇಲೆ ಭರಪೂರ ಪ್ರಚಾರಕ್ಕೆ ಅನುಮತಿ ನೀಡಿರುವುದು ವಿಪರ್ಯಾಸದ ಸಂಗತಿ. ಈ ಮಾದರಿಯ ಪ್ರಚಾರದಿಂದಾಗಿ ಸರ್ಕಾರವೇ ಈ ಉತ್ಪನ್ನಗಳಿಗೆ ಪರೋಕ್ಷವಾಗಿ ಮಾರುಕಟ್ಟೆ ಒದಗಿಸಿದಂತಾಗಿದೆ. ಅದರಲ್ಲೂ ವಿಮಲ್ ಎಂಬ ಬ್ರಾಂಡಿನ ಗುಟ್ಕಾ ಕಂಪನಿಯ ಜಾಹೀರಾತುಗಳಂತೂ ಬಹುತೇಕ ಸಾರಿಗೆ ಬಸ್‌ಗಳನ್ನು ಆಕ್ರಮಿಸಿಕೊಂಡು ಕಣ್ಣು ಕುಕ್ಕುವಂತೆ ರಾರಾಜಿಸುತ್ತಿದೆ.

ಇದು ಹಾನಿಕಾರಕ ಎಂದು ಗೊತ್ತಿದ್ದರೂ ಸಾರಿಗೆ ಬಸ್ ಹಾಗೂ ರೈಲುಗಳಲ್ಲಿ ಈ ಕಂಪನಿ ಉತ್ಪನ್ನಗಳ ಜಾಹೀರಾತಿಗೆ ಅನುಮತಿ ನೀಡುವ ಮೂಲಕ ಇದರ ಸೇವನೆಗೆ ಪ್ರಚೋದನೆ ನೀಡಿದಂತೆ ಕಂಡುಬರುತ್ತಿದೆ. ಹಿಂದಿ ಚಿತ್ರರಂಗದ ದಿಗ್ಗಜ ನಟರೆನಿಸಿಕೊಂಡಿರುವ ಶಾರೂಕ್ ಖಾನ್, ಅಜಯ್ ದೇವಗನ್ ಸೇರಿದಂತೆ ಹಲವಾರು ಸೂಪರ್‌ಸ್ಟಾರ್ ನಟರು ಇದರ ಬ್ರಾಂಡ್ ರಾಯಭಾರಿಗಳಾಗಿರುವುದು ದುರ್ದೈವದ ಸಂಗತಿ. ಟಿ.ವಿ ಚಾನಲ್‌ಗಳು, ಕೆಲ ವೃತ್ತಪತ್ರಿಕೆಗಳು ಸೇರಿದಂತೆ ಸಾಮಾಜಿಕ ಜಾಲತಾಣ, ಹೆದ್ದಾರಿಗಳ ಇಕ್ಕೆಲಗಳಲ್ಲಿ ಈ ಪ್ರಚಾರ ಫಲಕಗಳು ವಿಜೃಂಭಿಸುತ್ತಿದ್ದು, ಸರ್ಕಾರ ಸಾರಿಗೆ ಬಸ್‌ಗಳ ಮೇಲಿನ ಜಾಹೀರಾತುಗಳಿಗೆ ಕಡಿವಾಣ ಹಾಕಲಿ.

-ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

■ ಬುದ್ಧ, ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪ ಮಾಡಿರುವುದು ಖಂಡನೀಯ

ಮಾನ್ಯರೆ,

ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರದಲ್ಲಿ ಬುದ್ಧನ ಮೂರ್ತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿರುವುದಕ್ಕೆ ಎಲ್ಲಾ ಸಂಘ ಸಂಸ್ಥೆಗಳು, ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ. ಸಮುದಾಯಗಳ ನಡುವೆ ದ್ವೇಷ ಹರಡಲು ಮಹಾನಿಯರ ಪ್ರತಿಮೆ ಹಾಗೂ ಪುತ್ಥಳಿಗಳು ವಸ್ತುವಾಗಬಾರದು, ಇಂತಹ ವಿಕೃತ ಮನಸ್ಸಿನ ದುಷ್ಟ ವ್ಯಕ್ತಿಗಳಿಂದ ಸಮಾಜದ ಸ್ವಾಸ್ಥತೆ ಹಾಗೂ ಸಾಮಾರಸ್ಯ ಹಾಳಾಗುತ್ತಿದೆ. ಈ ಕೃತ್ಯ ಎಸಗಿದ ವಿಷ ಜಂತುಗಳನ್ನು ಕೂಡಲೇ ಬಂಧಿಸಬೇಕು, ಇಂತಹ ಅಹಿತಕರ ಘಟನೆ ತಡೆಗಟ್ಟಲು ರಾಜ್ಯಾದ್ಯಂತ ನಿರ್ಮಿಸಿರುವ ಹಲವು ಮಹನೀಯರ ಪುತ್ಥಳಿ, ಪ್ರತಿಮೆ ಎದುರು ಸಿಸಿ ಕ್ಯಾಮರಾ ಅಳವಡಿಸಿ, ಜಿಯೋ ಟ್ಯಾಗ್ಗಿಂಗ್ ವ್ಯವಸ್ಥೆ ಕಲ್ಪಿಸಿ ಅದರ ಉಸ್ತುವಾರಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ವಹಿಸುವುದು ಸೂಕ್ತ, ಇಂತಹ ಪ್ರತಿಮೆಯನ್ನು ಧ್ವಂಸ ಮಾಡುವುದರಿಂದ ಬಾಬಾ ಸಾಹೇಬರ ಶ್ರೇಷ್ಠ ವ್ಯಕ್ತಿತ್ವವನ್ನು ಮಂಕಾಗಿಸಲು ಈ ಜಗತ್ತಿನಲ್ಲಿ ಯಾರಿಂದಲೂ ಸಾಧ್ಯವಿಲ್ಲ. ಕಿಡಿಗೇಡಿತನದ ಆಲೋಚನೆಯು ಯಾರಿಗೂ ಒಳ್ಳೆಯದಲ್ಲ. ಬಾಬಾ ಸಾಹೇಬರು ದೇಶದ ಏಳಿಗೆಗಾಗಿ ತಮ್ಮ ಪ್ರಾಣವನ್ನೇ ದೇಶಕ್ಕೋಸ್ಕರ ಮುಡಿಪಾಗಿಟ್ಟಿದ್ದರು. ಇಂಥಹ ವ್ಯಕ್ತಿಗಳನ್ನು ಪ್ರತಿ ಮನೆಯಲ್ಲೂ ಪ್ರತಿ ಸಣ್ಣಪುಟ್ಟ ಕಚೇರಿಗಳಿಂದಲೂ ದೊಡ್ಡ ಪ್ರಮಾಣದ ಕಚೇರಿಗಳಲ್ಲು ದಿನನಿತ್ಯ ಪೂಜೆ ಮಾಡಿದರೆ ಏನು ವ್ಯರ್ಥವಾಗುವುದಿಲ್ಲ. ಇಂತಹ ಮಹಾವ್ಯಕ್ತಿಗಳಿಗೆ ಗೌರವಪೂರ್ಣವಾಗಿ ನಡೆದುಕೊಳ್ಳುವುದು ಒಳ್ಳೆಯದು. ಇಂಥಹ ಘಟನೆಗಳು ರಾಜ್ಯದಲ್ಲಿ ಪದೇ ಪದೇ ಆಗುತ್ತಿವೆ. ಇಂಥ ಘಟನೆಗಳು ಮರುಕಳಿಸದಂತೆ ಸರ್ಕಾರ ಕಡಿವಾಣ ಹಾಕಬೇಕು, ಇಂತಹ ವ್ಯಕ್ತಿಗಳಿಗೆ ತಕ್ಕ ಶಿಕ್ಷೆ ಆಗಲಿ ಹಾಗೂ ಗಡಿಪಾರು ಮಾಡಬೇಕು.

-ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ.ಕೋಟೆ ತಾ.

■ ನಾಡಗೀತೆ ಪ್ರತಿದಿನದ ಗಾಯನವಾಗಲಿ

ಮಾನ್ಯರೆ,

ನಾಡ ಹೆಮ್ಮೆಯ ಪ್ರತೀಕವಾದ ಕುವೆಂಪು ವಿರಚಿತ 'ಜಯ ಭಾರತ ಜನನಿಯ ತನುಜಾತೆ' ನಾಡಗೀತೆ ಈ ವರ್ಷ ಶತಮಾನೋತ್ಸವ ಆಚರಿಸಿಕೊಳ್ಳುತ್ತಿದೆ. ಕುವೆಂಪು ಅವರ ಈ ಅಮರ ಕಾವ್ಯವು ಕೇವಲ ಗೀತೆಯಲ್ಲ. ಇದು ಕನ್ನಡ ನಾಡಿನ ಅಸ್ಮಿತೆ, ನಾಡು-ನುಡಿ-ಸಂಸ್ಕೃತಿಯ ಸಾರುವ ಜೀವಂತ ಸಂಕೇತ. ಇಂತಹ ಪವಿತ್ರ ಸಂದರ್ಭದಲ್ಲಿ ನಾಡಿನ ಸಾಂಸ್ಕೃತಿಕ ಗುರುತನ್ನು ಉಳಿಸುವ ದಿಸೆಯಲ್ಲಿ ರಾಜ್ಯ ಸರ್ಕಾರವು ಕೆಲ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಕೇವಲ ಸರಕಾರಿ ಶಾಲೆಗಳಲ್ಲದೆ, ನಾಡಗೀತೆಯನ್ನು ರಾಜ್ಯದ ಎಲ್ಲಾ ಖಾಸಗಿ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಲ್ಲಿಯೂ ಕಡ್ಡಾಯಗೊಳಿಸಬೇಕು. ಕನ್ನಡ ನೆಲದಲ್ಲಿ ಓದುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಯು ನಾಡಗೀತೆಯ ಅರ್ಥ, ಅದರ ಭಾವನೆ ಹಾಗೂ ಅದರ ತತ್ತ್ವವನ್ನು ಅಳವಡಿಸಿಕೊಂಡರೆ, ಆ ವಿದ್ಯಾರ್ಥಿಯು ಭವಿಷ್ಯದ ಕನ್ನಡದ ಸತ್ಪ್ರಜೆ ಆಗುವಲ್ಲಿ ಅನುಮಾನವಿಲ್ಲ. ನಾಡಗೀತೆಯು ಮಕ್ಕಳಲ್ಲಿ ನಾಡ ಭಾವನೆ, ಆತ್ಮಗೌರವ ಹಾಗೂ ಭಾಷಾ ಪ್ರೀತಿ ಮೂಡಿಸಲು ಅತ್ಯಂತ ಶಕ್ತಿಯುತ ಮಾಧ್ಯಮವಾಗಿದೆ. ಹೀಗಾಗಿ, ನಾಡಗೀತೆಯ ಶತಮಾನೋತ್ಸವವು ಕೇವಲ ಒಂದು ಆಚರಣೆ ಆಗದೆ, ಕನ್ನಡ ನಾಡಿನ ಅಸ್ಮಿತೆಯನ್ನು ಮತ್ತೊಮ್ಮೆ ಎತ್ತಿ ಹಿಡಿಯುವ ಚಳುವಳಿಯಾಗಿ ರೂಪಾಂತರಗೊಳ್ಳಲಿ. ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಎಲ್ಲಾ ಶಾಲೆಗಳಲ್ಲಿ ಪ್ರತಿದಿನ ನಾಡಗೀತೆ ಗಾಯನ ಆಗುವಂತೆ ಮಾಡುವುದು ಅತ್ಯಗತ್ಯ. -ಡಾ.ವಿಜಯಕುಮಾರ್ ಎಚ್.ಕೆ.

■ ಮುಖ್ಯಮಂತ್ರಿಗಳಿಂದ ನಿರೀಕ್ಷಿತವಲ್ಲ

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರನ್ನು ಅಮಾವಾಸ್ಯೆಗೆ ಹೋಲಿಕೆ ಮಾಡಿ ಮಾತನಾಡಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಮುಖ್ಯಮಂತ್ರಿಗಳು ಯಾವ ಅರ್ಥದಲ್ಲಿ ಆ ರೀತಿ ಮಾತನಾಡಿದ್ದಾರೋ ತಿಳಿಯದು. ಆದರೂ ಅಂತಹ ಹೇಳಿಕೆಗಳು ಸದಭಿರುಚಿಯಿಂದ ಕೂಡಿಲ್ಲವೆಂದು ಖಂಡಿತಾ ಹೇಳಬಹುದು. ಇದಕ್ಕೆ ತಿರುಗೇಟು ನೀಡಿರುವ ತೇಜಸ್ವಿ ಸೂರ್ಯರವರು, ಅಮಾವಾಸ್ಯೆಗೂ, ಹುಣ್ಣಿಮೆಗೂ ಇರುವ ವ್ಯತ್ಯಾಸ ಸಿದ್ದರಾಮಯ್ಯನವರಿಗೆ ಗೊತ್ತಿಲ್ಲವೆಂದು ಮಾತಿನ ಚಾಟಿ ಬೀಸಿ, ಅಮವಾಸ್ಯೆ ದಿನವೂ ಸೂರ್ಯ ಇರುತ್ತಾನೆ, ಹುಣ್ಣಿಮೆಯ ದಿನವೂ ಸೂರ್ಯ ಇರುತ್ತಾನೆ ಎಂದು ಟಾಂಗ್ ನೀಡಿದ್ದಾರೆ. ಒಟ್ಟಿನಲ್ಲಿ ಮುಖ್ಯಮಂತ್ರಿಯಂತಹ ಉನ್ನತ ಸ್ಥಾನದಲ್ಲಿ ಇರುವವರಿಂದ ಇಂತಹ ಹೇಳಿಕೆ ನಿರೀಕ್ಷಿತವಲ್ಲ.

-ಕೆ.ವಿ.ವಾಸು, ವಕೀಲರು-ನೋಟರಿ, ವಿವೇಕಾನಂದನಗರ, ಮೈಸೂರು.

ಮೋಡಿ ಮಾಡಿವೆ ಕಾಫಿ, ಚಹಾ ಪಾನೀಯಗಳು



> "ಭಾರತೀಯರು ಚಹಾ ಮತ್ತು ಕಾಫಿಯನ್ನು ಒಂದು ಪಾನೀಯವಾಗಿ ಪರಿಗಣಿಸಿಲ್ಲ, ಬೆಳಗಿನ ದಿನಚರಿ ಪ್ರಾರಂಭ ಇವುಗಳನ್ನು ಕುಡಿಯುವುದರಿಂದಲೇ ಆಗುತ್ತದೆ. ಕಚೇರಿಯ ವಿರಾಮದಲ್ಲಿ, ಸಾಮಾಜಿಕ ಕೂಟ ಅಥವಾ ಬೇರೆ ಯಾವುದೇ ಸಂದರ್ಭಗಳಿರಲಿ ಭೇದಭಾವ ಇಲ್ಲದೆ ಕಾರ್ಮಿಕರಿಂದ ಉನ್ನತಸ್ಥಾನದಲ್ಲಿ ಇರುವ ಎಲ್ಲರಿಗೂ ಬೇಕು. ಇವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿವೆ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಬಂಧು-ಬಾಂಧವರು, ಗೆಳೆಯರು ಯಾರೇ ಸಿಗಲಿ ಇಲ್ಲವೇ ಅತಿಥಿಗಳು ಮನೆಗೆ ಬರಲಿ ಅಥವಾ ಸಭೆ-ಸಮಾರಂಭಗಳಿರಲಿ ಮೊದಲು ಕೇಳುವುದು ಕಾಫಿ ಕುಡಿತೀರಾ? ಟೀ ಕುಡಿತೀರಾ ಎಂದು, ಅವರಿಗೆ ಬೇಕೊ, ಬೇಡವೊ ಕೇಳುವುದು ಪದ್ಧತಿ. ನಾನು ಕುಡಿಯುವುದಿಲ್ಲ ಎನ್ನುವವರು ತೀರಾ ಕಡಿಮೆ. ಶೇಕಡಾ 90 ಭಾಗ ಜನರು ಇವೆರಡರಲ್ಲಿ ಒಂದನ್ನು ಅಥವಾ ಎರಡನ್ನೂ ಕುಡಿಯದವರಿಲ್ಲ. ಇವುಗಳ ಇತಿಮಿತಿಯಲ್ಲಿ ಕುಡಿದರೆ ಆರೋಗ್ಯಕ್ಕೂ ಒಳ್ಳೆಯದಿರುವುದರಿಂದ ನಮಗೆ ಸಾಂಪ್ರದಾಯಿಕ ಪಾನೀಯವಾಗಿ ಮನೆ ಹಾಗೂ ಮನದೊಳಗೆ ಪ್ರವೇಶ ಪಡೆದುಕೊಂಡಿವೆ.

ಬಳಕೆದಾರರು ಹೆಚ್ಚಾದಂತೆ ಅದರ ವಹಿವಾಟು ಕೂಡ ದೊಡ್ಡದಿರುತ್ತದೆ, ಇತ್ತೀಚಿನ ದಿನಗಳಲ್ಲಿ ಕಾಫಿ ಮತ್ತು ಚಹಾ ಸೇವನೆಯ ಅಭ್ಯಾಸದಲ್ಲಿ ಏರಿಕೆಯಾಗಿದೆ ಎನ್ನುವುದು ಸತ್ಯ. ಬೇಡಿಕೆ ಇದೆಯೆಂದರೆ ಅಲ್ಲಿ ವ್ಯಾಪಾರದ ಭರಾಟೆ ಇರಲೇಬೇಕು. ಹಾಗಾಗಿ ಕಾಫಿ ಮತ್ತು ಚಹಾ ಅಂಗಡಿಗಳು ಬಾರಿ ಸಂಖ್ಯೆಯಲ್ಲಿ ಹಳ್ಳಿಯಿಂದ ಪಟ್ಟಣದವರೆಗೂ ತೆರೆದಿವೆ ಹಾಗೂ ಹೊಸದಾಗಿ ನಿತ್ಯವೂ ತೆರೆಯುತ್ತಿವೆ. ಕರ್ನಾಟಕದಲ್ಲಿ ಕೆಲವು ತಿಂಗಳುಗಳ ಹಿಂದಿನ ಅಂಕಿ-ಅಂಶದಂತೆ ನಮ್ಮ ರಾಜ್ಯದವರಿಗಿಂತ ಅನ್ಯ ರಾಜ್ಯದವರು ಹೆಚ್ಚು ಚಹಾ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರು ಮತ್ತು ಒಳ್ಳೆಯ ಗಳಿಕೆಯನ್ನೂ ಮಾಡುತ್ತಿದ್ದರು. ಈಗ ನಮ್ಮವರಿಗೂ ಜ್ಞಾನೋದಯವಾಗಿ ಸುಸಜ್ಜಿತವಾದ ಕಾಫಿ ಮತ್ತು ಚಹಾ ಅಂಗಡಿಗಳನ್ನು ಆಕರ್ಷಕ ಹೆಸರುಗಳೊಂದಿಗೆ ಅಂಗಡಿಗಳನ್ನು ತೆರೆಯುತ್ತಿದ್ದಾರೆ, ಒಬ್ಬರು ನೋಡಿ ಮತ್ತೊಬ್ಬರು ಎನ್ನುವಂತೆ ಕಾಫಿ ಸೆಂಟರ್‌ಗಳು ತೆರೆದುಕೊಳ್ಳುತ್ತಲೇ ಇವೆ.

ಎಲ್ಲವೂ ಚೆನ್ನಾಗಿಯೇ ನಡೆಯುತ್ತಿವೆ. ದಿನದಲ್ಲಿ ನೂರರಿಂದ ಇನ್ನೂರು ಕಾಫಿ/ಚಹಾ ಖರ್ಚಾದರೆ ಸಾಕು, ಅದು ಆ ದಿನಕ್ಕೆ ಲಾಭವೆ. ನಗರಗಳಲ್ಲಿ ನಿವೃತ್ತರಾದವರಿಂದ ಹಿಡಿದು ಶಾಲಾ ಕಾಲೇಜಿನ ಮಕ್ಕಳು ಸೇವಿಸುವ ಅಭ್ಯಾಸಕ್ಕೆ ಒಳಗಾಗಿದ್ದಾರೆ. ನಿತ್ಯವೂ ಕನಿಷ್ಟ ಮೂರು ಕಪ್‌ಗಳನ್ನು ಕುಡಿಯುತ್ತಾರೆ. ಬೀಡಿ-ಸಿಗರೇಟ್ ಚಟ ಇದ್ದವರಿಗೆ ಇದರ ಸೇವನೆಗೆ ಮಿತಿ ಇರದು. ಸ್ವಚ್ಛತೆಯನ್ನು ಕಾಪಾಡಿಕೊಳ್ಳದಿರುವ ಹೊರರಾಜ್ಯದವರ ಗೂಡಂಗಡಿಗಳು ಬೀಡಿಸಿಗರೇಟಿನ ಹೊಗೆಯಿಂದ ತುಂಬಿರುತ್ತವೆಯಾದರೂ ಹೆಚ್ಚು ವ್ಯಾಪಾರ ನಡೆಯುವುದು ಇಲ್ಲಿಯೇ. ಏಕೆಂದರೆ ಅತ್ಯಂತ ಕಡಿಮೆ ದರದಲ್ಲಿ ರುಚಿ ಹಾಗೂ ಶುಚಿ ಇಲ್ಲದೆ ಚಹಾವನ್ನು ಮಾರುತ್ತಾರೆ, ಗ್ರಾಹಕರಿಗೆ ಸಿಗರೇಟಿನ ಹೊಗೆಯಲ್ಲಿ ಬಿಸಿಯ ತಾಪ ಹೊರತು ಪಡಿಸಿ ಏನೂ ಕಾಣದು.

ನಿತ್ಯವೂ 3-4 ಕಪ್ ಚಹಾ ಸೇವನೆ ಹಾಗೂ ಹವಾಮಾನಕ್ಕೆ ಅನುಗುಣವಾಗಿ 10 ಕಪ್ ಚಹಾ ಕುಡಿಯುವ ಜನರಿದ್ದಾರೆ. ಅಂಕಿ-ಅಂಶಗಳ ಪ್ರಕಾರ ಭಾರತೀಯರು 2023ರಲ್ಲಿ 11,86,000 ಮೆಟ್ರಿಕ್ ಟನ್‌ಗಳಷ್ಟು ಚಹಾ ಪುಡಿ ಬಳಕೆ ಮಾಡಿದರೆ ಕಾಫಿ ಸೇವನೆಯಲ್ಲಿ 1,15,000 ಮೆಟ್ರಿಕ್ ಟನ್ ಬಳಸಿದ್ದೇವೆ.

ಉತ್ತರ ಕರ್ನಾಟಕ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಚಹಾ ಸೇವಿಸಿದರೆ ದಕ್ಷಿಣದ ನಗರ ಪ್ರದೇಶಗಳಲ್ಲಿ ಚಹಾಗಿಂತ ಹೆಚ್ಚು ಕಾಫಿ ಸೇವಿಸುತ್ತಾರೆ. ಚಹಾ ಮತ್ತು ಕಾಫಿ ಪುಡಿಯ ಮಾರುಕಟ್ಟೆಯಲ್ಲಿ ಬೆಳವಣಿಗೆಯ ಅಂಶವೆಂದರೆ ಕಾಫಿ ಸೇವಿಸುವುದರಿಂದ ಆರೋಗ್ಯ ಪ್ರಯೋಜನಗಳ ಬಗ್ಗೆ ಹೆಚ್ಚುತ್ತಿರುವ ಅರಿವು, ಚಹಾದಲ್ಲಿ ಹೃದಯ ಸಂಬಂಧಿ ಕಾಯಿಲೆಗಳು, ಮಧುಮೇಹ ಮತ್ತು ಕ್ಯಾನ್ಸರ್‌ಗಳಂತಹ ದೀರ್ಘ ಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುವ ಅಂಶಗಳು ಸಮೃದ್ಧವಾಗಿವೆ. ಜೊತೆಗೆ ಕಾಫಿಯಲ್ಲಿ ಕೆಫಿನ್ ಹಾಗೂ ಉತ್ತೇಜಕ ನೀಡುವ ಅಂಶ ಇರುವುದರಿಂದ, ಹೆಚ್ಚು ಸೇವಿಸುವಂತಿಲ್ಲ. ಅತಿಯಾದರೆ ಅಮೃತವೂ ವಿಷವಾಗುವುದು.

ಒಂದು ಲೀಟರ್ ಹಾಲಿಗೆ ಗುಣಮಟ್ಟದ ಕನಿಷ್ಟ 20 ಕಪ್ ಚಹಾವನ್ನು ತಯಾರಿಸಬಹುದು, ಹಾಲು ಸಕ್ಕರೆ, ಪುಡಿ ಮತ್ತು ಇತರೆ ಸೇರಿ ರೂ.100 ಖರ್ಚಾಗುವುದು. ಒಂದು ಕಪ್ ಚಹಾವನ್ನು ರೂ 15ರಿಂದ 30ರವರೆಗೆ ಮಾರಾಟ ಮಾಡುತ್ತಾರೆ, ಲಾಭದ ಲೆಕ್ಕಾಚಾರವನ್ನು ಇಷ್ಟೇ ಎಂದು ನಿರ್ಧರಿಸುವುದು ಕಷ್ಟ. ವಿಪರ್ಯಾಸವೆಂದರೆ ಹಾಲಿನ ದರ ಒಂದು ಲೀಟರ್‌ಗೆ ನಾಲ್ಕು ರೂ.ಹೆಚ್ಚಿಸಿದರೆ ಹೋಟೆಲ್‌ನವರು ಪ್ರತೀ ಕಪ್‌ಗೆ 2-5 ರೂ. ಹೆಚ್ಚಿಸುತ್ತಾರೆ, ಶ್ರೀಮಂತರನ್ನು ಗುರಿಯಾಗಿಸಿರುವ ಸುಸಜ್ಜಿತವಾದ ಕಾಫಿ, ಟೀ ಮಾರಾಟ ಮಳಿಗೆಗಳಲ್ಲಿ 1 ಕಪ್ ಚಹಾಕ್ಕೆ ರೂ. 225 ರವರೆಗೂ ಇದೆ. ಸೈಕಲ್‌ನಲ್ಲಿ ಚಹಾ ಕ್ಯಾನ್ ಹೊತ್ತು ಮಾರುವವರು ದಿನಕ್ಕೆ ಎರಡು ಸಾವಿರಕ್ಕಿಂತಲೂ ಹೆಚ್ಚು ಲಾಭ ಗಳಿಸುವುದುಂಟು.

ಲಾಭದ ರುಚಿ ಕಂಡವರು ಬಿಡುತ್ತಾರೆಯೇ ನಗರಗಳಲ್ಲಿ ಒಬ್ಬನೇ ಹತ್ತಾರು ಕಡೆ ಬ್ರಾಂಡ್ ಹೆಸರಲ್ಲಿ ಕಾಫಿ/ಚಹಾ ಅಂಗಡಿಗಳನ್ನು ತೆರೆದು ಹಣ ಗಳಿಸುತ್ತಿದ್ದಾರೆ, ಕನಿಷ್ಟ ಬಂಡವಾಳ ಹಾಕಿ ಗರಿಷ್ಟ ಲಾಭ ಪಡೆಯ ಬಹುದಾದ ಕ್ಷೇತ್ರ ಇದು. ಕಾಫಿ/ಚಹಾಗಳಲ್ಲಿ ವಿಧವಿಧ ವಾದ ಮನ ಸೆಳೆಯುವ ಫ್ಲೇವರ್‌ಗಳಿವೆ, ವ್ಯಾಪಾರವೆಂದರೆ ಗ್ರಾಹಕರ ಬಲಹೀನತೆಯನ್ನು ನಗದು ಮಾಡಿಕೊಳ್ಳುವುದೇ ಅಲ್ಲವೇ?.

ಚಹಾ ಉತ್ಪಾದನೆಯಲ್ಲಿ ಚೀನಾವು ಮೊದಲ ಸ್ಥಾನದಲ್ಲಿದೆ. ಇದು ವಾರ್ಷಿಕ 3.00 ಲಕ್ಷ ಮೆಟ್ರಿಕ್ ಟನ್‌ಗಿಂತಲೂ ಹೆಚ್ಚು ಪ್ರಮಾಣದ ಚಹಾವನ್ನು ರಫ್ತು ಮಾಡುತ್ತದೆ. ಕಾಫಿ ಉತ್ಪಾದನೆಯಲ್ಲಿ ಬ್ರೆಜಿಲ್ ಮುಂದಿದೆ. ವಾರ್ಷಿಕ 2.68 ಮಿಲಿಯನ್ ಮೆಟ್ರಿಕ್ ಟನ್ ಕಾಫಿ ಉತ್ಪಾದಿಸುತ್ತದೆ.

ಭಾರತದಲ್ಲಿ ಚಹಾ ಕುಡಿಯುವ ಕುಟುಂಬಗಳು ಶೇ.80 ರಷ್ಟಿದ್ದರೆ ಕಾಫಿಯನ್ನು ಶೇ.15-20ರಷ್ಟು ಕುಟುಂಬಗಳು ಕುಡಿಯುತ್ತಾರೆ. ಪ್ರತೀ ವರ್ಷ ಸರಾಸರಿ ಒಬ್ಬ ವ್ಯಕ್ತಿ ಬಳಸುವ ಚಹಾ 750 ಗ್ರಾಂ. ವಿಶ್ವದ ಚಹಾ ಉತ್ಪಾದನೆಯಲ್ಲಿ ಭಾರತ ಎರಡನೇ ಅತಿದೊಡ್ಡ ರಾಷ್ಟ್ರ, ರಫ್ತು ಮಾಡುವುದರಲ್ಲಿ 4ನೇ ಸ್ಥಾನದಲ್ಲಿದೆ. ಉತ್ಪಾದನೆಯ ಶೇ.83ರಷ್ಟು ನಮ್ಮಲ್ಲಿಯೇ ಬಳಕೆ ಆಗುತ್ತಿದೆ.

ಭಾರತೀಯರು ಚಹಾ ಮತ್ತು ಕಾಫಿಯನ್ನು ಒಂದು ಪಾನೀಯವಾಗಿ ಪರಿಗಣಿಸಿಲ್ಲ. ಅದು ವ್ಯಕ್ತಪಡಿಸುವ ಭಾವನೆಯಾಗಿದೆ. ಬೆಳಗಿನ ದಿನಚರಿ ಪ್ರಾರಂಭ ಇವುಗಳನ್ನು ಕುಡಿಯುವುದರಿಂದ ಆಗುತ್ತದೆ. ಕಚೇರಿಯ ವಿರಾಮದಲ್ಲಿ, ಸಾಮಾಜಿಕ ಕೂಟ ಅಥವಾ ಬೇರೆ ಯಾವುದೇ ಸಂದರ್ಭಗಳಿರಲಿ ಕಾರ್ಮಿಕರಿಂದ ಉನ್ನತ ಸ್ಥಾನದಲ್ಲಿ ಇರುವ ಎಲ್ಲರಿಗೂ ಬೇಕು. ಇವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿವೆ. ಬರವಣಿಗೆ ನಿಲ್ಲಿಸಿ ಸಧ್ಯ ನಾನು ರಿಲ್ಯಾಕ್ಸ್ ಆಗಬೇಕಾಗಿದೆ. ನಾನೀಗ ಒಂದು ಕಪ್ ಬಿಸಿಬಿಸಿ ಚಹಾ ಕುಡಿಯಲೇ ಬೇಕು, ಲೇಖನವನ್ನು ಓದಿದ ನಿಮಗೂ ಹಾಗೆ ಅನಿಸಿರಬಹುದಲ್ಲವೆ!

ಭಾರತದ ಭವಿಷ್ಯ ರೂಪುಗೊಳ್ಳುವುದು ಪಠ್ಯಗಳಿಂದ; ಟಿವಿ, ಮೊಬೈಲ್‌ಗಳಿಂದಲ್ಲ

ಮೈಸೂರು, ಅ.26(ಬಿಎಲ್‌ಯು)- ಭಾರತದ ಭವಿಷ್ಯ ರೂಪುಗೊಳ್ಳುವುದು ಪಠ್ಯಗಳಿಂದಲೇ ಹೊರತು ಟಿವಿ, ಮೊಬೈಲ್‌ಗಳಿಂದ ಅಲ್ಲ ಎಂದು ಲೇಖಕ ಡಾ.ಜಿ.ಬಿ.ಹರೀಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹರ್ಷಿ ಶಾಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಸಾವರ್ಕರ್ ಪ್ರತಿಷ್ಠಾನ ಆಯೋಜಿಸಿದ್ದ ಸಮರ್ಥ ಶಿಕ್ಷಕ, ರಾಷ್ಟ್ರ ರಕ್ಷಕ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಪಠ್ಯ ಸ್ನೇಹಿತನಾಗಬೇಕೆ ಹೊರತು ಟಿವಿ ಸ್ನೇಹತನಾಗಬಾರದು ಎಂದರು.

ವಿದ್ಯಾರ್ಥಿಗಳಿಗೆ ಎದುರಾಗುವ ಪ್ರಶ್ನೆ ಮತ್ತು ಸಂಶಯಗಳನ್ನು ಶಿಕ್ಷಕರು ಪರಿಹರಿಸುತ್ತಾರೆಯೇ ಹೊರತು, ಟಿವಿ, ಮೊಬೈಲ್‌ಗಳು ಅಲ್ಲ ಎಂದು ಹೇಳಿದ ಅವರು, ಟಿವಿ ಮತ್ತು ಮೊಬೈಲ್‌ನಿಂದ ಮಕ್ಕಳ ವಿದ್ಯಾಭ್ಯಾಸ ಹಾಗೂ ಭವಿಷ್ಯದ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರುತ್ತದೆ ಎಂದು ಎಳೆ ಎಳೆಯಾಗಿ ಬಿಡಿಸಿಟ್ಟರು.

ಲೇಖಕ ಡಾ.ಹರೀಶ್ ಅಭಿಮತ



ಸಮಾಜದ ತಪ್ಪು, ಒಪ್ಪುಗಳನ್ನು ಮಕ್ಕಳಿಗೆ ಹೇಳುವ ಮೂಲಕ ಸ್ವಾಸ್ಥ್ಯ ಸಮಾಜದ ಅಂಶಗಳನ್ನು ಶಿಕ್ಷಕರು ಮನದಟ್ಟು ಮಾಡುತ್ತಾರೆ. ಆದರೆ ಈ ಕೆಲಸವನ್ನು ಟಿವಿ, ಮೊಬೈಲ್‌ಗಳು ಮಾಡುವುದಿಲ್ಲ. ಈ ಹಿನ್ನೆಲೆ ಟಿವಿ ಹಾಗೂ ಮೊಬೈಲ್‌ಗಳನ್ನು ಮಕ್ಕಳಿಂದ ದೂರ ಇಡಿ ಎಂದು ಸಲಹೆ ನೀಡಿದರು.

ಯುವ ಮನಸ್ಸುಗಳ ತಲೆಯಲ್ಲಿ ಧನಾತ್ಮಕ ಚಿಂತನೆಗಳನ್ನು ತುಂಬಬೇಕು. ಈ ಮೂಲಕ ಅವರು ಸಮಾಜಕ್ಕೆ ಕೊಡುಗೆಯಾಗಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕರು ಶಕ್ತಿಯುತವಾಗಿ ತಯಾರಾಗಬೇಕು ಎಂದರು.

ಬಲಿಷ್ಠ ಪ್ರಜಾಪ್ರಭುತ್ವವಿರುವ ವಿಶ್ವದ ಏಕೈಕ ರಾಷ್ಟ್ರವೆಂದರೆ ಅದು ಭಾರತ. ಭಾರತದ ಸಂಸ್ಕೃತಿ, ಪರಂಪರೆ ಇಡೀ ವಿಶ್ವಕ್ಕೆ ಮಾದರಿ. ಈ ಹಿನ್ನೆಲೆ ಮಕ್ಕಳಿಗೆ ಭಾರತದ ಇತಿಹಾಸದ ತಿರುಳು ತಿಳಿಸಬೇಕು. ಈ ವಿಚಾರವನ್ನು ಈಗಲೇ ತಿಳಿಸದಿದ್ದರೆ ಮುಂದೆ ಕೆಲವರು ಭಾರತದ ಬಗ್ಗೆ ತಪ್ಪು ಮಾಹಿತಿ ನೀಡುವ ಸಾಧ್ಯತೆ ಇರುತ್ತದೆ ಎಂದರು.

ಇದರಿಂದ ಭವಿಷ್ಯದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುವ ಮಕ್ಕಳಿಗೆ ಭಾರತದ ಬಗ್ಗೆ ತಪ್ಪು ಅಭಿಪ್ರಾಯ ಮೂಡುತ್ತದೆ. ಇಂತವರನ್ನು ದೇಶ ವಿರೋಧಿಗಳು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಎಚ್ಚರಿಸಿದರು. ಮಾಹಿತಿ ತಂತ್ರಜ್ಞಾನದ ಜಗತ್ತಿನಲ್ಲಿ ಬೆರಳ ತುದಿಯಲ್ಲೆ ಬಹಳಷ್ಟು ವಿಚಾರಗಳು ದೊರೆಯಲಿವೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಶಿಕ್ಷಕರು ಮಕ್ಕಳಿಗೆ ವಿಚಾರಗಳ ಮನನ ಮಾಡಬೇಕು. ಶಿಕ್ಷರು ಹೇಳಿದ ಮಾತುಗಳು ಮಕ್ಕಳಿಗೆ ಸ್ಫೂರ್ತಿಯಾಗಬೇಕು ಎಂದು ಡಾ.ಹರೀಶ್ ಸಲಹೆಯಿತ್ತರು. ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಿಂದ ನೂರಾರು ಶಿಕ್ಷಕರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ವಾಯುಭಾರ ಕುಸಿತ: ಕರ್ನಾಟಕ, ತಮಿಳುನಾಡಲ್ಲಿ ಭಾರಿ ಮಳೆ ಸಾಧ್ಯತೆ

ಚೆನ್ನೈ: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತವಾಗಿದ್ದು ಮುಂದಿನ 24 ಗಂಟೆಗಳ ಕಾಲ ತಮಿಳುನಾಡು ಮತ್ತು ಪುದುಚೇರಿಯಲ್ಲಿ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಹವಾಮಾನ ಇಲಾಖೆ, ಅ.27 ಮತ್ತು 28ರಂದು ತಮಿಳುನಾಡು, ಕೇರಳದಲ್ಲಿ ಭಾರಿ ಮಳೆಯಲಾಗಿದೆ. ಅ.28ರವರೆಗೆ ಕರಾವಳಿ ಕರ್ನಾಟಕದ ಭಾಗದಲ್ಲಿ, ಅ.30ರವರೆಗೆ ಆಂಧ್ರಪ್ರದೇಶದಲ್ಲಿ ಭಾರಿ ಮಳೆಯಾಗಲಿದೆ ಎಂದು ತಿಳಿಸಿದೆ. ಗಾಳಿಯು ಗಂಟೆಗೆ 10 ಕಿ.ಮೀ ವೇಗದಲ್ಲಿ ಬೀಸಲಿದ್ದು, ಅ.28ರ ಹೊತ್ತಿಗೆ ಚಂಡಮಾರುತವಾಗಿ ತಿರುಗುವ ಸಾಧ್ಯತೆಯಿದೆ. ಚಂಡಮಾರುತ ಕಾಕಿನಾಡದ ಸುತ್ತಮುತ್ತಲಿನ ಮಚಲಿಪಟ್ಟಣಂ ಮತ್ತು ಕಳಿಂಗಪಟ್ಟಣಂ ನಡುವೆ ಆಂಧ್ರಪ್ರದೇಶದ ಕರಾವಳಿಯನ್ನು ದಾಟುವ ಸಾಧ್ಯತೆಯಿದೆ. ಅ.28ರವರೆಗೆ ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದ್ದು, ಈಗಾಗಲೇ ಮೀನುಗಾರಿಕೆಗೆ ತೆರಳಿರುವವರು ಬೋಟುಗಳ ಸಮೇತ ತೀರಕ್ಕೆ ವಾಪಸ್ಸಾಗುವಂತೆ ಹವಾಮಾನ ಇಲಾಖೆ ಸೂಚನೆ ನೀಡಲಾಗಿದೆ.

ಡಾ.ಅಂಬೇಡ್ಕರ್ ಸಂವಿಧಾನದ ಆಶಯಗಳು ವಾಲ್ಮೀಕಿ ರಾಮಾಯಣದಲ್ಲೂ ಉಲ್ಲೇಖ

ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಅಭಿಮತ



ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಅ.26(ವಿವಿಹೆಚ್)- ಡಾ.ಬಿ.ಆರ್.ಅಂಬೇಡ್ಕರ್ ನೀಡಿರುವ ನಮ್ಮ ಸಂವಿಧಾನದಲ್ಲಿರುವ ಆಶಯಗಳು ವಾಲ್ಮೀಕಿ ರಾಮಾಯಣದಲ್ಲೂ ಕಾಣಸಿಗುತ್ತವೆ ಎಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಾಲ್ಮೀಕಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಾಲ್ಮೀಕಿ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ದಿನಮಾನದಲ್ಲಿ ಎಲ್ಲರೂ ಜಾತಿ-ಭೇದ ಮರೆತು ಒಂದಾಗಬೇಕಿದೆ. ಅಂಬೇಡ್ಕರ್, ವೇದವ್ಯಾಸ, ಬಸವಣ್ಣ, ವಿವೇಕಾನಂದರು ಜಾತಿ, ಧರ್ಮದ ಎಲ್ಲೆ ಮೀರಿದ್ದ, ಸರ್ವಧರ್ಮ, ಸರ್ವರಿಗೂ ಮಾದರಿಯಾದ ಮಹಾನ್ ನಾಯಕರು. ಅಂತಹ ಮಹನೀಯರನ್ನು ನೆನೆಯುವುದು ಇಡೀ ಸಮಾಜದ ಆದ್ಯ ಕರ್ತವ್ಯ ಎಂದರು.

ಇಡೀ ವಿಶ್ವ ಗುರುತಿಸುವಂತಹ ರಾಮಾಯಣ ಬರೆದ ವಾಲ್ಮೀಕಿ ಅವರ ಕೊಡುಗೆ ವಿಶ್ವಕ್ಕೆ ಮಾದರಿಯಾಗಿರುವಂತಹದ್ದು. ಸರ್ವರಿಗೂ ಸಮಾನತೆ, ಸಹಬಾಳ್ವೆ ಬಗ್ಗೆ ಮಾತನಾಡುತಿದ್ದು, ಆ ಪರಿಕಲ್ಪನೆಯನ್ನು ಅವತ್ತಿನ ಕಾಲಘಟ್ಟದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಾನತೆ ಜೊತೆಗೆ ಸ್ತ್ರೀ ಸಮಾನತೆಗೆ ಹೆಚ್ಚಿನ ಪ್ರಾಮುಖ್ಯ ನೀಡಿದ, ಸರ್ವರಲ್ಲಿಯೂ ಸಮಾನತೆ ಕಂಡ ಮಹಾನ್ ಚೇತನ ವಾಲ್ಮೀಕಿ ಎಂದು ಶ್ಲಾಘಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಪಿ.ಮಂಜುನಾಥ್ ಮಾತನಾಡಿ, ಜಗತ್ತಿನಲ್ಲಿ ಅತೀಹೆಚ್ಚು ಪ್ರಸಿದ್ಧಿ ಪಡೆದಿರುವ ಮಹಾಕಾವ್ಯ ವಾಲ್ಮೀಕಿ ರಾಮಾಯಣವಾಗಿದೆ. ರಾಮಾಯಣದ ಆದರ್ಶ, ಮೌಲ್ಯಗಳನ್ನು ಜನರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಉತ್ತಮ ಜೀವನ ನಡೆಸಬಹುದಾಗಿದೆ ಎಂದರು.

ವಾಲ್ಮೀಕಿ ರಾಮಾಯಣ ಎಲ್ಲಾ ಕಾಲಘಟ್ಟಗಳಿಗೂ ಸಲ್ಲುವ ವಾಸ್ತವ ಸಂಗತಿಗಳನ್ನು ತೆರೆದಿಡುವ ಒಂದು ಕೃತಿಯಾಗಿದೆ. ಹಾಗಾಗಿಯೇ ಈ ಮೂಲ ರಾಮಾಯಣ ರಷ್ಯಾ ಭಾಷೆ ಸೇರಿದಂತೆ 20ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಭಾಷೆಗಳಿಗೆ ತರ್ಜುಮೆಯಾಗಿದೆ. ಇದೇ ಕಾವ್ಯವನ್ನು ಆಧರಿಸಿ ರಚಿಸಿರುವ ಕನ್ನಡ ಮತ್ತು ತೆಲುಗು ಕೃತಿಗೆ ಎರಡು ಜ್ಞಾನಪೀಠ ಪ್ರಶಸ್ತಿ ಲಭಿಸಿವೆ ಎಂದು ರಾಮಾಯಣದ ಪ್ರಸ್ತುತತೆಯ ಬಗ್ಗೆ ವಿವರಿಸಿದರು.

ಈ ಮಹಾಕಾವ್ಯ ಸಾವಿರಾರು ಕವಿಗಳ ಮೇಲೆ ಹಾಗೂ ತಲೆ ತಲೆಮಾರಿನ ಭಾರತೀಯ ಸಾಹಿತ್ಯದ ಪರಂಪರೆಯ ಮೇಲೆ ಆಗಾಧ ಪ್ರಭಾವ ಬೀರಿದೆ. ಆದರಿಂದಲೇ ಕಾಳಿದಾಸ, ವಾಲ್ಮೀಕಿಯನ್ನು 'ಕವಿ ಕುಲದ ಗುರು' ಎಂದು ಹೆಸರಿಸಿದ್ದಾನೆ. ಜನರ ಬದುಕಿಗೆ ಸಾಂತ್ವನ ನೀಡುವ, ಮಾರ್ಗದರ್ಶನ ನೀಡುವ, ನೈತಿಕಮೌಲ್ಯ, ಸಾಮಾಜಿಕ ಮೌಲ್ಯವನ್ನು ಪ್ರತಿಪಾದಿಸುವ ಮಹಾಕಾವ್ಯ ರಾಮಾಯಣ ಎಂದು ಅಭಿಪ್ರಾಯಿಸಿದರು. ಇದೇ ವೇಳೆ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 10 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 15 ಸಾಧಕರಿಗೆ ವಾಲ್ಮೀಕಿ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಂಜುನಾಥ್, ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಡಾ.ಮಧುಸೂದನ್, ಸಂಘದ ಅಧ್ಯಕ್ಷ ನಾಗಲಿಂಗಪ್ಪ, ದೈಹಿಕ ಪರಿವೀಕ್ಷಕ ಮೂರ್ತಿ ನಾಯಕ, ಕರಿಯಪ್ಪ ನಾಯಕ, ಕೇಶವ ಇದ್ದರು.

ಇಂದು ಡಾ.ವಿಷ್ಣು ಗಾನೋತ್ಸವ

ಮೈಸೂರು,ಅ.26(ಜಿಎ)-ಡಾ.ವಿಷ್ಣುವರ್ಧನ್ ಗಾನ ವೃಂದದ ಎನ್ ಮೆಲೋಡಿಸ್‌ನ ವೀಣಾ ಶಾರದಾ ಇವೆಂಟ್ಸ್ ವತಿಯಿಂದ ಅ.27ರಂದು ಸಂಜೆ 4 ಗಂಟೆಗೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಾ.ವಿಷ್ಣುವರ್ಧನ್ ಗಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಕುಮಾರಸ್ವಾಮಿ ಈ ವಿಷಯ ತಿಳಿಸಿ, ಸೆ.18ರಂದೇ ವಿಷ್ಣುವರ್ಧನ್ ಹುಟ್ಟುಹಬ್ಬವಿತ್ತು. ಆದರೆ ಆ ವೇಳೆ ಸಭಾಂಗಣ ದೊರೆಯದ ಕಾರಣ ಹಾಗೂ ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡುತ್ತಿರುವ ಸಂತಸದ ಭಾಗವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ಇದು ಕರೋಕೆ ಕಾರ್ಯಕ್ರಮವಾಗಿದ್ದು, ಒಟ್ಟು 40 ಹಾಡುಗಳನ್ನು ಹಾಡಲಾಗುವುದು ಎಂದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ರಾಜೀವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಸ್.ಬಾಲರಾಜ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ವೀಣಾ ಶಾರದ, ರುಕ್ಮಿಣಿ ಶ್ರೀನಿವಾಸ್, ಶಾಂತಕುಮಾರ್, ಸುರೇಶ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಶ್ರೀಗಳಿಗೆ ಶುಭಾಶಯ



ಮೈಸೂರು ತಾಲೂಕಿನ ಪುರ ಮಠದ ಪೀಠಾಧ್ಯಕ್ಷರಾದ ಚಂದ್ರಶೇಖರ ಸ್ವಾಮೀಜಿಯವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ ಪಲಪುಷ್ಪ-ತಾಂಬೂಲ ಹಾಗೂ ಸ್ಮರಣಿಕೆ ನೀಡಿ, ಶ್ರೀಗಳಿಗೆ ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ರಂಗಸ್ವಾಮಿ, ಶಿವಕುಮಾರ್, ನಾಗೇಂದ್ರ ಮತ್ತು ಪಟೇಲ್ ಉಪಸ್ಥಿತರಿದ್ದರು.

ಕಾಲುಜಾರಿ ನಾಲೆಗೆ ಬಿದ್ದು ಅಡುಗೆ ಭಟ್ಟ ಸಾವು

ಮೈಸೂರು, ಅ.26- ಗೃಹಪ್ರವೇಶ ಸಮಾರಂಭದ ಅಡುಗೆ ಕೆಲಸಕ್ಕೆ ಬಂದಿದ್ದ ಹುಣಸೂರಿನ ವ್ಯಕ್ತಿಯೊಬ್ಬರು, ಕಾಲುಜಾರಿ ವರುಣ ನಾಲೆಗೆ ಬಿದ್ದು ಸಾವನ್ನಪ್ಪಿದ್ದಾರೆ.



ಹುಣಸೂರಿನ ಮಾರುತಿ ಬಡಾವಣೆ ನಿವಾಸಿ ಪ್ರಭು(41) ಸಾವನ್ನಪ್ಪಿದ್ದು, ನಾಲೆಗೆ ಬಿದ್ದು ಎರಡು ದಿನಗಳ ನಂತರ ಇವರ ಶವ ಪತ್ತೆಯಾಗಿದೆ. ಇವರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಮೈಸೂರಿನ ಶ್ಯಾದನಹಳ್ಳಿಯಲ್ಲಿ ಗೃಹಪ್ರವೇಶ ಸಮಾರಂಭದ ಅಡುಗೆ ಕೆಲಸವಿದೆ ಎಂದು ಅ.23ರಂದು ಮಧ್ಯಾಹ್ನ ಪ್ರಭು ಅವರು ಸುರೇಂದ್ರ ಮತ್ತಿತರರೊಂದಿಗೆ ಬಂದಿದ್ದರು. ಆದರೆ ಅಂದು ರಾತ್ರಿ 7.30ರ ಸಮಯದಲ್ಲಿ ಬಹಿರ್ದೆಸೆಗೆಂದು ವರುಣ ನಾಲೆ ಬಳಿ ಬಂದಿದ್ದಾಗ ಕಾಲುಜಾರಿ ಪ್ರಭು ಅವರು ನೀರಿಗೆ ಬಿದ್ದಿದ್ದಾರೆ. ನೀರಿನ ರಭಸ ಹೆಚ್ಚಾಗಿದ್ದರಿಂದ ಜೊತೆಯಲ್ಲಿದ್ದವರು ರಕ್ಷಿಸಲು ಸಾಧ್ಯವಾಗಿಲ್ಲ.

ಈ ಸಂಬಂಧ ಪ್ರಭು ಅವರ ಪತ್ನಿ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಮೇಟಗಳ್ಳಿ ಠಾಣೆ ಪೊಲೀಸರು, ನಾಲೆಗೆ ಬಿದ್ದು ಕಾಣೆಯಾಗಿದ್ದ ಪ್ರಭುವಿನ ಹುಡುಕಾಟಕ್ಕೆ ಕಾರ್ಯಾಚರಣೆ ನಡೆಸಿದ್ದರಾದರೂ ಪತ್ತೆಯಾಗಿರಲಿಲ್ಲ. ಆದರೆ ನಿನ್ನೆ ಮೈಸೂರು ದಕ್ಷಿಣ ಪೊಲೀಸ್ ಠಾಣೆ ವ್ಯಾಪ್ತಿಯ ಜಲ್‌ಮಹಲ್ ರೆಸಾರ್ಟ್ ಬಳಿ ನಾಲೆಯಲ್ಲಿ ಪ್ರಭು ಅವರ ಶವ ಪತ್ತೆಯಾಗಿದೆ. ದಕ್ಷಿಣ ಠಾಣೆ ಪೊಲೀಸರು, ವೈದ್ಯಕೀಯ ಪರೀಕ್ಷೆ ಬಳಿಕ ಪ್ರಭು ಅವರ ದೇಹವನ್ನು ಅವರ ವಾರಸುದಾರರಿಗೆ ಒಪ್ಪಿಸಿದ್ದಾರೆ ಎಂದು ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ಅರುಣ್ ತಿಳಿಸಿದ್ದಾರೆ.

ಕ್ರಿಕೆಟ್ ಕಪ್



ಮೈಸೂರಿನ ರೈಲ್ವೆ ಕ್ರೀಡಾಂಗಣದಲ್ಲಿ ನಡೆದ ಮೈಸೂರು ಸ್ಟ್ರೈಕರ್ಸ್ ಕಪ್-2025 ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ಮಹಾರಾಜ ತಂಡವು ಪ್ರಥಮ ಸ್ಥಾನದೊಂದಿಗೆ ಕಪ್ ಗೆದ್ದುಕೊಂಡಿತು.

ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ

ಇಂದು ಚುನಾವಣಾ ಆಯೋಗದಿಂದ ಸುದ್ದಿಗೋಷ್ಠಿ

ನವದೆಹಲಿ, ಅ.26- ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುವ ಬಗ್ಗೆ ಮಾಹಿತಿ ನೀಡಲು ಚುನಾವಣಾ ಆಯೋಗ ಸೋಮವಾರ(ಅ.27) ಸುದ್ದಿಗೋಷ್ಠಿ ಕರೆದಿದೆ.

ಸೋಮವಾರ ಸಂಜೆ 4.45ಕ್ಕೆ ಸುದ್ದಿಗೋಷ್ಠಿ ಕರೆದಿರುವ ಆಯೋಗ, ಹಂತ ಹಂತವಾಗಿ ಎಸ್‌ಐಆರ್ ನಡೆಸುವ ಬಗ್ಗೆ ಮಾಹಿತಿ ನೀಡುವ ಸಾಧ್ಯತೆ ಇದೆ. ಇದರಲ್ಲಿ 2026ರಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳು ಸೇರಿ 10 ರಿಂದ 15 ರಾಜ್ಯಗಳಲ್ಲಿ ಮೊದಲ ಹಂತದಲ್ಲಿ ಎಸ್‌ಐಆರ್ ನಡೆಸುವ ಬಗ್ಗೆ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

2026ರಲ್ಲಿ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತ ಸುಖಬೀರ್‌ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಇರಲಿದ್ದಾರೆ.

ಬಿಹಾರದಲ್ಲಿ ಈಗಾಗಲೇ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ನ.6 ಮತ್ತು 11 ರಂದು ಚುನಾವಣೆ ನಿಗದಿಯಾಗಿದೆ.

ಕ್ರೀಡೆಯಿಂದ ದೈಹಿಕ, ಮಾನಸಿಕ ಸದೃಢತೆಗಳಿಸಲು ಸಾಧ್ಯ

ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಅಭಿಮತ



ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ವಿಜಯ ವಿಠಲ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಅ.26- ಕ್ರೀಡಾ ಚಟುವಟಿಕೆಗಳಿಂದ ದೈಹಿಕ ಹಾಗೂ ಮಾನಸಿಕ ಸದೃಢತೆಗಳಿಸಲು ಸಾಧ್ಯವಿದೆ ಎಂದು ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್. ಸುಂದರ್ ರಾಜ್ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಭಾನುವಾರ ನಡೆದ ವಿಜಯ ವಿಠಲ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೀಡೆಯಿಂದ ಆರೋಗ್ಯದ ಜೊತೆಗೆ ಏಕಾಗ್ರತೆ ಮೂಲಕ ವಿದ್ಯಾಭ್ಯಾಸಕ್ಕೂ ಅನುಕೂಲವಾಗುತ್ತದೆ. ದೈಹಿಕ ಹಾಗೂ ಮಾನಸಿಕವಾಗಿ ಸದೃಢವಾಗಬಹುದು. ಹಾಗಾಗಿ ಶಿಕ್ಷಣದ ಜೊತೆಗೆ ಕ್ರೀಡಾ ಚಟುವಟಿಕೆ ಹಾಗೂ ಉತ್ತಮ ಸಂಸ್ಕಾರ ಕಲಿಸುವುದಕ್ಕೂ ಆದ್ಯತೆ ನೀಡಬೇಕಿದೆ ಎಂದರು.

ರಾವ್ ರೋಲರ್ ಸ್ಕೇಟಿಂಗ್ ಅಕಾಡೆಮಿಯ ಮುಖ್ಯ ಕೋಚ್, ಏಕಲವ್ಯ ಪ್ರಶಸ್ತಿ ಪುರಸ್ಕೃತ ಕೆ.ಶ್ರೀಕಾಂತ್ ರಾವ್ ಅವರು, ಕ್ರೀಡೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ವಿಜೇತರೆ ಎಂದು ಪ್ರೋತ್ಸಾಹಿಸಿದರಲ್ಲದೆ, ವಿದ್ಯಾರ್ಥಿಗಳಲ್ಲಿ ಬೆಳೆಯುವ ಶಿಸ್ತು ಹಾಗೂ ದೃಢಸಂಕಲ್ಪ ಬೆಳೆಯುವಲ್ಲಿ ಕ್ರೀಡೆಯ ಮಹತ್ವದ ಪಾತ್ರವನ್ನು ವಿವರಿಸಿದರು.

ವಿಜಯ ವಿಠಲ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಕೆ.ಎನ್.ಪ್ರಸಾದ್ ಅವರು, ಪ್ರತಿಯೊಂದು ಕ್ಷೇತ್ರದಲ್ಲಿಯೂ ಪಾಲ್ಗೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ವಾಸುದೇವಭಟ್, ಗೌರವ ಕಾರ್ಯದರ್ಶಿ ಸಿ.ಎ.ವಿಶ್ವನಾಥ, ವಿಜಯ ವಿಠಲ ಸಂಯುಕ್ತ ಪಿಯು ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ವಿಜಯವಿಠಲ ವಿದ್ಯಾಶಾಲಾ ಪ್ರಾಂಶುಪಾಲೆ ಎಸ್.ಎ.ವೀಣಾ ಮತ್ತಿತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಜೀವನದಲ್ಲಿ ಸಾಧನೆಗೆ ಚೌಕಟ್ಟು ಹಾಕಿಕೊಳ್ಳಿ

ಚಿತ್ರನಟ, ರಂಗಕರ್ಮಿ ಶ್ರೀನಿವಾಸಪ್ರಭು ಅಭಿಪ್ರಾಯ


ಕಾರ್ಯಕ್ರಮದಲ್ಲಿ ರಂಗಕರ್ಮಿ ಶ್ರೀನಿವಾಸಪ್ರಭು ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ಮಂಡ್ಯ, ಅ.26– ಪ್ರತಿಯೊಬ್ಬರೂ ಜೀವನದಲ್ಲಿ ಸಾಧನೆ ಮಾಡಲು ಚೌಕಟ್ಟು ಹಾಕಿಕೊಳ್ಳುವ ಜೊತೆಗೆ ನಮ್ಮ ಮಿತಿಯನ್ನು ನಾವು ಮೀರಬಾರದು ಎಂದು ಚಿತ್ರನಟ, ರಂಗಕರ್ಮಿ ಶ್ರೀನಿವಾಸಪ್ರಭು ಅಭಿಪ್ರಾಯಪಟ್ಟರು.

ಮಂಡ್ಯದ ಚಿರಂತ ಪ್ರಕಾಶನದ ಆಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ನಡೆದ ಹಿರಿಯ ವಕೀಲ ಕೆ.ಪ್ರಭಾಕರ್ ಅವರ 'ಜಡ್ಜ್‌ಮೆಂಟ್' ಹಾಗೂ ಲೇಖಕಿ ಡಾ.ಸುಮಾರಾಣಿ ಶಂಭು ಅವರ 'ದೇವರ ಹುಡುಕಾಟ'ದಲ್ಲಿ ಕೃತಿಗಳ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಮನುಷ್ಯ ಜೀವನದಲ್ಲಿ ಮಿತಿ ಹಾಕಿಕೊಳ್ಳುತ್ತಾನೆ. ಆದರೆ ಕೆಲವೊಮ್ಮೆ ನಾವೇ ನಮ್ಮ ಮಿತಿ ದಾಟಿ ಮುನ್ನುಗ್ಗಿದಾಗ ಸಾಧನೆ ಸಾಧ್ಯವಾಗುತ್ತದೆ ಎಂದರು.

ಮನುಷ್ಯ ನಿರಂತರವಾಗಿ ಕನಸು ಕಾಣಬೇಕು. ಯಾವಾಗಲೂ ಕನಸುಗಳನ್ನು ನಾವು ಕಳೆದುಕೊಳ್ಳಬಾರದು. ಈ ನಿಟ್ಟಿನಲ್ಲಿ ಲೇಖಕಿ ಸುಮಾರಾಣಿ ಶಂಭು ಅವರು ತಮ್ಮ ಕೃತಿಯಲ್ಲಿ ಚೌಕಟ್ಟು ಹಾಕಿಕೊಳ್ಳದೆ ವಿಶಿಷ್ಟ ದೃಷ್ಟಿಕೋನದೊಂದಿಗೆ ಸಾಹಿತ್ಯ ಕೃಷಿ ಮಾಡಿದ್ದಾರೆ. ಕೃತಿಯಲ್ಲಿ ಇತಿಹಾಸ ಪುರಾಣಗಳ ಉಲ್ಲೇಖವಿದೆ ಎಂದ ಅವರು ಪುಸ್ತಕ ಓದುವ ಸಂಸ್ಕೃತಿ ಸಮಾಜದಲ್ಲಿ ಹೆಚ್ಚಾಗಬೇಕು ಎಂದರು.

ಹಿರಿಯ ಲೇಖಕಿ ರಂಜನಿ ಪ್ರಭು ಮಾತನಾಡಿ, ತಂದೆ ಮಗಳು ಒಂದೇ ವೇದಿಕೆಯಲ್ಲಿ ಪುಸ್ತಕ ಬಿಡುಗಡೆ ಮಾಡುತ್ತಿರುವುದು ಅರ್ಥಪೂರ್ಣವಾಗಿದೆ. ಇದು ಬಾಂಧವ್ಯದ ಬೆಸುಗೆಯ ಸಂಕೇತವಾಗಿದೆ ಎಂದರು.

ಪಾಂಡವಪುರ ವಿಜಯ ಶಿಕ್ಷಣ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಕೆ.ಸೋಮಶೇಖರ ಮಾತನಾಡಿ, ಲೇಖಕಿ ಸುಮಾರಾಣಿ ಶಂಭು ಅವರ ಲೇಖನಿಯಲ್ಲಿ ಭಾವನೆಗಳು ಉತ್ತಮವಾಗಿ ವ್ಯಕ್ತವಾಗಿವೆ. ದೇವರ ಹುಡುಕಾಟದಲ್ಲಿ ಮೌಲಿಕ ಕೃತಿಯಾಗಿದೆ. ಪ್ರತಿ ಲೇಖನವೂ ಸಹ ಓದುಗರನ್ನು ಓದಿಸಿಕೊಂಡು ಹೋಗುತ್ತದೆ ಎಂದರು.

ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ವಕೀಲ ಲೋಹಿತ್ ಹನುಮಾಪುರ ಮಾತನಾಡಿ, ವಕೀಲ ವೃತ್ತಿಯಲ್ಲಿ ಒಳ್ಳೆಯ ಹೆಸರುಗಳಿಸುವುದು ಕಷ್ಟ ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆ ಮೇಲೆ ಗೌರವ ಹೆಚ್ಚಾಗುತ್ತಿದೆ. ಸತ್ಯ ಪ್ರಕರಣಗಳು ಹೊರ ಬರುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದ ಅವರು ಬದಲಾದ ಸ್ಥಿತಿಯಲ್ಲಿ ವಕೀಲ ವೃತ್ತಿಗೆ ಡಿಮ್ಯಾಂಡ್ ಹೆಚ್ಚಾಗುತ್ತಿದೆ. ಪ್ರತಿಯೊಬ್ಬ ವಕೀಲರಿಗೂ ಕೂಡ ಈ ಕೃತಿ ದಾರಿದೀಪವಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಸ್.ಬಿ.ಎಜುಕೇಶನ್ ಟ್ರಸ್ಟ್ ಸಹ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಮಾತನಾಡಿ, ದೇವರ ಹುಡುಕಾಟ ಕೃತಿಯಲ್ಲಿ ಹತ್ತಾರು ಸಂಗತಿಗಳು ವ್ಯಕ್ತವಾಗಿವೆ. ಬರವಣಿಗೆ ಹಿಂದೆ ಯಾವುದೇ ಕಟ್ಟುಪಾಡುಗಳಿಲ್ಲ. ಭಾವನೆಗಳ ಚಿತ್ತ ಲಹರಿ ವ್ಯಕ್ತವಾಗಿದೆ. ಎಲ್ಲಾ ರೀತಿಯ ವಿಚಾರಗಳು ಕೃತಿಯಲ್ಲಿ ದಾಖಲಾಗಿವೆ. ಲೇಖನಗಳಲ್ಲಿ ಜೀವನ ಉತ್ಸಾಹ ವ್ಯಕ್ತವಾಗಿದೆ ಎಂದರು.

ವೇದಿಕೆಯಲ್ಲಿ ಲೇಖಕರಾದ ಡಾ.ಸುಮಾರಾಣಿ ಶಂಭು, ಕೆ.ಪ್ರಭಾಕರ್, ಚಿರಂತ ಪ್ರಕಾಶನದ ಶಂಭು, ಶಮಂತಕ ಪ್ರಭಾಕರ್ ಉಪಸ್ಥಿತರಿದ್ದರು.

ಹಿರಿಯ ವಿದ್ಯಾರ್ಥಿಗಳು ಶಾಲೆಗಳ ಅಭಿವೃದ್ಧಿಗೆ ಶ್ರಮಿಸಿ

ಗುರುವಂದನಾ ಕಾರ್ಯಕ್ರಮದಲ್ಲಿ ರೋಟರಿ ಶಾಲೆ ಸಂಸ್ಥಾಪಕ ರಂಗನಾಥ್ ಕರೆ


ಪಾಂಡವಪುರದಲ್ಲಿ ಶಿಕ್ಷಕರಿಗೆ ಗುರುವಂದನೆ ಸಲ್ಲಿಸಲಾಯಿತು.

ಪಾಂಡವಪುರ, ಅ.26– ಹಿರಿಯ ವಿದ್ಯಾರ್ಥಿಗಳು ತಾವು ಓದಿದ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ರೋಟರಿ ಶಾಲೆ ಸಂಸ್ಥಾಪಕ, ನಿವೃತ್ತ ಉಪನ್ಯಾಸಕ ಎನ್.ಟಿ.ರಂಗನಾಥ್ ತಿಳಿಸಿದರು.

ಪಟ್ಟಣದ ರೋಟರಿ ಶಾಲೆಯಲ್ಲಿ 2005–06 ಸಾಲಿನ ಹಿರಿಯ ವಿದ್ಯಾರ್ಥಿಗಳ ವತಿಯಿಂದ ನಡೆದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ವರ್ಷಗಳು ಕಳೆದಂತೆ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಹಾಗಾಗಿ ಶಾಲೆಯಲ್ಲಿ ಓದಿ ಉತ್ತಮ ಭವಿಷ್ಯ ಕಟ್ಟಿಕೊಂಡಿರುವ ಹಿರಿಯ ವಿದ್ಯಾರ್ಥಿಗಳು ತಾವು ಓದಿದ ಶಾಲೆಗಳ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುವುದಕ್ಕೆ ಶ್ರಮಿಸಬೇಕು ಎಂದರು.

ಶಾಲೆಯಲ್ಲಿ ವಿದ್ಯಾರ್ಥಿಗಳು ಹಮ್ಮಿಕೊಂಡಿರುವ ಗುರುವಂದನೆ ಕಾರ್ಯಕ್ರಮದಿಂದ ನನಗೆ ತುಂಬಾ ಸಂತೋಷವಾಗಿದೆ. ಶಾಲೆಯಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳು ತಾವು ಓದಿದ ಶಾಲೆಗಳನ್ನು ನೆನಪಿನಲ್ಲಿಟ್ಟುಕೊಂಡು ಅಭಿವೃದ್ಧಿಗೆ ಮುಂದಾಗಬೇಕು. ಜೊತೆಗೆ ಗುರುಗಳನ್ನು ಗೌರವಿಸಬೇಕು ಎಂದರು.

ಮುಖ್ಯ ಶಿಕ್ಷಕ ನಾರಾಯಣಸ್ವಾಮಿ ಮಾತನಾಡಿ, ಶಾಲೆಗೆ ಉತ್ತಮ ಫಲಿತಾಂಶ ಬರುತ್ತಿದೆ. ಕಳೆದ ಬಾರಿ ಶೇ.90ರಷ್ಟು ಫಲಿತಾಂಶ ಬಂದಿದ್ದು, ಮುಂದಿನ ದಿನಗಳಲ್ಲಿ ಶೇ.100ರಷ್ಟು ಫಲಿತಾಂಶ ತರಲು ಶ್ರಮಿಸುತ್ತೇವೆ. ಕಡಿಮೆ ಶುಲ್ಕ ಪಡೆದು ಶಾಲೆಯನ್ನು ಕಷ್ಟ ಪಟ್ಟು ನಡೆಸಿಕೊಂಡು ಬರುತ್ತಿದ್ದೇವೆ. ಆಡಳಿತ ಮಂಡಳಿಯವರು ಶಾಲೆ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಸಂಸ್ಥೆಯೂ ಸಾಕಷ್ಟು ಆರ್ಥಿಕ ಸಂಕಷ್ಟದಲ್ಲಿದೆ. ಹಿರಿಯ ವಿದ್ಯಾರ್ಥಿಗಳು ಗುರುವಂದನಾ ಸಮಾರಂಭದ ಮೂಲಕ ಶಾಲೆಗೆ ಶುದ್ಧ ಕುಡಿಯುವ ನೀರಿನ ಯಂತ್ರ ಹಾಗೂ ಬ್ಯಾಂಡ್‌ಸೆಟ್ ವಿತರಣೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಶಾಲೆಯ ಹಿರಿಯ ವಿದ್ಯಾರ್ಥಿಗಳು ಶಾಲೆ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ನಿವೃತ್ತ ಶಿಕ್ಷಕಿ ಪಾರ್ವತಮ್ಮ ಮಾತನಾಡಿ, ಹಿರಿಯ ವಿದ್ಯಾರ್ಥಿಗಳು ಗುರುಗಳಿಗೆ ವಂದನೆ ಸಲ್ಲಿಸುತ್ತಿರುವುದನ್ನು ನೋಡಿದರೆ ಅವರ ತಂದೆ ತಾಯಿಗಳು ಕಲಿಸಿಕೊಟ್ಟ ಸಂಸ್ಕಾರ ಎದ್ದು ಕಾಣುತ್ತದೆ. ದೇಶ ಅಭಿವೃದ್ಧಿ ಹೊಂದಬೇಕಾದರೆ ಯುವ ಸಮುದಾಯ ಜೊತೆಗೂಡಿ ತಮ್ಮ ಅಕ್ಕಪಕ್ಕದ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಭಾರತೀಯ ವಾಯುಸೇನೆ ನಿವೃತ್ತ ಅಧಿಕಾರಿ ಎನ್.ಆರ್.ರವಿ ಮಾತನಾಡಿದರು. ಈ ವೇಳೆ 2005–06ನೇ ಸಾಲಿನ ವಿದ್ಯಾರ್ಥಿಗಳು ಶಾಲೆಗೆ ಶುದ್ಧ ಕುಡಿಯುವ ನೀರಿನ ಯಂತ್ರ ಹಾಗೂ ಬ್ಯಾಂಡ್‌ಸೆಟ್ ವಿತರಿಸಿದರು. ಇದೇ ವೇಳೆ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರಾದ ದಿನೇಶ್, ರಾಣಿ, ಪಾರ್ವತಿ, ಜಮೀನಾ ತಾಜ್, ಲೋಕೇಶ್ವರಿ, ಶಾಂತ, ಪ್ರತಿಮಾ, ರಾಜಶ್ರೀ, ನಾಗರತ್ನ, ಸ್ವಪ್ನ, ಗೀತಾ, ಹೇಮಣ್ಣ, ಪ್ರಮೀಳ, ಆನಂದ್, ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಅಧ್ಯಕ್ಷ ತಿಮ್ಮೇಗೌಡ, ಕಾರ್ಯದರ್ಶಿ ಅಶೋಕ್ ಜೈನ್, ನಿರ್ದೇಶಕರಾದ ರಮೇಶ್, ಆರ್.ರವಿ, ಶಿಕ್ಷಕ ಶಿವರಾಜು ಸೇರಿದಂತೆ ಇತರರಿದ್ದರು.

ಯೋಧ ಲೋಕೇಶ್ ನಿಧನ



ಕೆಆರ್.ಪೇಟೆ, ಅ.26– ಪಟ್ಟಣದ ಹೇಮಾವತಿ ಬಡಾವಣೆ ನಿವಾಸಿ, ಮೂಲತಃ ನಾಗಮಂಗಲ ತಾಲೂಕಿನ ಮೈಲಾರ ಪಟ್ಟಣ ಗ್ರಾಮದ ನಿವಾಸಿಯೂ ಆದ ಯೋಧ ಲೋಕೇಶ್(44) ಶನಿವಾರ ರಾತ್ರಿ ನಿಧನರಾದರು.

ಮೃತರು ಅಮೃತಸರದಲ್ಲಿ ಕರ್ತವ್ಯ ನಿರ್ವಹಣೆ ವೇಳೆ ಅನಾರೋಗ್ಯದಿಂದ ನಿಧನರಾಗಿದ್ದು, ಪಾರ್ಥಿವ ಶರೀರವನ್ನು ಅಲ್ಲಿನ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ತರಲಾಗುವುದು. ಅಲ್ಲಿಂದ ಪಾರ್ಥಿವ ಶರೀರ ಸೇನಾ ವಾಹನದ ಮೂಲಕ ಹುಟ್ಟೂರು ಮೈಲಾರಪಟ್ಟಣ ಗ್ರಾಮಕ್ಕೆ ಭಾನುವಾರ ರಾತ್ರಿ ಆಗಮಿಸಲಿದ್ದು, ಸೋಮವಾರ ಬೆಳಗ್ಗೆ ಸಾರ್ವಜನಿಕರಿಗೆ ಮೃತರ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು. ನಂತರ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಗುವುದು ಎಂದು ಜಿಲ್ಲಾಡಳಿತ ತಿಳಿಸಿದೆ. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅ.29, ಕವಿ 'ಕೆಎಸ್‌ನ ಒಂದು ನೆನಪು' ಕಾರ್ಯಕ್ರಮ


ಕಿಕ್ಕೇರಿಯಲ್ಲಿ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ಕಿಕ್ಕೇರಿ, ಅ.26– ಮೈಸೂರು ಮಲ್ಲಿಗೆ ಕವಿ ಕೆ.ಎಸ್.ನರಸಿಂಹಸ್ವಾಮಿ ಕಿಕ್ಕೇರಿ ಸುಪುತ್ರ ಎಂಬುದು ತಮ್ಮ ಸೌಭಾಗ್ಯ ಎಂದು ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟಿ ಸುರೇಶ್ ತಿಳಿಸಿದರು.

ಇಲ್ಲಿನ ಕೆಪಿಎಸ್ ಶಾಲಾ ಕಚೇರಿಯಲ್ಲಿ ನಡೆದ ಕವಿ ಕೆ.ಎಸ್.ನರಸಿಂಹಸ್ವಾಮಿ ಒಂದು ನೆನಪು, ಉಪನ್ಯಾಸ, ಗೀತಗಾಯನ ಸಮಾರಂಭದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್, ಮೈಸೂರು ಆಕಾಶವಾಣಿ ಕೇಂದ್ರ, ಮಂಡ್ಯ ಕರ್ನಾಟಕ ಸಂಘ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಅ.29ರಂದು ಬೆಳಗ್ಗೆ 10 ಗಂಟೆಗೆ ಕಿಕ್ಕೇರಿಯ ಕೆಪಿಎಸ್ ಶಾಲಾವರಣದಲ್ಲಿ ನಡೆಯಲಿದೆ. ಕವಿಯ ಪರಿಚಯ ಹಿರಿಯರಲ್ಲಿ ಮಾತ್ರವಿದ್ದು, ಯುವಕರು, ಶಾಲಾ ಕಾಲೇಜು ವಿದ್ಯಾರ್ಥಿಗಳ ಮನದಲ್ಲಿ ಶಾಶ್ವತವಾಗಿ ಉಳಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಟ್ರಸ್ಟ್ ಅಧ್ಯಕ್ಷ, ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಮಾತನಾಡಿ, ಕಾರ್ಯಕ್ರಮದಲ್ಲಿ ಮಕ್ಕಳಲ್ಲಿ ಕವಿ, ಕವಿತೆ, ಸಂಗೀತದ ಅಭಿರುಚಿ ಮೂಡಿಸಲು 'ಕೆಎಸ್‌ನ' ಕುರಿತು ಪ್ರಬಂಧ ಸ್ಪರ್ಧೆ, ವಿವಿಧ ಶಾಲಾ ಕಾಲೇಜು ಮಕ್ಕಳಿಂದಲೇ 'ಕೆಎಸ್‌ನ' ಗೀತಗಾಯನ ವಿಶೇಷವಾಗಿ ಹಮ್ಮಿಕೊಳ್ಳಲಾಗಿದೆ ಎಂದರು.

ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಹೆಚ್.ಟಿ.ಮಂಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಟ್ರಸ್ಟಿ ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಸಾಹಿತಿ ಡಾ.ಎಸ್.ಬಿ.ಶಂಕರೇಗೌಡ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅತಿಥಿಗಳಾಗಿ ಎಸಿ ಆರ್. ಶ್ರೀನಿವಾಸ, ಆಕಾಶವಾಣಿ ಸಹಾಯಕ ನಿರ್ದೇಶಕ ಟಿ.ಬಿ.ವಿದ್ಯಾಶಂಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಬಿ.ವಿ.ನಂದೀಶ್, ಮುಖ್ಯ ಅತಿಥಿಗಳಾಗಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಡಾ.ಜಯಪ್ರಕಾಶಗೌಡ, ತಹಸೀಲ್ದಾರ್ ಯು.ಎಸ್. ಅಶೋಕ, ಬಿಇಓ ವೈ.ಕೆ.ತಿಮ್ಮೇಗೌಡ, ತಾಪಂ ಇಓ ಸುಷ್ಮಾ, ಗ್ರಾಪಂ ಅಧ್ಯಕ್ಷ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಕಲಾವಿದರಾದ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಡಾ.ಅಪ್ಪಗೆರೆ ತಿಮ್ಮರಾಜು, ನಗರ ಶ್ರೀನಿವಾಸ ಉಡುಪ, ಡಾ.ಎಂ.ಡಿ.ಶ್ರೀನಿವಾಸನ್, ಹಂಸಿನಿ, ಅಮೂಲ್ಯ ಶ್ರೀಧರ್, ಡೇವಿಡ್ ಅವರಿಂದ 'ಕೆಎಸ್‌ನ' ಗೀತಗಾಯನ ಏರ್ಪಡಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಸಭೆಯಲ್ಲಿ ಪ್ರಾಂಶುಪಾಲ ಸಹದೇವು, ಉಪ ಪ್ರಾಂಶುಪಾಲ ಚಲುವನಾರಾಯಣಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣೇಗೌಡ, ಮುಖ್ಯಶಿಕ್ಷಕಿ ಮಮತಾ, ಭಾರತಿ, ಮುಖಂಡರಾದ ಚಂದ್ರೇಗೌಡ, ಚಂದ್ರಮೋಹನ್, ಕೆ.ಎನ್.ಪುಟ್ಟೇಗೌಡ, ಮಹದೇವು, ಉಪನ್ಯಾಸಕ, ಶಿಕ್ಷಕ ವೃಂದ ಹಾಜರಿದ್ದರು.

ಸಮುದಾಯ ಭವನ ಕಾಮಗಾರಿಗೆ ಗುದ್ದಲಿ ಪೂಜೆ


ಸಮುದಾಯ ಭವನ ಕಾಮಗಾರಿಗೆ ಗ್ರಾಮಸ್ಥರು ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಅ.26– ಯಲಾದಹಳ್ಳಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಅನುದಾನದಡಿ ಸೋಮೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಸಿದ್ದೇಶ್ವರ ಬಸವಪ್ಪನೊಂದಿಗೆ ಗ್ರಾಮಸ್ಥರು ಗುದ್ದಲಿ ಪೂಜೆ ನೆರವೇರಿಸಿದರು.

ತಾಪಂ ಸದಸ್ಯ ವೈ.ಎಂ.ಬೋರೇಗೌಡ ಮಾತನಾಡಿ, ಗ್ರಾಮದ ಸೋಮೇಶ್ವರ ಸಮುದಾಯ ಭವನಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗ್ರಾಮಸ್ಥರು ಅನುದಾನ ಬಿಡುಗಡೆ ಮಾಡಿಕೊಡಬೇಕೆಂದು ಮನವಿ ಮಾಡಿದ ಮೇರೆಗೆ 10 ಲಕ್ಷ ಬಿಡುಗಡೆಗೊಳಿಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು, ಯಜಮಾನರು ಮತ್ತು ಮುಖಂಡರ ನೇತೃತ್ವದಲ್ಲಿ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದರು.

ಸಮುದಾಯ ಭವನ ನಿರ್ಮಿಸಲು ಪ್ರಾರಂಭಿಸಿ, ನಂತರದ ದಿನಗಳಲ್ಲಿ ಮತ್ತಷ್ಟು ಅನುದಾನ ನೀಡುತ್ತೇನೆಂದು ಸಚಿವರು ಭರವಸೆ ನೀಡಿದ್ದಾರೆ. ಗ್ರಾಮದಲ್ಲಿ ಯಾವುದೇ ಪಕ್ಷ ಬೇಧವಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗಿದ್ದೇವೆ ಎಂದರು.

ಈ ವೇಳೆ ನಾಡಗೌಡ ಕೃಷ್ಣೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ವೈ.ಡಿ.ಸಿದ್ದರಾಜು, ಲೋಕೇಶ್, ನಾಗರಾಜು, ಸದಸ್ಯ ಮನು, ಮಾಜಿ ಸದಸ್ಯೆ ಲತಾ, ದ್ಯಾವೇಗೌಡ, ಚಿಕ್ಕಸಿದ್ದೇಗೌಡ, ನಂಜುಂಡೇಗೌಡ, ಕಣಿಯಪ್ಪರ ದ್ಯಾವ, ಚಿಕ್ಕತಮ್ಮೇಗೌಡ, ಗಗಳೆ ಚೌಡನ ಸಿದ್ದೇಗೌಡ, ರಾಜೇಶ, ವೆಂಕಟೇಶ್, ಸಿದ್ದೇಗೌಡ, ಸತೀಶ್, ಶಿವು, ರವಿ ನಿರ್ಮಿತಿ ಕೇಂದ್ರ ಜಯಪ್ರಕಾಶ್ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ಡಿಕೆಶಿ ದಿಢೀರ್ ದೆಹಲಿ ಪ್ರಯಾಣ

ಭಾರಿ ಸಂಚಲನ ಮೂಡಿಸಿತ್ತು. ಯತೀಂದ್ರ ಅವರು ಸರ್ಕಾರದ ನೀತಿ ನಿರ್ಧಾರಗಳ ಬಗ್ಗೆ ಮಾತನಾಡಿದ್ದು, ಅಧಿಕಾರ ಹಂಚಿಕೆಯ ವಿವಾದವನ್ನು ಮತ್ತೆ ಮುನ್ನೆಲೆಗೆ ತಂದಿತ್ತು. ದೆಹಲಿ ಪ್ರಯಾಣಕ್ಕೂ ಮುನ್ನ ಮಾಧ್ಯಮದೊಂದಿಗೆ ಮಾತನಾಡಿದ ಡಿ ಕೆ ಶಿವಕುಮಾರ್, ದೆಹಲಿಗೆ ತಮ್ಮ ಭೇಟಿಯು ನಿಯಮಿತ ಕಾರ್ಯಕ್ರಮವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಮಾತನಾಡಲಿದ್ದಾರೆ ಎಂದು ಹೇಳಿದರು.

ನಾನು ನಿಯಮಿತವಾಗಿ (ನವದೆಹಲಿ) ಅಲ್ಲಿಗೆ ಹೋಗುತ್ತೇನೆ. ಕೆಲಸ ಇದ್ದಾಗಲೆಲ್ಲ ನಾನು ಅಲ್ಲಿಗೆ ಹೋಗುತ್ತೇನೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು, ವಿಶ್ರಾಂತಿ ಪಡೆಯಲು, ಶಾಪಿಂಗ್ ಮಾಡಲು ಮತ್ತು ನ್ಯಾಯಾಲಯದ ಪ್ರಕರಣಗಳಿಗೂ ಹೋಗುತ್ತೇನೆ ಎಂದು ಶಿವಕುಮಾರ್ ತಿಳಿಸಿದರು. ಈ ನಡುವೆ ಸಚಿವರು, ಶಾಸಕರು, ಡಿಸಿಸಿ ಅಧ್ಯಕ್ಷರಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದು, ರಾಜ್ಯದ ಎಲ್ಲಾ ಡಿಸಿಸಿ, ಬಿಸಿಸಿಗಳು ಸ್ವಂತ ಕಚೇರಿ ಹೊಂದಲು ಸೂಚನೆ ನೀಡಿದ್ದಾರೆ. ನ.20ಕ್ಕೆ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಪೂರ್ಣಗೊಳ್ಳಲಿದೆ. ಅಷ್ಟರೊಳಗೆ ಭವನ ನಿರ್ಮಾಣ ಪ್ರಕ್ರಿಯೆ ಪೂರ್ಣಗೊಳಿಸಿ ಎಂದಿದ್ದಾರೆ.

ಹುಲಿ ದಾಳಿಗೆ ದನಗಾಹಿ ಬಲಿ

ಕೆಲಸದಾಳು ನಾಗ ಎಂಬಾತ ಜೋರಾಗಿ ಕೂಗಿಕೊಂಡಿದ್ದಾನೆ. ಇದರಿಂದ ಹುಲಿ ರಾಜಶೇಖರ್ ಅವರನ್ನು ಬಿಟ್ಟು ನಾಗನ ಮೇಲೆ ದಾಳಿ ಮಾಡಲು ಬಂದಿದೆ. ಆದರೆ ಹುಲಿ ಸಮೀಪ ಬರುತ್ತಿದ್ದಂತೆ ನಾಗ ಪ್ರಾಣ ರಕ್ಷಿಸಿಕೊಳ್ಳಲು ಓಡಿದ್ದಾನೆ. ಇದರಿಂದ ವಿಚಲಿತ ಗೊಂಡ ಹುಲಿ ಕಾಡಿನತ್ತ ದೌಢಾಯಿಸಿದೆ. ಹುಲಿ ದಾಳಿ ನಡೆಸಿದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗ್ರಾಮಸ್ಥರು ಆಗಮಿಸುವಷ್ಟರಲ್ಲೇ ರಾಜಶೇಖರ್ ಕೊನೆಯುಸಿರೆಳೆದಿದ್ದರು. ಹುಲಿ ದಾಳಿಯಿಂದ ಅವರ ಮುಖದ ಭಾಗ ಬಹುತೇಕ ಹಾನಿಯಾಗಿದ್ದು, ಅನ್ನನಾಳ ಹಾಗೂ ವಾಯು ನಾಳ ಹೊರಗೆ ಬಂದಿದೆ. ಇದರಿಂದ ಅವರು ಕ್ಷಣಾರ್ಧದಲ್ಲೇ ಮೃತಪಟ್ಟಿದ್ದಾರೆ.

ಬಿಗುವಿನ ವಾತಾವರಣ: 10 ದಿನದ ಅಂತರದಲ್ಲಿ ಸರಗೂರು ಭಾಗದಲ್ಲಿ ಎರಡನೇ ಹುಲಿ ದಾಳಿ ಪ್ರಕರಣ ವರದಿಯಾದ ಹಿನ್ನೆಲೆ ಯಲ್ಲಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸರಗೂರು ಪೊಲೀಸರ ರಕ್ಷಣೆಯೊಂದಿಗೆ ಅರಣ್ಯ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ, ಗ್ರಾಮಸ್ಥರ ಮನವೊಲಿಸುವ ಪ್ರಯತ್ನ ಮಾಡಿದರು. ಅಷ್ಟರಲ್ಲಾಗಲೇ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಸ್ಥಳಕ್ಕೆ ಬಂದು ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿದರು.

ಈ ವೇಳೆ ಗ್ರಾಮಸ್ಥರು ಕಾಡಂಚಿನ ಭಾಗ ದಲ್ಲಿ ಸತತವಾಗಿ ವನ್ಯಜೀವಿಗಳ ಹಾವಳಿ ನಡೆಯುತ್ತಲೇ ಇದೆ. ರೈತರು ಸಾಕಿದ ಜಾನುವಾರುಗಳ ಮೇಲೆ ವನ್ಯಜೀವಿ ದಾಳಿ ಮಾಡಿ ಹತ್ಯೆಗೈಯ್ಯುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದ್ದು, ಸರಿಯಾದ ಪ್ರಮಾಣದಲ್ಲಿ ಪರಿಹಾರ ಸಿಗುತ್ತಿಲ್ಲ. ಆ ಕಾರಣದಿಂದ ವನ್ಯಜೀವಿಗಳ ಉಪಟಳಕ್ಕೆ ಶಾಶ್ವತ ಕಡಿವಾಣ ಹಾಕಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಆರೋಗ್ಯ ಸಚಿವರ ಸಂತಾಪ

ಸರಗೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಬೆಂಗಳೂರಿಗೆ ಹೋದ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರಿಗೆ ಹುಲಿ ದಾಳಿ ನಡೆಸಿ ವ್ಯಕ್ತಿಯೊಬ್ಬರನ್ನು ಕೊಂದು ಹಾಕಿರುವ ಮಾಹಿತಿ ಲಭ್ಯವಾದ ಬಳಿಕ ಘಟನೆ ಬಗ್ಗೆ ಸಂತಾಪ ವ್ಯಕ್ತಪಡಿಸಿದ್ದಾರೆ. ಅಲ್ಲದೇ ನಾಳೆ (ಸೋಮವಾರ) ಮಧ್ಯಾಹ್ನ 2 ಗಂಟೆಗೆ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರ ಕಚೇರಿಯಲ್ಲಿ ವನ್ಯಜೀವಿ ಹಾವಳಿ ಕುರಿತಂತೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಮೃತ ರಾಜಶೇಖರ್ ಬಡವರಾಗಿದ್ದು, ಸೂಕ್ತ ಪರಿಹಾರ ನೀಡಬೇಕು ಅಲ್ಲದೇ ಅವರ ಇಬ್ಬರು ಮಕ್ಕಳಲ್ಲಿ ಯಾರಿಗಾದರೂ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕೊಡಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಅನಿಲ್ ಚಿಕ್ಕಮಾದು, ಸರ್ಕಾರದ ವತಿಯಿಂದ 20 ಲಕ್ಷ ರೂ. ಪರಿಹಾರ ಕೊಡಿಸುವುದಾಗಿಯೂ ಅರಣ್ಯ ಇಲಾಖೆಯಿಂದ ಮೃತ ರಾಜಶೇಖರ್ ಅವರ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿದರು. ಆ ಬಳಿಕವಷ್ಟೇ ಗ್ರಾಮಸ್ಥರು ಮೃತದೇಹ ಮರಣೋತ್ತರ ಪರೀಕ್ಷೆ ನಡೆಸಲು ಅವಕಾಶ ಮಾಡಿಕೊಟ್ಟರು.

ಸ್ಥಳಕ್ಕೆ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರ್ ಆಗಮಿಸಿ ಇಲಾಖೆ ವತಿಯಿಂದ ದೊರೆಯುವ ಸೌಲಭ್ಯವನ್ನು ಫಲಾನುಭವಿಗಳಿಗೆ ಶೀಘ್ರವಾಗಿ ಒದಗಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮೈಸೂರು ಡಿಸಿಎಫ್ ಪರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಲಾ ಜಾಗ ಸೇರಿ ಖಾಸಗಿ ವ್ಯಕ್ತಿಗೆ ಭೂ ಪರಿವರ್ತನೆ

ರೆವಿನ್ಯೂ ಇನ್ಸ್‌ಪೆಕ್ಟರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಮಂಡ್ಯ ಡಿಸಿ ಅನುಮತಿ



ಮೈಸೂರು, ಅ.26(ಆರ್‌ಕೆ)– ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮದ ಸರ್ವೇ ನಂ.44 ರಲ್ಲಿ 2.13 ಎಕರೆ ವಿಸ್ತೀರ್ಣದ ಜಮೀನಿಗೆ ಸರ್ಕಾರಿ ನಾಲಾ ಭೂಮಿಯನ್ನೂ ಸಹ ಸೇರಿಸಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿದ ಆರೋಪದ ಮೇರೆಗೆ ಅರಕೆರೆ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಅನುಮತಿ ನೀಡಿದ್ದಾರೆ.

ಬೆಳಗೊಳದ ಹಿಂದಿನ ರೆವಿನ್ಯೂ ಇನ್ಸ್‌ಪೆಕ್ಟರ್ ಜಯ ರಾಮಮೂರ್ತಿ ಹಾಗೂ ಹಿಂದಿನ ಗ್ರಾಮ ಆಡಳಿತ ಅಧಿಕಾರಿಯಾದ ಹಾಲಿ ಅರಕೆರೆ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಅವರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಬೇಕು. ಆದರೆ, ಜಯ ರಾಮಮೂರ್ತಿ ಅವರು ನರರೋಗದಿಂದ ಬಳಲುತ್ತಿರುವುದರಿಂದ ಪ್ರಾಸಿಕ್ಯೂಷನ್ ಅನುಮತಿ ನೀಡಿದರೂ ವಿಚಾರಣೆಗೆ ಸಹಕರಿಸಲು ಸಾಧ್ಯವಿಲ್ಲದಿರುವುದರಿಂದ ಅವರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸುವುದರಿಂದ ಕೈಬಿಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ವಿವರ: ಶ್ರೀರಂಗಪಟ್ಟಣ ತಾಲೂಕು ಬೆಳಗೊಳ ಗ್ರಾಮದ ಸರ್ವೆ ನಂ 44ರಲ್ಲಿನ 2.13 ಎಕರೆ ವಿಸ್ತೀರ್ಣದ ಪೈಕಿ 14 ಗುಂಟೆ ಭೂಮಿ ವರುಣಾ ನಾಲೆಗಾಗಿ ಕಾವೇರಿ ನೀರಾವರಿ ನಿಗಮಕ್ಕೆ ಸೇರಿದ ಜಾಗ ಎಂದು 1992–93ರಲ್ಲೇ ಭೂಸ್ವಾಧೀನವಾಗಿದೆ ಎಂದು ಮ್ಯುಟೇಶನ್ ಆಗಿದೆ. ಆದರೆ, 20141ರವರೆಗೂ ಈ ಭೂಮಿ ಇಂಡೀಕರಣ ಮಾಡಿಲ್ಲ. ಸ್ವಾಧೀನವಾದ ಭೂಮಿಗೆ ಶ್ರೀಮತಿ ವೆಂಕಟಲಕ್ಷ್ಮಮ್ಮ ಎಂಬವರು 29,199 ರೂ. ಪರಿಹಾರವನ್ನೂ ಪಡೆದಿದ್ದಾರೆ.

ಕಂದಾಯ ಇಲಾಖೆ ದಾಖಲೆಗಳಲ್ಲಿ ಈ ಭೂಮಿ ಇಂಡೀಕರಣವಾಗದ ಸನ್ನಿವೇಶವನ್ನು ಬಳಸಿಕೊಂಡು ಭೂಮಿಯ ಮಾಲೀಕತ್ವ ಹೊಂದಿದ್ದ ಬಸವರಾಜು ಎಂಬವರು ನಾಲೆಗಾಗಿ ಭೂಸ್ವಾಧೀನವಾಗಿರುವ ಭೂಮಿಯನ್ನೂ ಸೇರಿಸಿ ಒಟ್ಟು 2.13 ಎಕರೆ ಭೂಮಿಯನ್ನು ಶ್ರೀರಂಗಪಟ್ಟಣ ತಾಲೂಕಿನ ಹೊಸ ಆನಂದೂರು ಗ್ರಾಮದ ವೀರಭದ್ರಯ್ಯ ಎಂಬವರಿಗೆ ಮಾರಾಟ ಮಾಡಿದ್ದಾರೆ.

ವೀರಭದ್ರಯ್ಯ ಅವರು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದಾಗ ಶ್ರೀರಂಗಪಟ್ಟಣ ತಾಲೂಕು ಬೆಳಗೊಳದ ಅಂದಿನ ರೆವಿನ್ಯೂ ಇನ್ಸ್‌ಪೆಕ್ಟರ್ ಜಯ ರಾಮಮೂರ್ತಿ ಮತ್ತು ಅಂದಿನ ಗ್ರಾಮ ಆಢಳಿತಾಧಿಕಾರಿ ಪುಟ್ಟಸ್ವಾಮಿ ಅವರು ಸರ್ಕಾರಕ್ಕೆ ತಪ್ಪು ಮಾಹಿತಿ ಹಾಗೂ ಸುಳ್ಳು ದಾಖಲೆಗಳನ್ನು ನೀಡು ನಾಲಾ ಜಾಗವನ್ನೂ ಸೇರಿಸಿ ಭೂ ಪರಿವರ್ತನೆಗೆ ಮಹಜ್ ವರದಿ ನೀಡುದ್ದಾರೆ. ಹಾಗಾಗಿ ಇವರ ವಿರುದ್ಧ ಭೂ ಕಂದಾಯ ಕಾಯಿದೆ 1964ರ ಕಲಂ 19: ಎ ಮತ್ತು 95ರಂತೆ ಪ್ರಕರಣ ದಾಖಲಿಸಿ ಕ್ರಮ ಜರುಗಿಸುವಂತೆ ಬೆಳಗೊಳದ ಹಾಲಿ ರೆವೆನ್ಯೂ ಇನ್ಸ್‌ಪೆಕ್ಟರ್ ಸಿ.ಬಸವರಾಜು ಅವರು ಕೆ ಆರ್ ಸಾಗರ ಪೊಲೀಸರಿಗೆ ದೂರು ನೀಡಿದ್ದರು.

ಕಾವೇರಿ ನೀರಾವರಿ ನಿಗಮದ 14 ಕುಂಟೆ ಭೂ ಭೂ ಸ್ವಾಧೀನವಾಗಿದ್ದರೂ ಅದನ್ನು ನಮೂದಿ ಸದಿರುವುದು ಕರ್ತವ್ಯ ಲೋಪಕ್ಕೆ ಸಾಕ್ಷಿಯಾಗಿದೆ. ಹಾಗಾಗಿ ಹಿಂದಿನ ರೆವೆನ್ಯೂ ಇನ್ಸ್‌ಪೆಕ್ಟರ್ ಜಯ ರಾಮೂರ್ತಿ ಮತ್ತು ಗ್ರಾಮ ಆಡಳಿತಾಧಿಕಾರಿ ಪುಟ್ಟಸ್ವಾಮಿ ಅವರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿ ಸಲು ಅನುಮತಿ ನೀಡುವಂತೆ ಕೆ.ಆರ್.ಸಾಗರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರು ದಾಖಲೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದರು. ಬೆಳಗೊಳ ಗ್ರಾಮದ ಸ.ನಂ. 44ರಲ್ಲಿನ 14 ವರುಣ ನಾಲಾ ನಿರ್ಮಾಣಕ್ಕೆ ಭೂ ಸ್ವಾಧೀನವಾಗಿದೆ. ಈ ಭೂಮಿಯನ್ನು ಸೇರಿಸಿ ಒಟ್ಟು 2.13 ಎಕರೆ ಜಮೀನನ್ನು ವೀರಭದ್ರಯ್ಯನವರಿಗೆ ಭೂ ಪರಿವರ್ತನೆ ಮಾಡಲು ಸರ್ಕಾರಕ್ಕು ತಪ್ಪು ಮಾಹಿತಿ ಹಾಗೂ ಸುಳ್ಳು ದಾಖಲೆಗಳೊಂದಿಗೆ ಜಯರಾಮ ಮೂರ್ತಿ ಹಾಗೂ ಪುಟ್ಟಸ್ವಾಮಿ ಮಹಜರ್ ವರಿದಿ ಸಲ್ಲಿಸಿರುವುದು ಕರ್ತವ್ಯ ಲೋಪವೆಸಗಿರುವುದು ಸ್ಪಷ್ಟವಾಗಿದ್ದು, ಅನಾರೋಗ್ಯ ಪೀಡಿತರಾಗಿರುವ ಜಯ ರಾಮಮೂರ್ತಿ ಅವರನ್ನು ಹೊರತುಪಡಿಸಿ ಹಾಲಿ ಅರಕೆರೆ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿರುವ ಬೆಳಗೊಳದ ಹಿಂದಿನ ಗ್ರಾಮ ಆಡಳಿತಾಧಿಕಾರಿ ಪುಟ್ಟಸ್ವಾಮಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಜಿಲ್ಲಾಧಿಕಾರಿ ಡಾ. ಕುಮಾರ ಆದೇಶ ಹೊರಡಿಸಿದ್ದಾರೆ.

'ಭವ್ಯ ಚಿತ್ರಪಟ ಮೈಸೂರು' ಕೃತಿ ಬಿಡುಗಡೆ


ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಮತ್ತು ವಿಜಯಲಕ್ಷ್ಮಿ ಪ್ರಕಾಶನ ವತಿಯಿಂದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಭವ್ಯ ಚಿತ್ರಪಟ ಮೈಸೂರು' ಕೃತಿಯನ್ನು ಹಿರಿಯ ಪತ್ರಕರ್ತ ಜಿ.ಸತ್ಯನಾರಾಯಣ(ಗೌರಿ ಸತ್ಯ), ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ದೀಪಕ್, ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಡಾ.ಗವಿಸಿದ್ದಯ್ಯ ಬಿಡುಗಡೆಗೊಳಿಸಿದರು.

ಮೈಸೂರು,ಅ.26(ಜಿಎ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಮತ್ತು ವಿಜಯ ಲಕ್ಷ್ಮಿ ಪ್ರಕಾಶನ ವತಿಯಿಂದ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಈಚನೂರು ಕುಮಾರ್ ಅವರ 50 ವರ್ಷಗಳ ಅಕ್ಷರ ಯಾನ ನೆನಪಿನಲ್ಲಿ ಹೊರತಂದ 'ಭವ್ಯ ಚಿತ್ರಪಟ ಮೈಸೂರು' ಕೃತಿಯನ್ನು ಹಿರಿಯ ಪತ್ರಕರ್ತ ಜಿ.ಸತ್ಯನಾರಾಯಣ(ಗೌರಿ ಸತ್ಯ), ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ದೀಪಕ್, ರಾಜ್ಯ ಪತ್ರಾಗಾರ ಇಲಾಖೆ ನಿರ್ದೇಶಕ ಡಾ. ಗವಿಸಿದ್ದಯ್ಯ ಬಿಡುಗಡೆಗೊಳಿಸಿದರು.

ನಂತರ ಹಿರಿಯ ಪತ್ರಕರ್ತ ಜಿ.ಸತ್ಯನಾರಾಯಣ (ಗೌರಿ ಸತ್ಯ) ಮಾತನಾಡಿ, ಈಚನೂರು ಕುಮಾರ್ ಸ್ವತಃ ಪತ್ರಕರ್ತರಾಗಿದ್ದರೂ ಪತ್ರಿಕೋದ್ಯಮಕ್ಕಿಂತ ಹೆಚ್ಚಿನ ಆಸಕ್ತಿ ಮೈಸೂರಿನ ಇತಿಹಾಸ, ಇಲ್ಲಿನ ಕಟ್ಟಡ, ರಾಜಮನೆತನದ ಬಗ್ಗೆ ಹೊಂದಿದ್ದರು. ಅವರ ಈ ಪುಸ್ತಕ ಸಹಾ ಮೈಸೂರು ಇತಿ ಹಾಸದ ಬಗೆಗಿನ ದೊಡ್ಡ ಕೊಡುಗೆ ಆಗಿದೆ ಎಂದರು.

ಮೈಸೂರು ಕೇವಲ ಪಾರಂಪರಿಕ ನಗರ ಮಾತ್ರವಲ್ಲ, ಐತಿಹಾಸಿಕ ನಗರವೂ ಆಗಿದೆ. ಇಲ್ಲಿನ ಸುತ್ತಮುತ್ತಲೂ ಇತಿಹಾಸ ಹೊಂದಿರುವ ಅನೇಕ ಜಾಗಗಳಿವೆ. ಅವುಗಳ ಬಗೆಗೂ ಹೆಚ್ಚಿನ ಗಮನ ಅಗತ್ಯವಾಗಿದೆ. ಇಲ್ಲಿನ ಇತಿಹಾಸ ತೆಗೆದು, ಅಧ್ಯಯನ ಮಾಡಿ ಹೊರ ತೆಗೆಯಬೇಕಾಗಿದೆ. ಈ ನಿಟ್ಟಿನಲ್ಲಿ ಈಚನೂರು ಕುಮಾರ್ ಹೆಚ್ಚಿನ ಕೆಲಸ ಮಾಡಿದ್ದಾರೆ ಎಂದು ಸ್ಮರಿಸಿದರು.

ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕ ಡಾ. ಗವಿಸಿದ್ದಯ್ಯ ಮಾತನಾಡಿ, ಮೈಸೂರಿನ ಹಲವಾರು ಪಾರಂಪರಿಕ ಕಟ್ಟಡ, ವಸ್ತುಗಳು ನಶಿಸುತ್ತಿವೆ. ಇದು ಪಾರಂಪರಿಕ ನಗರ ಮಾತ್ರವಲ್ಲ, ಐತಿಹಾಸಿಕ ನಗರವೂ ಹೌದು. ಹೀಗಾಗಿ ಮೈಸೂರನ್ನು, ಈಗಿನ ಮೈಸೂರಿನ ಹಾಗೆಂಯೇ ಉಳಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಬಗ್ಗೆ ಈಚನೂರು ಕುಮಾರು ಅವರಿಗೆ ವಿಶೇಷ ಪ್ರೀತಿ ಇತ್ತು. ಹೀಗಾಗಿಯೇ ಪತ್ರಾಗಾರ ಇಲಾಖೆಯನ್ನು ಸಮರ್ಥವಾಗಿ ಬಳಸಿಕೊಂಡು ಮೈಸೂರಿನ ಬಗ್ಗೆ ಹಲವಾರು ಉಪಯುಕ್ತ ಲೇಖನ ಬರೆದರು. ಮೈಸೂರು ಹಾಗೂ ಪತ್ರಾಗಾರ ಇಲಾಖೆ ನಡುವೆ ಅವಿನಾಭಾವ ಸಂಬಂಧವಿದೆ. ಅರಮನೆಗೆ ಸಂಬಂಧಿಸಿದ ಸಾಕಷ್ಟು ದಾಖಲೆಗಳು ಇಲ್ಲಿವೆ. ಈಚನೂರು ಕುಮಾರ್ ಅವರು ಇವನ್ನೆಲ್ಲ ಅತಿ ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದರು. ಯಾವೊಬ್ಬ ಇತಿಹಾಸ ಸಂಶೋಧನಾ ವಿದ್ಯಾರ್ಥಿಗೂ ಕಡಿಮೆಯಿಲ್ಲದಂತೆ ಅವರು ಅಧ್ಯಯನ ಮಾಡುತ್ತಿದ್ದರು. ಸರಳ ಜೀವಿಯೂ ಆಗಿದ್ದರು. ಅರಮನೆಗೆ ಸಂಬಂಧಿಸಿದ ಪ್ರತಿಯೊಂದೂ ಮಾಹಿತಿಯನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿದ್ದರು ಎಂದು ಮೆಲುಕು ಹಾಕಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಈಚನೂರು ಕುಮಾರ್ ಅವರ ಒಡನಾಟ ಹೊಂದಿದ್ದ ಹಲವರು ಅವರ ಕಾರ್ಯವೈಖರಿ ಬಗ್ಗೆ ಮಾತನಾಡಿದರು.

ಇಂದಿನಿಂದ ಮೂರು ದಿನ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಪ್ರದರ್ಶನ


ನಾಟಕದ ಚೊಚ್ಚಲ ಪ್ರದರ್ಶನದ ಒಂದು ದೃಶ್ಯ.

ಮೈಸೂರು,ಅ.26(ಪಿಎಂ)– ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಪ್ರದರ್ಶನವನ್ನು ಅ.27ರಿಂದ 29ರವರೆಗೆ ಮೂರು ದಿನಗಳ ಕಾಲ ಪ್ರತಿದಿನ ಸಂಜೆ 6.30ಕ್ಕೆ ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದೆ. ರವಿ ಮೂರೂರು ಅವರ ಸಂಗೀತ ವಿನ್ಯಾಸ, ಸುಬ್ರಹ್ಮಣ್ಯ ಮೈಸೂರು ಅವರ ಧ್ವನಿ ವಿನ್ಯಾಸದಲ್ಲಿ ನಾಟಕ ಮೂಡಿಬಂದಿದೆ. ಸಂಗೀತ ನಿರ್ವಹಣೆಯನ್ನು ಅಜಯ್ ಭಂಡಾರಿ, ಬೆಳಕು ವಿನ್ಯಾಸವನ್ನು ತೀರ್ಥಹಳ್ಳಿ ಶಿವಕುಮಾರ್, ವಸ್ತ್ರವಿನ್ಯಾಸವನ್ನು ಅನಿತಾ ಕಾರ್ಯಪ್ಪ ನಿರ್ವಹಿಸಿದ್ದಾರೆ.

ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಅವರ ಆಪ್ತ ಕಾರ್ಯದರ್ಶಿ ನಾನಕ್‌ಚಂದ್ ರತ್ತು ಸೇರಿದಂತೆ ಡಾ. ಸವಿತಾ ಅಂಬೇಡ್ಕರ್, ಜವಹರಲಾಲ್ ನೆಹರು, ಮಹಾತ್ಮ ಗಾಂಧಿ, ದತ್ತೋಪಂಥ ಠೇಂಗಡಿ ಅವರ ಪಾತ್ರಗಳು ನಾಟಕದ ಮುಖ್ಯಭೂಮಿಕೆಯಲ್ಲಿವೆ. ಇದೇ ಕಿರುರಂಗಮಂದಿರದಲ್ಲಿ ಅ.13ರ ಚೊಚ್ಚಲ ಪ್ರದರ್ಶನದಲ್ಲೇ ಈ ನಾಟಕಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಅಲ್ಲದೆ, ಅ.14 ಮತ್ತು 16ರಂದು ಸಹ ಇದೇ ಸಭಾಂಗಣದಲ್ಲಿ ಪ್ರದರ್ಶನ ಮುಂದುವರೆದು ಪ್ರೇಕ್ಷಕರಿಂದ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ನಾಟಕ ಪ್ರದರ್ಶನದ ಅವಧಿ 2 ಗಂಟೆ 20 ನಿಮಿಷವಾಗಿದೆ. ಇದೀಗ ಮತ್ತೆ ಮೂರು ದಿನಗಳ ಪ್ರದರ್ಶನ ಆರಂಭಗೊಳ್ಳುತ್ತಿದ್ದು, ಟಿಕೆಟ್ ದರ 200 ರೂ. ನಿಗದಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 94484 22343 ಅನ್ನು ಸಂಪರ್ಕಿಸಬಹುದು.

ಅಕಾಲಿಕ ಮಳೆಗೆ ಕಾಳುಮೆಣಸು ಬೆಳೆಗೆ ರೋಗ: ಸಂಕಷ್ಟದಲ್ಲಿ ಬೆಳೆಗಾರರು

ಮಡಿಕೇರಿ,ಅ.26–ಕೊಡಗಿನಲ್ಲಿ ಸುರಿದ ಅಕಾಲಿಕ ಮಳೆಯಿಂದ ಕಾಳು ಮೆಣಸು ಬೆಳೆ ಸಹಿತ ಬಳ್ಳಿಗಳು ಕೂಡ ಕೊಳೆ ರೋಗಕ್ಕೆ ತುತ್ತಾಗಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇವಲ ಎರಡು ತಿಂಗಳು ಕಳೆದಿದ್ದರೆ ಬೆಳೆಗಾರರು ಉತ್ತಮ ಆದಾಯ ಎಣಿಸುವ ಮೂಲಕ ಒಂದಷ್ಟು ಆರ್ಥಿಕವಾಗಿ ಸಬಲರಾಗುತ್ತಿದ್ದರು. ಆದರೆ ವರುಣನ ಅವಕೃಪೆಯಿಂದ ಕರಿಮೆಣಸು ಬೆಳೆಗಾರರ ಕನಸುಗಳೆಲ್ಲವೂ ನುಚ್ಚು ನೂರಾಗಿದ್ದು, ಕೈಗೆ ಬಂದಿದ್ದ ತುತ್ತು ಬಾಯಿಗೆ ಬಾರದಂತಾಗಿದೆ.

ಜಿಲ್ಲೆಯಲ್ಲಿ ಮಳೆ ಸೃಷ್ಟಿಸಿದ ಅವಾಂತರಕ್ಕೆ ನೂರಾರು ರೈತರ ಆದಾಯಕ್ಕೆ ಕತ್ತರಿ ಬಿದ್ದಿದೆ. ವಿರಾಜಪೇಟೆ ತಾಲೂಕಿನ ವಿ.ಬಾಡಗ, ನಾಂಗಾಲ, ಬಿಟ್ಟಂಗಾಲ ವ್ಯಾಪ್ತಿಯಲ್ಲಿ ಪ್ರಸಕ್ತ ವರ್ಷ ನಿರೀಕ್ಷೆಗೂ ಮೀರಿ ಸುರಿದ ಮಳೆಯಿಂದಾಗಿ ಬೆಳೆದು ನಿಂತಿದ್ದ ಕಾಳು ಮೆಣಸು ಬಳ್ಳಿಗಳೆಲ್ಲವೂ ಕೊಳೆ ರೋಗಕ್ಕೆ ಸಿಲುಕಿ ಸರ್ವನಾಶವಾಗಿದೆ. ಬಳ್ಳಿಯ ತುಂಬೆಲ್ಲಾ ಫಸಲಿನಿಂದ ತುಂಬಿದ್ದ ಕಾಳು ಮೆಣಸು ಕಾಯಿಗಳು ಗೊಂಚಲು ಸಹಿತ ಕಳಚಿಕೊಂಡು ಸಂಪೂರ್ಣ ಉದುರಿ ಹೋಗಿವೆ. 15, 20 ವರ್ಷ ಕಷ್ಟಪಟ್ಟು ಬೆಳೆಸಿದ್ದ ಬಳ್ಳಿಗಳೆಲ್ಲವೂ ಅತಿಯಾದ ತೇವಾಂಶದಿಂದ ಕೊಳೆ ರೋಗಕ್ಕೆ ತುತ್ತಾಗುತ್ತಿದ್ದು, ಇದರಿಂದ ಪ್ರತಿಯೊಬ್ಬ ಬೆಳೆಗಾರರು ಲಕ್ಷಾಂತರ ರೂಪಾಯಿಗಳ ನಷ್ಟ ಅನುಭವಿಸುವಂತಾಗಿದೆ. ಕರಿಮೆಣಸು ಬಳ್ಳಿಗಳು ಹಬ್ಬಿರುವ ಮರಗಳ ಕೆಳಗೆ ಕಾಯಿ ಹಂತದ ಕರಿಮೆಣಸು ಗೊಂಚಲುಗಳು ಉದುರಿ ಬಿದ್ದಿರುವುದು ಬೆಳೆಗಾರರ ಕಣ್ಣಲ್ಲಿ ನೀರು ತರಿಸುತ್ತಿದೆ.



ಕೊಳೆ ರೋಗಕ್ಕೆ ತುತ್ತಾಗಿರುವ ಕಾಳು ಮೆಣಸು ಬೆಳೆ ಸಹಿತ ಬಳ್ಳಿಗಳು

ಇದರೊಂದಿಗೆ ಬೆಳೆ ಹಾನಿ ಸಮೀಕ್ಷೆ ನಡೆಸಲು ಅಧಿಕಾರಿಗಳು ಕೂಡ ಆಗಮಿಸಿಲ್ಲ ಎಂಬುದು ರೈತರ ಆರೋಪವಾಗಿದೆ. ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ ಮತ್ತು ಕಾಫಿ ಮಂಡಳಿ ಜಂಟಿಯಾಗಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ನೀಡಬೇಕು. ಈ ವರದಿ ಆಧರಿಸಿ ಬೆಳೆ ಪರಿಹಾರ ನೀಡಲಾಗುತ್ತದೆ. ಆದರೆ ಯಾವುದೇ ಇಲಾಖೆ ಸಮೀಕ್ಷೆಯನ್ನೇ ಮಾಡಿಲ್ಲ ಎಂದು ಸಂತ್ರಸ್ಥರ ರೈತರ ಆರೋಪವಾಗಿದೆ.

ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಅಮ್ಮಣಿಚಂಡ ರಂಜು ಪೂಣಚ್ಚ ಮಾತನಾಡಿ, ರೈತರ ಸಂಕಷ್ಟಕ್ಕೆ ಸರಕಾರ ಸ್ಪಂದಿಸುವ ಮೂಲಕ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಬೇಕೆಂದು ಆಗ್ರಹಿಸಿದರೆ, ಸಂತ್ರಸ್ತ ರೈತ ತೀತಮಾಡ ಮುತ್ತಣ್ಣ ಮಾತನಾಡಿ, ಕಾಳು ಮೆಣಸು ಬಳ್ಳಿಯನ್ನು ಉಳಿಸಿಕೊಳ್ಳಲು ಎಷ್ಟೇ ರಾಸಾಯನಿಕ ದ್ರಾವಣ ಸಿಂಪಡಿಸಿದರೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಬೆಲೆ ನಷ್ಟಕ್ಕೊಳಗಾಗಿ ಸಂಕಷ್ಟಕ್ಕೆ ಸಿಲುಕಿರುವ ಬೆಳೆಗಾರರಿಗೆ ಸರಕಾರ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಅತಿಯಾದ ಮಳೆಯಿಂದಾಗಿ ಕೇವಲ ಕಾಳು ಮೆಣಸು ಮಾತ್ರವಲ್ಲದೆ, ಕಾಫಿ, ಅಡಿಕೆ ಮತ್ತು ಬಾಳೆ ಕೂಡ ನಾಶವಾಗುತ್ತಿದೆ. ಇನ್ನಾದರೂ ಸಂಬಂಧಪಟ್ಟ ಇಲಾಖೆ ಬೆಳೆ ಹಾನಿ ಸಮೀಕ್ಷೆ ನಡೆಸಿ, ಸರಕಾರಕ್ಕೆ ವರದಿ ಸಲ್ಲಿಸುವ ಮೂಲಕ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾದ ಪದಾಧಿಕಾರಿಗಳಾದ ಕುಪ್ಪಂಡ ಮೋಹನ್, ನಡುಮನೆ ಸಂಜು, ನಂಬುಡಮಾಡ ದಿಲೀಪ್, ತೀತಮಾಡ ಮುತ್ತಣ್ಣ, ತೀತಮಾಡ ಬೋಪಣ್ಣ, ಕೋಲತಂಡ ಸುಬ್ರಮಣಿ, ಕೊಂಗಂಡ ಅರುಣ್ ಮೇದಪ್ಪ ಮತ್ತಿತರರು ಆಗ್ರಹಿಸಿದ್ದಾರೆ.

ಪ್ರಾಣ ಉಳಿಸಿಕೊಳ್ಳಲು ಮನೆಗೆ ನುಗ್ಗಿದ ಜಿಂಕೆ

ಸುಂಟಿಕೊಪ್ಪ: ಬೀದಿ ನಾಯಿಗಳ ದಾಳಿಯಿಂದ ಪ್ರಾಣ ಉಳಿಸಿಕೊಳ್ಳಲು ಜಿಂಕೆಯೊಂದು ಮನೆಗೆ ನುಗ್ಗಿ ಆತಂಕ ಸೃಷ್ಟಿಸಿದ ಘಟನೆ ವರದಿಯಾಗಿದೆ.

7ನೇ ಹೊಸಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೊಂಡೂರು ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ 8ಗಂಟೆಯಲ್ಲಿ ಬೀದಿ ನಾಯಿಗಳಿಂದ ತಪ್ಪಿಸಿಕೊಳ್ಳಲು ಜಿಂಕೆಯೊಂದು ಮುಖ್ಯ ರಸ್ತೆಯಲ್ಲಿರುವ ರಾಧಾಕೃಷ್ಣಪ್ಪ ಅವರ ಮನೆಗೆ ನುಗ್ಗಿದೆ. ಮನೆಯಲ್ಲಿ ರಾಧ ಅವರ ಸೊಸೆ ಮತ್ತು ಪುಟ್ಟ ಮಗು ಮಾತ್ರವೇ ಮನೆಯಲ್ಲಿದ್ದು, ಹಾಲ್‌ನಲ್ಲಿ ಪ್ರಾಣ ರಕ್ಷಣೆಗಾಗಿ ಓಡಾಡಿದ ಜಿಂಕೆ ಮಗುವಿನ ಆಟದ ಸಾಮಗ್ರಿಗಳನ್ನು ಹಾಳುಗೆಡವಿದೆ. ಈ ವೇಳೆ ಮನೆಯ ಬಾಗಿಲಿಗೂ ಡಿಕ್ಕಿ ಹೊಡೆದಿದ್ದು ಬಳಿಕ ಹೊರ ಬಂದ ಜಿಂಕೆ ರಸ್ತೆ ದಾಟಿ ಅರಣ್ಯ ಪ್ರವೇಶಿಸುವ ವೇಳೆ ಮತ್ತೆ ಬೀದಿ ನಾಯಿಗಳ ದಾಳಿಗೆ ಸಿಲುಕಿ ಪ್ರಾಣ ಬಿಟ್ಟಿದೆ. ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಜಿಂಕೆಯ ಮೃತ ದೇಹವನ್ನು ವಾಹನದಲ್ಲಿ ಸ್ಥಳಾಂತರಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮೃತ ಜಿಂಕೆ ಅಂದಾಜು 12 ವರ್ಷದ ಪ್ರಾಯದ್ದು ಎಂದು ತಿಳಿದು ಬಂದಿದೆ.

ತಿಂಗಳಿನಲ್ಲಿ ಸರಿಸುಮಾರು 18 ಜಿಂಕೆಗಳು ಬೀದಿ ನಾಯಿಗಳಿಂದ ಪ್ರಾಣ ಕಳೆದು ಕೊಂಡಿವೆ. ಬೀದಿ ನಾಯಿಗಳ ಹಾವಳಿಯನ್ನು ಗ್ರಾಮ ಪಂಚಾಯಿತಿ ನಿಯಂತ್ರಿಸಬೇಕಾಗಿದೆ ಎಂದು ಜಿ.ಪಂ. ಮಾಜಿ ಸದಸ್ಯ ಆರ್.ಕೆ.ಚಂದ್ರು ಹೇಳಿದರು.

ಅರಣ್ಯಕ್ಕೆ ಪ್ರವೇಶಿಸುವವರ ಮೇಲೆ ಮೊಕದ್ದಮೆ ದಾಖಲಿಸುವ ಅರಣ್ಯ ಇಲಾಖೆಯಲ್ಲಿ ವನ್ಯಜೀವಿ ವಿಭಾಗ ಪ್ರತ್ಯೇಕವಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಾಣಿ ಹಿಂಸೆಯಾಗುತ್ತಿದ್ದರೂ ಕೂಡ ಇಲಾಖೆಯ ಅಧಿಕಾರಿಗಳು ಮೌನವಾಗಿರುವುದು ಯಾಕೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೀದಿ ನಾಯಿಗಳಿಗೆ ಆಹಾರ ಮತ್ತು ಪುನರ್ವಸತಿ ಕೇಂದ್ರವನ್ನು ತೆರೆಯುವಂತಾಗಬೇಕೆಂದು ಅವರು ಸಲಹೆ ನೀಡಿದ್ದಾರೆ.



ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಮೃತಪಟ್ಟ ಜಿಂಕೆಯನ್ನು ಸ್ಥಳಾಂತರಿಸಿದರು.

ಉಪವಲಯ ಸಂರಕ್ಷಣಾಧಿಕಾರಿ ಕೆ.ಎ.ದೇವಯ್ಯ ಪ್ರತಿಕ್ರಿಯಿಸಿ ಜಿಂಕೆಗಳ ಸಾವನ್ನು ಮೇಲಧಿಕಾರಿಗಳ ಗಮನಕ್ಕೆ ತಂದಿದ್ದು ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ 7ನೇ ಹೊಸಕೋಟೆ ಗ್ರಾಮ ಪಂಚಾಯಿತಿಗೆ ಲಿಖಿತ ಮನವಿ ಮಾಡಲಾಗುವುದು ಎಂದು ಹೇಳಿದರು.

ಈ ಕುರಿತು ಮಾಹಿತಿ ನೀಡಿದ ಅರಣ್ಯ ಇಲಾಖೆಯ ಮನವಿಯನ್ನು ಆಡಳಿತ ಮಂಡಳಿ ಸಭೆಯಲ್ಲಿಟ್ಟು ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು 7ನೇ ಹೊಸಕೋಟೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ನಂದೀಶ್, ಹೇಳಿದರು.

ಅಂಗಡಿಗಳ ಮೇಲೆ ದಾಳಿ ಪ್ಲಾಸ್ಟಿಕ್ ಕವರ್‌ಗಳ ವಶ

ಸುಂಟಿಕೊಪ್ಪ, ಅ.26– ಸಂತೆ ಮಾರುಕಟ್ಟೆಯ ಅಂಗಡಿಗಳ ಮೇಲೆ ಗ್ರಾಮ ಪಂಚಾಯಿತಿ ಹಾಗೂ ಸ್ವಚ್ಛ ಭಾರತ್ ಮಿಷನ್ ದಾಳಿ ನಡೆಸಿ ದಾಸ್ತಾನು ಇರಿಸಿದ ಪ್ಲಾಸ್ಟಿಕ್ ಕವರ್‌ಗಳನ್ನು ವಶಪಡಿಸಿಕೊಂಡಿದೆ.



ಸಂತೆ ಮಾರುಕಟ್ಟೆಯ ಅಂಗಡಿಗಳ ಮೇಲೆ ಸ್ವಚ್ಛ ಭಾರತ್ ಮಿಷನ್ ದಾಳಿ ನಡೆಸಿ ಪ್ಲಾಸ್ಟಿಕ್ ಕವರ್‌ಗಳನ್ನು ವಶ ಪಡಿಸಿಕೊಂಡಿದೆ.

ಗ್ರಾಮ ಪಂಚಾಯಿತಿ ವತಿಯಿಂದ ಪ್ಲಾಸ್ಟಿಕ್ ನಿಷೇಧ' ಬಗ್ಗೆ ಕಳೆದ ಭಾನುವಾರ ಜಾಗೃತಿ ಅಭಿಯಾನವನ್ನು ಕೈಗೊಳ್ಳಲಾಗಿತ್ತು. ಈ ಭಾನುವಾರ ಸಂತೆ ಮಾರುಕಟ್ಟೆಯಲ್ಲಿ ದಾಳಿ ನಡೆಸಿ ಪ್ಲಾಸ್ಟಿಕ್ ಚೀಲಗಳನ್ನು ವಶಪಡಿಸಿಕೊಳ್ಳುವ ಮೂಲಕ ಮತ್ತಷ್ಟು ಜಾಗೃತಿ ಕ್ರಮ ನಡೆಸಲಾಯಿತು. ವ್ಯಾಪಾರಸ್ಥರಿಗೆ ದಂಡ ವಿಧಿಸುವ ಮೂಲಕ ಎಚ್ಚರಿಕೆ ನೀಡಲಾಯಿತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, ಗಣಕ ಯಂತ್ರ ಸಿಬ್ಬಂದಿ ಸಂಧ್ಯಾ, ಕರ ವಸೂಲಿಗಾರ ಶ್ರೀನಿವಾಸ್, ಮಂಜುನಾಥ್ ಹಾಗೂ ಪೌರ ಕಾರ್ಮಿಕರುಗಳು ಪಾಲ್ಗೊಂಡಿದ್ದರು.

ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಯಿಂದ ವ್ಯಕ್ತಿತ್ವ ವಿಕಸನ

ವಿರಾಜಪೇಟೆ, ಅ.26–ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದ ವಿಕಸನ ವೃದ್ಧಿಸಲು ಸಹಕಾರಿಯಾಗುತ್ತದೆ ಎಂದು ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ ಹೇಳಿದರು.

ಇಲ್ಲಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ, ಕ್ರೀಡಾ ಹಾಗೂ ವಿವಿಧ ಸಮಿತಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಮಹಾತ್ಮರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಕನಸನ್ನು ನನಸು ಮಾಡಲು ಪ್ರಯತ್ನಿಸಬೇಕು. ಪ್ರತಿಯೊಬ್ಬರಲೂ ಕೌಶಲ್ಯ, ಜ್ಞಾನ, ಆರೋಗ್ಯ, ಸಂತೃಪ್ತಿ ಗುಣಗಳು ಇದ್ದಾಗ ಮಾತ್ರ ಉತ್ತಮ ಮನುಷ್ಯನಾಗಲು ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಮಾದಂಡ ತಿಮ್ಮಯ್ಯ ಮಾತನಾಡಿ, ಕಲಿಯುವ ಹುಮ್ಮಸ್ಸು ಪ್ರತಿಯೊಬ್ಬರಲ್ಲೂ ಇದ್ದಾಗ ಮಾತ್ರ ಜೀವನದಲ್ಲಿ ಯಶಸ್ವಿಯಾಗಿ ಬದುಕಲು ಸಾಧ್ಯ. ವಿದ್ಯೆ ಬದುಕನ್ನು ಸದೃಢಗೊಳಿಸುತ್ತದೆ. ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವಶ್ಯ ಎಂದರು.



ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾಸಮಾರಂಭವನ್ನು ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಮಾದಂಡ ತಿಮ್ಮಯ್ಯ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿದ್ದ ನಿವೃತ್ತ ಪ್ರಾಧ್ಯಾಪಕ ಡಾ. ಬೋಪಯ್ಯ, ಐಕ್ಯೂಎಸಿ ಮತ್ತು ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರೊ.ಬಸವರಾಜು ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಾಂಶುಪಾಲರಾದ ಪ್ರೊ.ಸರಸ್ವತಿ ಡಿ.ಕೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿ ಕ್ಷೇಮ ಪಾಲನಾ ಸಮಿತಿಯ ಸಂಚಾಲಕ ಪ್ರೊ.ಕೆ.ಸಿ.ದಯಾನಂದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ಸಂದರ್ಭ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಾದಂಡ ತಿಮ್ಮಯ್ಯ, ನಿವೃತ್ತ ಪ್ರಾಧ್ಯಾಪಕ ಟಿ.ಕೆ.ಬೋಪಯ್ಯರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ರೋವರ್ಸ್ ಅಧಿಕಾರಿ ಎನ್.ಗುರುಪ್ರಸಾದ್, ರೇಂಜರ್ಸ್ ಅಧಿಕಾರಿ ಪಿ.ಟಿ.ದಮಯಂತಿ, ಎನ್‌ಎಸ್‌ಎಸ್ ಅಧಿಕಾರಿ ರುದ್ರ, ಕ್ರೀಡಾ ಸಮಿತಿ ಸಂಚಾಲಕಿ ಡಾ, ಟಿಶೋನಿ, ವಿದ್ಯಾರ್ಥಿ ಸಮಿತಿ ಪದಾಧಿಕಾರಿಗಳಾದ ಉಪಾಧ್ಯಕ್ಷ ನಿಶಾಂತ್ ಜೋಸೆಫ್, ಜಂಟಿ ಕಾರ್ಯದರ್ಶಿ ಸಾಧಿಯ, ಸಹ ಕ್ರೀಡಾ ಕಾರ್ಯದರ್ಶಿ ಭೀಮಯ್ಯ, ಎನ್‌ಎಸ್‌ಎಸ್ ನಾಯಕ ದೀಕ್ಷಿತ, ಸಾಂಸ್ಕೃತಿಕ ಕಾರ್ಯದರ್ಶಿ ಗಾನ ಕಿಶೋರ್, ಕ್ರೀಡಾ ಕಾರ್ಯದರ್ಶಿ ಕಿಶೋರ್, ರೋವರ್ಸ್ ನಾಯಕ ಅಭಿಜಿತ್, ರೇಂಜರ್ಸ್ ನಾಯಕಿ ಲಿಖಿತ, ಕಾರ್ಯಕ್ರಮದಲ್ಲಿ ಬೋಧಕೇತರ ಸಿಬ್ಬಂದಿ, ವಿವಿಧ ವಿಭಾಗಗಳ ವಿದ್ಯಾರ್ಥಿಗಳಿದ್ದರು.

ಕ್ರಿಕೆಟ್ ಆಡುತ್ತಲೇ ಹೃದಯಾಘಾತಕ್ಕೆ ಯುವಕ ಬಲಿ

ಸುಂಟಿಕೊಪ್ಪ, ಅ.26– ಕ್ರಿಕೆಟ್ ಆಡುತ್ತಿದ್ದ ಯುವಕನೊಬ್ಬ ಮೈದಾನದಲ್ಲೇ ಹೃದಯಾಘಾತಕ್ಕೊಳಗಾದ ಘಟನೆ ಸಂಭವಿಸಿದೆ.



ಅರುಣ ಪೂಜಾರಿ(25) ಎಂಬುವರೇ ಮೃತಪಟ್ಟವರಾಗಿದ್ದಾರೆ. ಸಮೀಪದ ಕೆಂಚಟ್ಟಿಯಲ್ಲಿ ರೈಟರ್ ಆಗಿದ್ದ ರಾಮಣ್ಣ ಪೂಜಾರಿ ಅವರ ಮೊಮ್ಮಗ, ಸುಂಟಿ ಕೊಪ್ಪದಲ್ಲಿ ಟೈಲರ್ ವೃತ್ತಿ ನಿರ್ವಹಿಸುತ್ತಿದ್ದು, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಮೋಹನ ಪೂಜಾರಿ ಅವರ ಪುತ್ರ ಅರುಣ ಪೂಜಾರಿ ಕ್ರಿಕೆಟ್ ಆಡುತ್ತಿದ್ದ ವೇಳೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ಮೃತರ ಅಂತ್ಯಕ್ರಿಯೆಯು ಮಡಿಕೇರಿ ಬಳಿಯ ಕಾರೆಕಾಡು ಮಕ್ಕಂದೂರು ಗ್ರಾಮದಲ್ಲಿ ಭಾನುವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಕ್ಸೆಲ್ ವಿದ್ಯಾ ಸಂಸ್ಥೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ



ನಾಪೋಕ್ಲು ಸಮೀಪದ ಬೇತು ಗ್ರಾಮದಲ್ಲಿರುವ ಎಕ್ಸೆಲ್ ವಿದ್ಯಾ ಸಂಸ್ಥೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನವನ್ನು ನೇತಾಜಿ ಶಾಲೆಯ ಮುಖ್ಯಶಿಕ್ಷಕ ಸಿ.ಎಸ್ ಸುರೇಶ್ ಸಭಾ ಉದ್ಘಾಟಿಸಿದರು. ಕುಟ್ಟಂಚೆಟ್ಟಿರ ಮಾದಪ್ಪ, ಶರತ್, ಭವ್ಯ , ಚೋಕಿರ ತಮಯ್ಯ ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಉಡ ಬೇಟೆಯಾಡಿದ್ದ ಇಬ್ಬರ ಬಂಧನ

ಕೊಳ್ಳೇಗಾಲ, ಅ.26–ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಕೊಳ್ಳೇಗಾಲ ವನ್ಯಜೀವಿ ವಲಯದಲ್ಲಿ ಕಣ್ಣಿಗೆ ಬಿದ್ದ ವನ್ಯಜೀವಿ ಉಡವೊಂದನ್ನು ಬೇಟೆಯಾಡಿದ್ದ ಇಬ್ಬರು ಆರೋಪಿಗಳ ಹೆಡೆಮುರಿ ಕಟ್ಟುವಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ರಾಮನಾಥ ಮೋಳೆ ಗ್ರಾಮದ ರಾಜು ಹಾಗೂ ಮದ್ದೂರು ತಾಲೂಕಿನ ಕಪ್ಪರೆ ಕೊಪ್ಪಲು ಗ್ರಾಮದ ಕೆ.ಎಂ.ಸತೀಶ ಬಂಧಿತ ಆರೋಪಿಗಳು. ಅತಿಕ್ರಮವಾಗಿ ಅರಣ್ಯ ಪ್ರವೇಶಿಸಿ ಜಕ್ಕಳ್ಳಿ ಗುಡ್ಡದ ಸಮೀಪದ ಅರೇಪಾಳ್ಯ ರಸ್ತೆ ಬದಿಯಲ್ಲಿ ಕಣ್ಣಿಗೆ ಬಿದ್ದ ವನ್ಯಜೀವಿಯಾದ ಉಡವನ್ನು ಬೇಟೆಯಾಡಿ ಅದನ್ನ ಕಲ್ಲಿನಿಂದ ಜಜ್ಜಿ ಹತ್ಯೆಗೈದಿದ್ದಾರೆ.

ಆರೋಪಿಗಳಿಂದ ಉಡದ ಕಳೆಬರ ಸಹಿತ ಇತರೆ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದ್ದು ಇಬ್ಬರನ್ನೂ ಅರಣ್ಯಾಧಿಕಾರಿಗಳು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮುಂದಿನ ಕ್ರಮಕೈಗೊಂಡಿದ್ದು ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಬಿ.ಎಸ್ ವಾಸು, ಉಪ ವಲಯ ಅರಣ್ಯಾಧಿಕಾರಿ ಬಿ.ಅನಂತರಾಮು, ಗಸ್ತು ಪಾಲಕರಾದ ಸಂಜುನಾಥ ಆಯಟ್ಟಿ, ರಾಜು ಸಿಬ್ಬಂದಿ ಮಹೇಶ್ ಕುಮಾರ್ ಇನ್ನಿತರರು ಇದ್ದರು



ಬಂಧಿತ ಆರೋಪಿಗಳ ಜೊತೆ ಅರಣ್ಯಾಧಿಕಾರಿ ವಾಸು, ಅನಂತರಾಮು, ರಾಜು ಇನ್ನಿತರ ಅಧಿಕಾರಿಗಳನ್ನು ಕಾಣಬಹುದು.

ಹೊನ್ನ ಹೊಳೆಯಲ್ಲಿ ಮುಳುಗಿ ವ್ಯಕ್ತಿ ಸಾವು

ಕೊಳ್ಳೇಗಾಲ, ಅ.26– ತಾಲೂಕಿನ ಹೊಸ ಹಂಪಾಪುರದ ಹೊನ್ನಹೊಳೆಯಲ್ಲಿ ಅತಿಯಾದ ಮದ್ಯಸೇವಿಸಿ ಸ್ನಾನ ಮಾಡಲು ತೆರಳಿದ್ದ ವ್ಯಕ್ತಿ ಸಾವಿಗೀಡಾಗಿರುವ ಘಟನೆ ಜರುಗಿದ್ದು, ವ್ಯಕ್ತಿಯ ಶವ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ.

ಕೊಳ್ಳೇಗಾಲ ಪಟ್ಟಣದ ಬಸ್ತೀಪುರ ನಿವಾಸಿ ವಿಷಕಂಠ ಮೂರ್ತಿ(37) ಮೃತ ವ್ಯಕ್ತಿಯಾಗಿದ್ದು, ಈತ ಶನಿವಾರ ಕೆಲಸ ಮುಗಿಸಿ ಹಂಪಾಪುರದ ಹೊನ್ನಹೊಳೆಯಲ್ಲಿ ಈಜಲು ಹೋಗಿದ್ದ ನೆನ್ನಲಾಗಿದೆ. ಅತಿಯಾಗಿ ಮದ್ಯ ಸೇವನೆ ಮಾಡಿದ್ದರಿಂದ ಸುಳಿಯಲ್ಲಿ ಸಿಲುಕಿ ಸಾವಿಗೀಡಾಗಿರಬಹುದು ಎಂದು ಶಂಕಿಸಲಾಗಿದ್ದು, ಮೃತನ ಪತ್ನಿ ರತ್ನ ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಭಾನುವಾರ ಶವವನ್ನು ಮೇಲೆತ್ತಿ ಇಲ್ಲಿನ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಶವಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಒಪ್ಪಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಂಬೇಡ್ಕರ್, ಬುದ್ಧ ಪ್ರತಿಮೆ ವಿರೂಪ; ಆರೋಪಿಗಳ ಬಂಧನಕ್ಕೆ ಒತ್ತಾಯ



ಜ್ಯೋತಿನಗೌಡಪುರಕ್ಕೆ ಮೈಸೂರಿನ ಉರಿಲಿಂಗಿಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಅವರೊಂದಿಗೆ ಭೇಟಿ ನೀಡಿದ್ದ ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಚಾಮರಾಜನಗರ, ಅ.26–ತಾಲೂಕಿನ ಜ್ಯೋತಿಗೌಡನಪುರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬುದ್ಧ ಪ್ರತಿಮೆ ವಿರೂಪಗೊಳಿಸಿರುವ ಆರೋಪಿಗಳನ್ನು ಬಂಧಿಸುವಂತೆ ಶಾಸಕ ಎ.ಆರ್. ಕೃಷ್ಣಮೂರ್ತಿ ಒತ್ತಾಯಿಸಿದ್ದಾರೆ.

ತಾಲೂಕಿನ ಜ್ಯೋತಿನಗೌಡಪುರಕ್ಕೆ ಮೈಸೂರಿನ ಉರಿಲಿಂಗಿಪೆದ್ದಿ ಮಠದ ಶ್ರೀಜ್ಞಾನ ಪ್ರಕಾಶ ಸ್ವಾಮೀಜಿ ಅವರೊಂದಿಗೆ ಭೇಟಿ ನೀಡಿದ್ದ ಅವರು, ಗ್ರಾಪಂ ಕಚೇರಿ ಮುಂಭಾಗ ಅಂಬೇಡ್ಕರ್ ಭಾವಚಿತ್ರವಿಟ್ಟು ಪ್ರತಿಭಟನೆ ಮಾಡುತ್ತಿರುವ ಮಹಿಳೆಯರು ಹಾಗೂ ಮುಖಂಡರನ್ನುದ್ದೇಶಿಸಿ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಫ್ಲೆಕ್ಸ್ ಹರಿದು ಹಾಕಿ ವಿಕೃತಿ ಮೆರೆದಿರುವವರು ಯಾರೇ ಆಗಿದ್ದರೂ ಅವರಿಗೆ ಸಂವಿಧಾನದ ಚೌಕಟ್ಟಿನಲ್ಲಿ ಶಿಕ್ಷೆಯಾಗಬೇಕು. ಇಂಥ ಘಟನೆಗಳು ಇತರೇ ಯಾವುದೇ ಜಿಲ್ಲೆಗಳಲ್ಲಿ ಆಗದಂತೆ ಸರ್ಕಾರ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಇಂಥ ಘಟನೆಯಲ್ಲಿ ಭಾಗಿಯಾಗಿರುವವರು ಎಷ್ಟೇ ಪ್ರಬಲವಾಗಿದ್ದರು. ಯಾವುದೇ ಜಾತಿಯವರಾಗಿದ್ದರು ಎರಡು ದಿನಗಳಲ್ಲಿ ಬಂಧಿಸಿ, ನಮ್ಮ ಜನಕ್ಕೆ ನ್ಯಾಯ ಕಲ್ಪಿಸಬೇಕು. ಇಲ್ಲದಿದ್ದರೆ ನಮ್ಮ ಹೋರಾಟವನ್ನು ರಾಜ್ಯ, ದೇಶಕ್ಕೆ ವಿಸ್ತರಣೆ ಮಾಡಬೇಕಾಗುತ್ತದೆ ಎಂದರೆ, ದಲಿತ ಮಹಾಸಭಾದ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮಂಗಳವಾರದೊಳಗೆ ಆರೋಪಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ ಕರ್ನಾಟಕ ಬಂದ್‌ಗೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಆರ್. ಬಾಲ ರಾಜು, ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಆರ್. ಮಹದೇವ್, ಮುಖಂಡರಾದ ಅರಕವಾಡಿ ಗುರುಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಇತರರು ಇದ್ದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಪುಟ್ಟಸ್ವಾಮಿ



ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರಾಮಸಮುದ್ರ ಪುಟ್ಟಸ್ವಾಮಿ ಅವರನ್ನು ವಕೀಲರು ಅಭಿನಂದಿಸಿದರು

ಚಾಮರಾಜನಗರ, ಅ.26– ಜಿಲ್ಲಾ ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಹಿರಿಯ ವಕೀಲರಾದ ರಾಮಸಮುದ್ರ ಪುಟ್ಟಸ್ವಾಮಿ ಆಯ್ಕೆಯಾಗಿದ್ದಾರೆ.

ನಗರದ ಜಿಲ್ಲಾ ವಕೀಲರ ಸಂಘದ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರಾಮಸಮುದ್ರದ ಪುಟ್ಟಸ್ವಾಮಿ 87 ಪ್ರಥಮ ಪ್ರಾಶಸ್ತ್ಯ ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಉಳಿದಂತೆ ಎನ್.ಕೆ.ವಿರೂಪಾಕ್ಷ ಸ್ವಾಮಿ, ಉದಯ ರಂಗ, ಎಚ್.ಎನ್. ಲೋಕೇಶ್ ಹಾಗೂ ನಾಗರಾಜು ಪರಾಜಿತರಾದರು.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಮರಿಯಾಲದಹುಂಡಿ ಎಂ. ಶಿವರಾಮು, ಉಪಾಧ್ಯಕ್ಷರಾಗಿ ದೊಡ್ಡಮೋಳೆ ರಂಗಸ್ವಾಮಿ, ಜಂಟಿ ಕಾರ್ಯದರ್ಶಿಯಾಗಿ ಸಿ.ಸಿ.ರಮೇಶ್, ಖಜಾಂಚಿಯಾಗಿ ನಾಗಮ್ಮ, ಸಾಮಾನ್ಯ ಸದಸ್ಯರಾಗಿ ಎಂ. ವಿಜಯ್, ಎನ್. ಮಲ್ಲೇಶ್‌ಪ್ರಭು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಚುನಾವಣಾಧಿಕಾರಿ ವಡ್ಡಗಲ್‌ಪುರ ಶಿವಸ್ವಾಮಿ ಅಧಿಕೃತವಾಗಿ ಘೋಷಣೆ ಮಾಡಿದರು.

ಸಂಘದ ಅಭಿವೃದ್ಧಿಗೆ ಬದ್ಧ: ಜಿಲ್ಲಾ ವಕೀಲರ ಸಂಘದ ಅಧ್ಯಕ್ಷನನ್ನಾಗಿ ನನ್ನನ್ನು ಆಯ್ಕೆ ಮಾಡಿದ ವಕೀಲ ಬಂಧುಗಳಿಗೆ ನಾನು ಚಿರಋಣಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ವಕೀಲರ ಸಮಸ್ಯೆಗಳಿಗೆ ಸ್ಪಂದಿಸಿ, ಎಲ್ಲಾ ವಕೀಲರ ಸ್ನೇಹಿಯಾಗಿ ಕರ್ತವ್ಯ ನಿರ್ವಹಿಸುತ್ತೇನೆ ಎಂದರು.

ವಕೀಲರಾದ ಪ್ರಸನ್ನಕುಮಾರ್, ಮಂಜು, ಸುರೇಶ್, ಚಂದ್ರು ಮಹೇಶ್, ಹರವೆ ಮಂಜು, ಎಚ್.ಬಿ. ಲೋಕೇಶ್, ಮಹೇಂದ್ರ, ಕೆಂಪರಾಜು, ಉಮೇಶ್, ರವೀಶ್, ಸವಿತಾ, ಚಂದ್ರು ದೇವರಾಜು, ಕಾವ್ಯ, ಸುಚಿತ್ರ, ಸವಿತಾ, ಸಂತೋಷ್ ಇದ್ದರು.

ಇಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವ

ಚಾಮರಾಜನಗರ, ಅ.26– ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಅ.27ರ ಮಧ್ಯಾಹ್ನ 2 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಉಪಸ್ಥಿತರಿರುವರು. ಶಾಸಕಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು.

ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು. ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್. ಸುರೇಶ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನ), ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ನಗರಸಭೆ ಉಪಾಧ್ಯಕ್ಷೆ ಮಮತ, ಸದಸ್ಯ ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಅಕ್ರಮ ಅಕ್ಕಿ ಸಾಗಾಣಿಕೆ : ಗೂಡ್ಸ್ ವಾಹನ, 19 ಮೂಟೆ ಅಕ್ಕಿ ಜಪ್ತಿ



ಗೂಡ್ಸ್ ವಾಹನ ಮತ್ತು ಅಕ್ಕಿ ಮೂಟೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ, ಅ.26–ತಾಲೂಕಿನ ನರೀಪುರ ಬೈಪಾಸ್‌ನಲ್ಲಿ ಅಕ್ರಮವಾಗಿ ಅಕ್ಕಿ ಸಾಗಾಣಿಕೆ ಮಾಡುತ್ತಿದ್ದ ಗೂಡ್ಸ್ ವಾಹನವನ್ನು ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ದಾಳಿ ಮಾಡಿ 19 ಮೂಟೆಯನ್ನು ಜಪ್ತಿ ಮಾಡಿದ್ದಾರೆ.

ಹನೂರು ಕಡೆಯಿಂದ ಮಳವಳ್ಳಿ ಕಡೆಗೆ ಅಕ್ರಮವಾಗಿ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆಯ ಫುಡ್ ಇನ್ಸ್‌ಪೆಕ್ಟರ್ ಎನ್.ಎಂ.ಪ್ರಸಾದ್ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಕ್ರೈಂ ಪಿಎಸ್‌ಐ ಚಲುವರಾಜು ಪೊಲೀಸ್ ಸಿಬ್ಬಂದಿ ಜೊತೆ ಜಂಟಿ ದಾಳಿ ನಡೆಸಿದಾಗ ಚಾಲಕ ವಾಹನವನ್ನು ನರೀಪುರ ಬೈಪಾಸ್‌ನಲ್ಲಿ ಬಿಟ್ಟು ಪರಾರಿಯಾಗಿದ್ದಾನೆ.

ಅಧಿಕಾರಿಗಳು 950 ಕೆಜಿಯ ಒಟ್ಟು 19 ಮೂಟೆ ಹಾಗೂ ಸಾಗಾಣಿಕೆ ಬಳಸಿದ್ದ ಗೂಡ್ಸ್ ವಾಹನವನ್ನು ಜಪ್ತಿ ಮಾಡಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಾಹನ ಮಾಲೀಕನ ಪತ್ತೆಗೆ ಕ್ರಮ ಜರುಗಿಸಿದ್ದಾರೆ. ದಾಳಿಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಹೆಡ್ ಕಾನ್ಸಟೇಬಲ್ ರಾಜಪ್ಪ, ಕಾನ್ಸ್‌ಟೇಬಲ್ ಮನೋಹರ್, ಮಹದೇವಸ್ವಾಮಿ ಇದ್ದರು.

ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ



ಕೊಳ್ಳೇಗಾಲದ ವೇಣುಗೋಪಾಲ್ ಗೋಲ್ಡ್ ಪ್ಯಾಲೇಸ್ ಹಾಗೂ ಎಸ್‌ವಿಎಸ್ ಆಶ್ರಮದಲ್ಲಿ ನಡೆದ ಜಿಲ್ಲಾ ಮಟ್ಟದ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಗುಂಡ್ಲುಪೇಟೆ ಉಲ್ಲಾಸ್, ದುಷ್ಯಂತ್ ಹಾಗೂ ದ್ವಿತೀಯ ಸ್ಥಾನ ಪಡೆದ ನಿತಿನ್ ಚಂದ್, ಅಭಿಲಾಷ್ ಅವರಿಗೆ ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಆರಕ್ಷಕ ನಿರೀಕ್ಷಕ ಸುಪ್ರೀತ್ ಬಹುಮಾನ ವಿತರಿಸಿದರು.

ಇಂದು ಜಿಲ್ಲಾಮಟ್ಟದ ಅಭಿವೃದ್ಧಿ ಸಮನ್ವಯ ಸಮಿತಿ ಪರಿಶೀಲನಾ ಸಭೆ

ಚಾಮರಾಜನಗರ, ಅ. 26–ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಸಂಸದ ಸುನೀಲ್ ಬೋಸ್ ಅಧ್ಯಕ್ಷತೆಯಲ್ಲಿ ಅ.27ರ ಮಧ್ಯಾಹ್ನ 12 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಶಿಕ್ಷಕರು ಅ.29ರೊಳಗೆ ಆಕ್ಷೇಪಣಾ ಪತ್ರ ಸಲ್ಲಿಸಿ

ಚಾಮರಾಜನಗರ: ರಾಜ್ಯ ಸರ್ಕಾರವು ಅ.16 ರಂದು ಹೊರಡಿಸಿರುವ ವೃಂದ ಮತ್ತು ನೇಮಕಾತಿಗಳ ತಿದ್ದುಪಡಿ ಅಧಿಸೂಚನೆಯಲ್ಲಿ ಟಿಇಟಿ ಸೇರ್ಪಡೆಗೊಳಿಸಿರುವುದಕ್ಕೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ವತಿಯಿಂದ ನಿರ್ಣಯ ಕೈಗೊಳ್ಳಲಾಯಿತು.

ನಗರದ ನ್ಯಾಯಾಲಯದ ರಸ್ತೆಯಲ್ಲಿರುವ ರಾಜ್ಯ ಸರ್ಕಾರಿ ನೌಕರ ಸಂಘದ ಸಭಾಂಗಣದಲ್ಲಿ ಕರೆದಿದ್ದ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಸರ್ವ ಸದಸ್ಯರ ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಮಾತನಾಡಿ, ಅ.16 ರಂದು ಹೊರಡಿಸಿರುವ ಅಧಿಸೂಚನೆಯಂತೆ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಕರಡು ನಿಯಮಗಳಿಗೆ ರಾಜ್ಯದ ಎಲ್ಲಾ ತಾಲ್ಲೂಕು, ಜಿಲ್ಲಾ ಘಟಕಗಳು ಹಾಗೂ ಪ್ರತಿ ಶಿಕ್ಷಕರು ಕೂಡ ಆಕ್ಷೇಪಣೆಗಳನ್ನು ಸಲ್ಲಿಸಲು ರಾಜ್ಯ ಸಂಘ ಕರೆ ನೀಡಿರುವುದರಿಂದ, ನಮ್ಮ ಜಿಲ್ಲೆಯಲ್ಲಿ ಆಕ್ಷೇಪಣೆಗಳನ್ನು ಅ. 29ರೊಳಗೆ ಕಡ್ಡಾಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಲ್ಲಿಸಬೇಕಾಗಿದೆ ಎಂದರು.

ಹುಣಸೂರು ಟಿಎಪಿಸಿಎಂಎಸ್ ಆಡಳಿತ ಮತ್ತೆ ಜೆಡಿಎಸ್ ತೆಕ್ಕೆಗೆ

ಎಲ್ಲಾ ಸ್ಥಾನಗಳಲ್ಲೂ ಗೆದ್ದು ಬೀಗಿದ ಜೆಡಿಎಸ್, ಕಾಂಗ್ರೆಸ್‌ಗೆ ಮುಖಭಂಗ

ವಿಜೇತರೊಂದಿಗೆ ಶಾಸಕ ಹರೀಶ್‌ಗೌಡ ವಿಜಯೋತ್ಸವ

ಹುಣಸೂರು, ಅ.26– ಹುಣಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ (ಟಿಎಪಿಸಿಎಂಎಸ್)ದ ಆಡಳಿತ ಮಂಡಳಿಯ 8 ಕ್ಷೇತ್ರಗಳಿಗೆ(ಬಿ.ತರಗತಿ) ನಡೆದ ಚುನಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದ ಜೆಡಿಎಸ್ ಬೆಂಬಲಿತ ಎಂಟೂ ಅಭ್ಯರ್ಥಿಗಳು ಗೆಲುವಿನ ನಗೆ ಬೀರುವ ಮೂಲಕ ಜೆಡಿಎಸ್ ತನ್ನ ದಶಕಗಳ ಏಕಚಕ್ರಾಧಿಪತ್ಯವನ್ನು ಮುಂದುವರೆಸಿದೆ.

ವಾರದ ಹಿಂದೆ ನಡೆದ ಸಂಘದ 'ಎ' ತರಗತಿ(ಸೊಸೈಟಿಗಳನ್ನು ಪ್ರತಿನಿಧಿಸುವ ವಿಭಾಗ) ವಿಭಾಗದಲ್ಲಿ ನಾಲ್ಕು ಕ್ಷೇತ್ರಗಳ ಪೈಕಿ ನಾಲ್ಕು ಸ್ಥಾನಗಳಲ್ಲಿಯೂ ಜೆಡಿಎಸ್ ಬೆಂಬಲಿತರು ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಪ್ರಾಬಲ್ಯ ಮೆರೆದರು. ತೀವ್ರ ಪೈಪೋಟಿ ನೀಡಿದ್ದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಹೀನಾಯ ಸೋಲು ಅನುಭವಿಸಿದರು. ಒಟ್ಟು 12 ಸ್ಥಾನಗಳ ಪೈಕಿ 12 ಸ್ಥಾನಗಳನ್ನೂ ಜೆಡಿಎಸ್ ತನ್ನ ಮಡಿಲಿಗೆ ಹಾಕಿಕೊಳ್ಳುವ ಮೂಲಕ ಪಾರಮ್ಯ ಮೆರೆಯಿತು.

ಗೆಲುವು–ಸೋಲು ಯಾರ್‍ಯಾರಿಗೆ? ಮಹಿಳಾ ಕ್ಷೇತ್ರದ ವಿಜಯಶಾಲಿಗಳು: ಮಹಿಳಾ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಇಂದುಕಲಾ ಶ್ರೀಗೌಡ 1213 ಮತಗಳು ಮತ್ತು ಮಂಗಳಗೌರಿ 1103 ಮತಗಳನ್ನು ಗಳಿಸಿ ಗೆಲುವಿನ ನಗೆ ಬೀರಿದರು. ಕಾಂಗ್ರೆಸ್ ಬೆಂಬಲಿತ ಕೆಎನ್.ಕಲ್ಪನಾ 303 ಮತ್ತು ಎನ್.ಎಸ್.ಕಾವ್ಯ 255 ಮತಗಳನ್ನು ಗಳಿಸಲಷ್ಟೇ ಸಾಧ್ಯವಾಯಿತು. ಹಿಂದುಳಿದ ವರ್ಗ (ಪ್ರವರ್ಗ–ಬಿ) ಮೀಸಲು ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತ ಎ.ಸಿ.ಕೆಂಪೇಗೌಡ 1129 ಮತಗಳನ್ನು ಗಳಿಸಿದರೆ ಕಾಂಗ್ರೆಸ್ ಬೆಂಬಲಿತ ಎಂ.ವೈಶಾಖ್ 320 ಮತಗಳನ್ನು ಗಳಿಸಿ ಸೋಲನುಭವಿಸಿದರು.

> **ಸಹಕಾರಿಗಳು ಬೆಂಬಲ ನೀಡಿದ್ದಾರೆ**
>
> ಟಿಎಪಿಸಿಎಂಎಸ್ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ್ತೊಮ್ಮೆ ಸಹಕಾರಿಗಳು ಜೆಡಿಎಸ್ ಪರ ಮತ್ತು ನನ್ನನ್ನು ಹೃದಯಪೂರ್ವಕವಾಗಿ ಬೆಂಬಲಿಸಿ ಅಭೂತಪೂರ್ವ ಗೆಲುವು ದೊರಕಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು. ಸಹಕಾರಿಗಳ ಈ ಬೆಂಬಲ ನನಗೆ ಆನೆಬಲ ತಂದಿದೆ. ರೈತರು ಮತ್ತು ಸಹಕಾರಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ನನ್ನ ಹೋರಾಟಕ್ಕೆ ಇನ್ನಷ್ಟು ಬಲ ಬಂದಂತಾಗಿದೆ. ಜನರ ವಿಶ್ವಾಸಕ್ಕೆ ಕುಂದು ಬಾರದಂತೆ ಕರ್ತವ್ಯ ನಿರ್ವಹಿಸುತ್ತೇನೆ.
>
> –ಜಿ.ಡಿ.ಹರೀಶ್‌ಗೌಡ, ಶಾಸಕ, ಹುಣಸೂರು

ಹಿಂದುಳಿದ ವರ್ಗ(ಪ್ರವರ್ಗ–ಎ) ಮೀಸಲು ಕ್ಷೇತ್ರದಿಂದ ಜೆಡಿಎಸ್‌ನ ಎಚ್.ಟಿ.ಬಾಬು 1057 ಮತಗಳನ್ನು ಗಳಿಸಿ ವಿಜಯಿಯಾದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಶಂಕರ್ ಕೇವಲ 139 ಮತಗಳನ್ನು ಗಳಿಸಿ ಸೋಲುಂಡರು. ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ ದಲ್ಲಿ ಜೆಡಿಎಸ್‌ನ ಬಸವಲಿಂಗಯ್ಯ 1112 ಮತಗಳನ್ನು ಗಳಿಸಿ ವಿಜಯದ ನಗೆ ಬೀರಿ ದರೆ, ಪ್ರತಿಸ್ಪರ್ಧಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಚಿನ್ನವೀರಯ್ಯ 255 ಮತಗಳನ್ನು ಗಳಿಸಿ ಸೋತರು.

ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಜೆಡಿಎಸ್‌ನ ಎಂ.ಸೋಮಶೇಖರ್ 1016 ಮತಗಳನ್ನು ಗಳಿಸಿ ವಿಜಯಿಯಾದರೆ, ಕಾಂಗ್ರೆಸ್‌ನ ಜವರನಾಯಕ 155 ಮತಗಳನ್ನು ಗಳಿಸಿ ಸೋಲು ಅನುಭವಿಸಿದರು. ಎರಡು ಸಾಮಾನ್ಯ ಕ್ಷೇತ್ರಗಳಲ್ಲಿ ಜೆಡಿಎಸ್‌ನ ಎಚ್.ಆರ್.ಮಹೇಶ್ 1099 ಮತಗಳು ಮತ್ತು ಜಿ.ಎನ್.ವೆಂಕಟೇಶ್ 1083 ಮತಗಳನ್ನು ಗಳಿಸಿ ಗೆಲುವು ಸಾಧಿಸಿದರೆ, ಕಾಂಗ್ರೆಸ್ ಬೆಂಬಲಿನ ಅಭ್ಯರ್ಥಿಗಳಾದ ಎಚ್.ಎಸ್.ಮಹೇಶ್ 335 ಮತಗಳು ಹಾಗೂ ಎಂ.ಕುಮಾರ್ 356 ಮತಗಳನ್ನು ಗಳಿಸಲಷ್ಟೇ ಸಾಧ್ಯವಾಯಿತು.

ಸಂಭ್ರಮಾಚರಣೆ: ಜೆಡಿಎಸ್ ತನ್ನ ಪಾರಮ್ಯ ಮೆರೆಯುತ್ತಿದೆ ಎಂದು ಅರಿತ ಪಕ್ಷದ ಕಾರ್ಯಕರ್ತರು ಮತ್ತು ಶಾಸಕ ಜಿ.ಡಿ.ಹರೀಶ್‌ಗೌಡರ ಅಭಿಮಾನಿಗಳು ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಪಟಾಕಿ ಸಿಡಿಸಿ ಸಂಭ್ರಮಿಸಿದರು. ತಮ್ಮ ನೆಚ್ಚಿನ ನಾಯಕ ಜಿ.ಡಿ.ಹರೀಶ್‌ಗೌಡರನ್ನು ಹೆಗಲ ಮೇಲೆ ಹೊತ್ತು ಮೆರವಣಿಗೆ ನಡೆಸಿ ಸಂಭ್ರಮಿಸಿದರು. ಸಿಹಿ ಹಂಚಿ ಸಂತಸಪಟ್ಟರು. ಜೈಕಾರಗಳನ್ನು ಮೊಳಗಿಸಿದರು.

ತೀವ್ರ ಮುಖಭಂಗ: ಟಿಎಪಿಸಿಎಂಎಸ್ ಆಡಳಿತ ಮಂಡಳಿ ಚುನಾವಣೆಯ ಆರಂಭದಿಂದಲೂ ಕಾಂಗ್ರೆಸ್ ಪಕ್ಷ ತನ್ನ ಸಾಮರ್ಥ್ಯ ಪ್ರದರ್ಶಿಸಲು ತುರುಸಿನ ಕ್ರಮ ವಹಿಸಿತ್ತು. ಸಹಕಾರ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಗಳೂ ಅಸ್ತಿತ್ವ ಕಾಣಬೇಕೆಂದು ಹರಸಾಹಸ ಪಟ್ಟರೂ ಪ್ರಯೋಜನವಾಗಲಿಲ್ಲ.



ಚುನಾವಣೆಯಲ್ಲಿ ಗೆಲುವು ಸಾಧಿಸಿದವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಅಭಿನಂದಿಸಿದರು.

ತಿ.ನರಸೀಪುರದಲ್ಲಿ 'ವೋಟ್ ಚೋರಿ' ಅಭಿಯಾನಕ್ಕೆ ಚಾಲನೆ

ಪ್ರತಿ ವಿಧಾನಸಭಾ ಕ್ಷೇತ್ರದಿಂದ 20 ಸಾವಿರ ಸಹಿ ಸಂಗ್ರಹಿಸಬೇಕು: ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಆ.26– ಪ್ರಜಾಪ್ರಭುತ್ವದ ಆಶಯಗಳನ್ನು ಬುಡಮೇಲು ಮಾಡುತ್ತಿರುವ "ವೋಟ್ ಚೋರಿ" ಪ್ರಕರಣದ ವಿರುದ್ಧ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಅಭಿಯಾನದ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಡಿಜಿಟಲ್ ಕರಪತ್ರದ ಮೇಲೆ ಸಹಿ ಮಾಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ನಿರ್ದೇಶನ ಮೇರೆಗೆ ನೂರಾರು ಕಾರ್ಯಕರ್ತರು ಮತ್ತು ಮುಖಂಡರ ಸಮ್ಮುಖದಲ್ಲಿ ಚಾಮರಾಜನಗರ ಲೋಕಸಭಾ ವ್ಯಾಪ್ತಿಯ 8 ವಿಧಾನ ಸಭಾ ಕ್ಷೇತ್ರಗಳ "ವೋಟ್ ಚೋರಿ 'ಅಭಿಯಾನಕ್ಕೆ ಸಚಿವ ಮಹದೇವಪ್ಪ ಚಾಲನೆ ನೀಡಿದರು.

ರಾಷ್ಟ್ರದ ಎಲ್ಲೆಡೆ ಬಿಜೆಪಿ ಪಕ್ಷ ಚುನಾವಣಾ ಆಯೋಗದ ಸಹಕಾರದೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಮತ ಬೀಳುವ ಬೂತ್, ಮತಕ್ಷೇತ್ರದ, ವಿಧಾನಸಭಾ ಕ್ಷೇತ್ರ ಸೇರಿದಂತೆ ಎಲ್ಲ ಹಂತಗಳಲ್ಲೂ ಮತದಾರನ್ನು ಕೈಬಿಡುವ ಮುಖೇನ ಮತಗಳ್ಳತನ ಮಾಡುತ್ತಿದೆ. ಇದರ ವಿರುದ್ಧ ಕಾಂಗ್ರೆಸ್ ಪಕ್ಷ ಜನಜಾಗೃತಿ ಮತ್ತು ಮತಗಳ್ಳತನ ತಪ್ಪಿಸಲು ಸಹಿ ಸಂಗ್ರಹಣೆ ಅಭಿಯಾನವನ್ನು ಆರಂಭಿಸಿದ್ದು, ಕಾಂಗ್ರೆಸ್ ಕಾರ್ಯಕರ್ತರು ಪ್ರತಿ ವಿಧಾನ ಸಭೆ ವ್ಯಾಪ್ತಿಗೆ ಕನಿಷ್ಠ 20000 ಸಾವಿರ ಸಹಿ ಸಂಗ್ರಹಿಸಬೇಕು ಎಂದು ಮನವಿ ಮಾಡಿದರು. ಚುನಾವಣೆ ಆಯೋಗ ಒಂದು ಸ್ವಾಯತ್ತೆ ಸಂಸ್ಥೆ. ಇದು ಸಂವಿಧಾನ ಪ್ರದತ್ತವಾದ ಜನರಿಗೆ ಲಭಿಸಿರುವ ಮತದಾನ ಹಕ್ಕನ್ನು ರಕ್ಷಿಸುವ ಮುಖೇನ ಪಾರದರ್ಶಕ ಮತ್ತು ಪ್ರಾಮಾಣಿಕ ಚುನಾವಣೆ ನಡೆಸಬೇಕು. ಯಾವುದೇ ಒಂದು ಕ್ಷೇತ್ರದಲ್ಲಿ ಮತದಾರರ ಸಂಖ್ಯೆ ಗಣನೀಯವಾಗಿ ಕುಸಿತವಾದರೆ ಅಂತಹ ಮತ ಕ್ಷೇತ್ರವನ್ನು ಚುನಾವಣೆ ಆಯೋಗ ಗಮನಿಸಬೇಕು. ಚುನಾವಣೆ ಆಯೋಗವೇ ಬಿಜೆಪಿ ಜತೆ ಸೇರಿಕೊಂಡು ಮತ ಕಳವು ಮಾಡಲು ಸಹಕಾರ ನೀಡುತ್ತಿದೆ. ಇದರಿಂದ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಅನುಭವಿಸುತ್ತಿದೆ ಎಂದರು.



ವೋಟ್ ಚೋರಿ ಸಹಿ ಸಂಗ್ರಹ ಅಭಿಯಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು. ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್ ಇತರರಿದ್ದರು.

> ತಿ.ನರಸೀಪುರ ರಾಜ್ಯದಲ್ಲಿ ಅತ್ಯಂತ ಪ್ರಭಾವಿ ಕ್ಷೇತ್ರ. ಇಲ್ಲಿ ಮುಖ್ಯಮಂತ್ರಿ, ಸಚಿವ, ಸಂಸದರು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಹೊಂದಿದೆ. ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿಗಳು ಹೆಚ್ಚು ಅನುದಾನವನ್ನು ನೀಡಿದ್ದಾರೆ. ಮುಂದೆಯೂ ನರಸೀಪುರ ಮತ್ತು ವರುಣಾ ಕ್ಷೇತ್ರಕ್ಕೆ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಲಿದ್ದಾರೆ. –ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ.

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿದರು. ಸಭೆಯಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ವೈ.ಎನ್.ಶಂಕರೇಗೌಡ, ಮಾಜಿ ಜಿಪಂ ಸದಸ್ಯೆ ಸುಧಾ ಮಹಾದೇವಯ್ಯ, ಹೊನ್ನ ನಾಯಕ, ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಶಾ, ಕೊಳತೂರ್ ಕುಮಾರ್, ಗದ್ದೆಮೊಳೆ ಸಿದ್ದರಾಜು, ಸೋಮಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಚನ್ನಕೇಶವ, ಹ್ಯಾಕನೂರು ಉಮೇಶ್, ಕೆಬ್ಬೆ ಶಿವಸ್ವಾಮಿ, ದೊಡ್ಡಬಾಗಿಲು ಮಲ್ಲಿಕಾರ್ಜುನ ಸ್ವಾಮಿ, ಸದಸ್ಯರಾದ ಕುಕ್ಕೂರು ಗಣೇಶ್, ರಾಮಲಿಂಗಯ್ಯ, ನರಸಿಂಹ ಮಾದನಾಯಕ, ಕೆಬ್ಬೆ ರಂಗಪ್ಪ ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಸೂಸಲೇ ಮಹದೇವಸ್ವಾಮಿ, ಪ್ರತಿಮಮೂರ್ತಿ, ಪ್ರೊಫೆಸರ್ ಡಾ.ಬಿ.ಕೆ.ಜ್ಞಾನಪ್ರಕಾಶ್, ಹೆಮ್ಮಿಗೆ ಶೇಷಾದ್ರಿ, ಮಾಡ್ರಹಳ್ಳಿ ಶಿವಮೂರ್ತಿ, ಜ್ಞಾನೇಂದ್ರ, ರಂಗನಾಥ್ ಪ್ರಸಾದ್, ನಾರಾಯಣ, ಕೇತಹಳ್ಳಿ ಸಿದ್ದಶೆಟ್ಟಿ, ಕಾವೇರಿಪುರ ರಾಜೇಶ ಮೂರ್ತಿ, ಕೋಕಿಲ, ಬಸವರಾಜು ಹಾಜರಿದ್ದರು.

ಬೈಕಿಗೆ ಕಾರು ಡಿಕ್ಕಿ ಹೊಡೆದು ಕೆಳಗೆ ಬೀಳಿಸಿ ಮಾರಕಾಯುಧದಿಂದ ಚುಚ್ಚಿ ದರೋಡೆಗೆ ಯತ್ನ

ಮತ್ತೊಂದು ವಾಹನ ಬಂದಿದ್ದರಿಂದ ದರೋಡೆ ಬಿಟ್ಟು ಪರಾರಿ

ನಂಜನಗೂಡು: ಬೈಕಿನಲ್ಲಿ ತೆರಳುತ್ತಿದ್ದ ದಂಪತಿಯನ್ನು ಕಾರಿನಲ್ಲಿ ಬಂದ ಆಗಂತುಕರು ಸಿನಿಮೀಯ ಶೈಲಿಯಲ್ಲಿ ಅಟ್ಯಾಕ್ ಮಾಡಿ ಕೆಳಕ್ಕೆ ಬೀಳಿಸಿ ಮಾರಾಕಾಯುಧದಿಂದ ಚುಚ್ಚಿ ದರೋಡೆಗೆ ಯತ್ನಿಸಿದ ಘಟನೆ ನಗರದ ಹಂಡುವಿನಹಳ್ಳಿ ಬಡಾವಣೆ ಸಮೀಪ ಸಂಭವಿಸಿದೆ.

ತಾಲೂಕಿನ ಹದಿನಾರು ಗ್ರಾಮದ ನಿವಾಸಿ ರಾಜೇಂದ್ರ ಹಾಗೂ ಅವರ ಪತ್ನಿ ಸಂಗೀತಾ ಎಂಬುವರೇ ಹಲ್ಲೆಗೊಳಗಾಗಿ ಪ್ರಾಣಾಪಾಯದಿಂದ ಪಾರಾದ ದಂಪತಿ. ರಾಜೇಂದ್ರ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಶನಿವಾರ ಸಂಜೆ 7.30ರ ಸಮಯದಲ್ಲಿ ನಗರದ ಹಂಡುವಿನಹಳ್ಳಿ ಬಡಾವಣೆಯ ಮುಖ್ಯ ರಸ್ತೆಯಲ್ಲಿ ದಂಪತಿ ಕಾರ್ಯ ನಿಮಿತ್ತ ಬೈಕಿನಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ಕಾರಿನಲ್ಲಿ ಬಂದ ಆಗಂತುಕರು ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ರಾಜೇಂದ್ರರನ್ನು ಕೆಳಕ್ಕೆ ತಳ್ಳಿ ಬೀಳಿಸಿ ಜಗಳ ತೆಗೆದಿದ್ದಲ್ಲದೆ ಹರಿತವಾದ ವಸ್ತುವಿನಿಂದ ಹೊಟ್ಟೆಯ ಭಾಗಕ್ಕೆ ಚುಚ್ಚಿದ್ದಾರೆ.

ರಾಜೇಂದ್ರ ಅವರು ಗಾಯಗೊಂಡು ಒದ್ದಾಡುತ್ತದ್ದ ವೇಳೆ ಅವರ ಪತ್ನಿ ಸಂಗೀತಾರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕೀಳಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ಎದುರಿನಿಂದ ವಾಹನವೊಂದು ಬಂದಿದ್ದರಿಂದ ಅವರು ಕಳ್ಳತನವನ್ನು ಕೈಬಿಟ್ಟು ಕಾರಿನಲ್ಲಿ ಪರಾರಿಯಾಗಿದ್ದಾರೆ.

ಬಳಿಕ ಸ್ಥಳೀಯರ ನೆರವಿನೊಂದಿಗೆ ರಾಜೇಂದ್ರ ಸ್ಥಳೀಯ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ನಂಜನಗೂಡು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ವಿಶೇಷ ತಂಡದೊಂದಿಗೆ ಸಜ್ಜಾಗಿದ್ದಾರೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಹೆಡಿಯಾಲ ಪಿಎಸಿಎಸ್‌ಗೆ ಬಂಡಾಯ ಕಾಂಗ್ರೆಸ್ ಬೆಂಬಲಿತರ ಜಯಭೇರಿ



ವಿಜೇತ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು.

ಮಲ್ಕುಂಡಿ: ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಬಂಡಾಯ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಜಯಶೀಲರಾಗಿದ್ದಾರೆ.

ಸಂಘದ ಕಛೇರಿಯಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳಾದ ಹೆಚ್.ಇ.ಅಶ್ರಫ್ ಅಲಿ 126, ರಂಗಸ್ವಾಮಿ 106, ನಾಗಲಾಂಬಿಕೆ 84, ನಾಗಪ್ಪ 96 ರಾಜೇಶ್ 116 ಮತ ಪಡೆದು ಜಯಶೀಲರಾಗಿದ್ದಾರೆ.

ನೂತನ ನಿರ್ದೇಶಕ ಅಶ್ರಫ್ ಅಲಿ ಮಾತನಾಡಿ, ಕಾಂಗ್ರೆಸ್ ಮುಖಂಡ ನೆಹಮತ್ ಉಲ್ಲಾಖಾನ್ ಅವರ ನೇತೃತ್ವದಲ್ಲಿ ನಮ್ಮ ಪಕ್ಷದಲ್ಲಿ ಸ್ಥಳೀಯವಾಗಿ ಸಣ್ಣಪುಟ್ಟ ಗೊಂದಲಗಳಿಂದ ನಾವು ಬಂಡಾಯವಾಗಿ ಚುನಾವಣೆಗೆ ಸ್ಪರ್ಧೆ ಮಾಡಬೇಕಾಯಿತು. ಅದರಲ್ಲಿ ನಾವು ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಹೆಡಿಯಾಲ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆಯಾಗಿದ್ದೇವೆ ಎಂದರು. ಸಂಘದ ಅಭಿವೃದ್ಧಿಗೆ ಎಲ್ಲರ ಸಹಕಾರ ಮುಖ್ಯವಾಗಿದೆ ಎಲ್ಲಾ ಸದಸ್ಯರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡ್ಯೊಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ ಎಂದರು.

ಗ್ರಾಪಂ ಸದಸ್ಯ ಪರಶಿವಪ್ಪ, ಪಟೇಲ್ ಮಹದೇವಪ್ಪ ಅಬ್ದುಲ್ ಜಬ್ಬರ್, ಶಿವಯ್ಯ, ಗ್ರಾಪಂ ಮಾಜಿ ಅಧ್ಯಕ್ಷೆ ಮಂಜುಳ, ಪಾಪಣ್ಣ, ಅಬು ಸಾಹೇಬ್, ಕಲಿಂ ಹಾಜರಿದ್ದರು.

ಒತ್ತಡದ ಜೀವನದಿಂದ ಮಾನಸಿಕ ರೋಗಿಗಳ ಸಂಖ್ಯೆ ಹೆಚ್ಚಳ

ಮಾನಸಿಕ ಖಾಯಿಲೆಯಿಂದ ಗುಣಮುಖರಾದ 120 ಮಂದಿ ತವರಿಗೆ

ಹೆಚ್.ಡಿ.ಕೋಟೆ: ಆಧುನಿಕ ಸಮಾಜದಲ್ಲಿ ಜನರು ಸದಾ ಒತ್ತಡದಲ್ಲಿ ಬದುಕುತ್ತಿದ್ದು, ಇದರಿಂದಾಗಿ ಮನಸ್ಸಿನ ಮೇಲೆ ದುಷ್ಪರಿಣಾಮವುಂಟಾಗಿ ಮಾನಸಿಕ ಖಾಯಿಲೆಗೆ ತುತ್ತಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಬಿ.ಟಿ.ಮಹೇಶ್ ಅವರು ತಿಳಿಸಿದರು.

ತಾಲೂಕಿನ ಶಾಂತಿಪುರ ಗ್ರಾಮದ ಚಿತ್ತಪ್ರಕಾಶ ಚಾರಿಟಬಲ್ ಟ್ರಸ್ಟ್ ಮತ್ತು ನಿರಾಶ್ರಿತ ಮಾನಸಿಕ ಅಸ್ವಸ್ಥರ ಪುನರ್ವಸತಿ ತಾಣ ಚಿತ್ತಧಾಮದಲ್ಲಿ ಏರ್ಪಡಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಾನಸಿಕ ಖಾಯಿಲೆಗೆ ಒಳಗಾದವರನ್ನು ಕುಟುಂಬದವರು ಮತ್ತು ಸ್ನೇಹಿತರು ಗುರುತಿಸಿ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಮಾನಸಿಕ ಖಾಯಿಲೆಗೆ ಬಳಲುತ್ತಿರುವವರಲ್ಲಿ 2017ರ ಅಧ್ಯಯನದಂತೆ 8 ಜನರಲ್ಲಿ ಒಬ್ಬರು ಮಾನಸಿಕವಾಗಿ ತೊಂದರೆಗೆ ಸಿಲುಕಿರುತ್ತಾರೆ. ಇಂತವರನ್ನು ಸಮಾಜ ಕಡೆಗಣಿಸದೆ ಅವರಿಗೆ ಸಹಾಯಹಸ್ತ ನೀಡಿ ಅವರು ನಮ್ಮಂತೆ ಗೌರವದ ಜೀವನ ನಡೆಸಲು ಅವರಿಗೆ ನೆರವಾಗಬೇಕು ಎಂದರು.



ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಬಿ.ಟಿ.ಮಹೇಶ್ ಅವರು ಉದ್ಘಾಟಿಸಿದರು.

ಡಾ.ಸೋಮಣ್ಣ ಮಾತನಾಡಿ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯ ಎರಡು ಬಗೆಯಲ್ಲಿರುತ್ತದೆ. ಯಾವಾಗ ಮನುಷ್ಯ ಅತೀ ಆಸೆಗೆ ಬಲಿಯಾಗುತ್ತಾನೆ ಆಗ ಆತಂಕದಿಂದ ಖಿನ್ನತೆ ಒಳಗಾಗಿ ಮಾನಸಿಕ ನೆಮ್ಮದಿ ಕಳೆದುಕೊಂಡು ಖಾಯಿಲೆ ತುತ್ತಾಗುತ್ತಾನೆ. ಖಾಯಿಲೆ ಉಲ್ಬಣವಾಗದಂತೆ ತಜ್ಞ ವೈದ್ಯರಿಂದ ಸೂಕ್ತ ಸಮಾಲೋಚನೆ ಮತ್ತು ಚಿಕಿತ್ಸೆ ಕೊಡಿಸಬೇಕು. ಚಿತ್ತಧಾಮದಲ್ಲಿ ಬಹಳಷ್ಟು ಜನರಿಗೆ ಚಿಕಿತ್ಸೆ ನೀಡಿ ಗುಣಪಡಿಸುತ್ತಿರುವ ಇಲ್ಲಿನ ವೈದ್ಯರು ಸಿಬ್ಬಂದಿಗಳ ಕೆಲಸ ಪ್ರಶಂಸನೀಯ ಎಂದರು.

ಮನೋವೈದ್ಯರು ಹಾಗೂ ಚಿತ್ತಪ್ರಕಾಶ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಬಿ.ಆರ್. ರವಿಶಂಕರ್ ರಾವ್ ಮಾತನಾಡಿ ನಮ್ಮ ಚಿತ್ತಧಾಮದಲ್ಲಿ ಒಳವಾಸಿಗಳಾಗಿ ಚಿಕಿತ್ಸೆ ಪಡೆದು ಗುಣಮುಖರಾದ 120 ಜನರನ್ನು ಅವರ ಊರುಗಳಿಗೆ ಕಳುಹಿಸಿ ಕೊಡಲಾಗಿದೆ. ಇಂತಹ ಖಾಯಿಲೆಯಿಂದ ಬಳಲುತ್ತಿರುವವರಿಗೆ ಉಚಿತ ಔಷಧಗಳನ್ನು ನೀಡಲಾಗುತ್ತಿದೆ. ಜೊತೆಗೆ ಎಲ್ಲಾ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಗುಣಮುಖಗೊಂಡು ಜೀವನ ನಡೆಸಲು ಒಳವಾಸಿಗೆ ಹಸು ನೀಡಲಾಯಿತು. ಹಾಗೇ ಸ್ವಸಹಾಯ ಸಂಘದ ಸದಸ್ಯರಿಗೆ ಕೋಳಿಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಸಂತೋಷ್ ಕೊಠಾರಿ, ಡಾ.ಸಂಜೀವ್ ಜೈನ್, ಡಾ.ರಾಮಕೃಷ್ಣ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ವಕೀಲರಾದ ಎಂ.ಎನ್.ರವಿಶಂಕರ್, ಕೃಷ್ಣೇಗೌಡ, ಮಹೇಶ್ ಕುಮಾರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ, ಮುಖಂಡರಾದ ಪಿಚ್ಚಮುತ್ತು ಗೌಂಡರ್, ಸ್ವಸಹಾಯ ಸಂಘದ ಪ್ರತಿನಿಧಿಗಳಾದ ಕಮಲಮ್ಮ ಸುಧಾ, ಸಣ್ಣಮ್ಮ, ಶಿವಮ್ಮ, ಮಹದೇವ ಸ್ವಾಮಿ, ನಾಗರಾಜು, ಮಂಜುಳ, ಪ್ರವೀಣ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೆಂಪಿಸಿದ್ದನಹುಂಡಿ ಕೃಷಿ ಪತ್ತಿನ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ನಂಜನಗೂಡು, ಅ.26– ತಾಲೂಕಿನ ಕೆಂಪಿಸಿದ್ದನ ಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್. ಮಹದೇವ, ಉಪಾಧ್ಯಕ್ಷರಾಗಿ ಶಿವು ಅವಿರೋಧವಾಗಿ ಆಯ್ಕೆಯಾದರು.

12 ಮಂದಿ ಸದಸ್ಯರ ಬಲವನ್ನು ಹೊಂದಿರುವ ಸಂಘದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಎಸ್. ಮಹದೇವ, ಉಪಾಧ್ಯಕ್ಷ ಸ್ಥಾನಕ್ಕೆ ಶಿವು ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿಯಾಗಿದ್ದ ಸಹಕಾರ ಇಲಾಖೆಯ ರಮೇಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಮಹದೇವ ಮಾತನಾಡಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ ಹಾಗೂ ಯತೀಂದ್ರ ಸಿದ್ದರಾಮಯ್ಯರವರ ಸಹಕಾರದಿಂದ ನಾನು ಅವಿರೋಧವಾಗಿ ಆಯ್ಕೆಯಾಗಲು ಸಾಧ್ಯವಾಗಿದೆ ಎಲ್ಲರ ಸಹಕಾರ ಪಡೆದು ಸರ್ಕಾರದಿಂದ ದೊರೆಯುವಂತ ಸೌಲಭ್ಯವನ್ನು ರೈತರಿಗೆ ದೊರಕಿಸಿ ಕೊಡುವ ಜೊತೆಗೆ ಸಂಘದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವುದಾಗಿ ತಿಳಿಸಿದರು.



ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ಇಂಧನ ಬಾಬು, ನಿರ್ದೇಶಕರಾದ ಎಚ್.ಜಿ.ಪರಶಿವಮೂರ್ತಿ, ಕೆ.ಎಂ.ಮಹದೇವಸ್ವಾಮಿ, ಶಿವನಂಜು, ಕೃಷ್ಣ, ಚೆನ್ನನಂಜೇಗೌಡ, ಕೆ.ಎಸ್.ಉಮೇಶ್, ಗಂಗಾಧರ್, ಮಹಿಳಾ ಸದಸ್ಯರಾದ ಸವಿತಾ, ರತ್ನಮ್ಮ, ಸಿದ್ದಮ್ಮ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಕಸುವಿನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ದಿಢೀರ್ ಮುಂದೂಡಿಕೆ

ಮಲ್ಕುಂಡಿ: ಸಮೀಪದ ಕಸುವಿನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯನ್ನು ದಿಢೀರ್ ಮುಂದೂಡಲಾಗಿದೆ.

ನಿಗದಿಯಂತೆ ಭಾನುವಾರ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಪ್ರಕ್ರಿಯೆ ಆರಂಭವಾಗಿತ್ತು. ನಾಮಪತ್ರ ಸಲ್ಲಿಸುವ ಸಮಯದಲ್ಲಿ ನಂಜನಗೂಡಿನ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಈ ಚುನಾವಣೆಯಿಂದ ಗ್ರಾಮದಲ್ಲಿ ಗಲಾಟೆ ಆಗುವ ಬಗ್ಗೆ ಗುಪ್ತಚರ ವಿಭಾಗದಿಂದ ಮಾಹಿತಿ ಬಂದಿದೆ. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಚುನಾವಣೆ ಮುಂದೂಡುವಂತೆ ತಿಳಿಸಲಾಯಿತು.

ಈ ಹಿನ್ನೆಲೆಯಲ್ಲಿ ಚುನಾವಣೆಯನ್ನು ಮುಂದೂಡಲಾಯಿತು. ಮುಂದಿನ ಚುನಾವಣೆ ದಿನಾಂಕ ತಿಳಿಸಲಾಗುವುದು ಎಂದು ಚುನಾವಣಾಧಿಕಾರಿ ವಸಂತಕುಮಾರ್ ತಿಳಿಸಿದ್ದಾರೆ.

ಮೇದಾರ ಅಭಿವೃದ್ಧಿ ನಿಗಮ ನಿರ್ದೇಶಕರಾಗಿ ಸರೋಜಮ್ಮ ಬಸವರಾಜು ನೇಮಕ



ತಿ.ನರಸೀಪುರ, ಆ.26– ಪರಿಶಿಷ್ಟ ಪಂಗಡದ ಮೇದಾರ ಅಭಿವೃದ್ಧಿ ನಿಗಮದ ಯೋಜನೆಗಳ ನಿರ್ದೇಶಕರನ್ನಾಗಿ ಪಟ್ಟಣದ ವಿನಾಯಕ ಕಾಲೋನಿಯ ರೋಜಾ ಪ್ರೇಮ್ ವರ್ಕ್ ಮಾಲಕರಾದ ಸರೋಜಮ್ಮ ಬಸವಾಜು ಅವರನ್ನು ಸರ್ಕಾರ ನೇಮಕ ಮಾಡಲಾಗಿದ್ದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಆದೇಶ ಹೊರಡಿಸಿದ್ದಾರೆ, ತಮ್ಮ ನೇಮಕಕ್ಕೆ ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ಕಾರ್ಯಕ್ರಮವನ್ನು ಸುತ್ತೂರು ಶ್ರೀ, ಅರಣ್ಯ ಸಚಿವರಾದ ಈಶ್ವರ್ ಬಿ.ಖಂಡ್ರೆ ಸೇರಿದಂತೆ ಗಣ್ಯರು ಉದ್ಘಾಟಿಸಿದರು.

ಪ್ರಗತಿಶೀಲ ಸಮಾಜ ನಿರ್ಮಾಣಕ್ಕೆ ಜ್ಞಾನದ ಜೊತೆ ಸಂಸ್ಕಾರ ಮುಖ್ಯ

ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವದಲ್ಲಿ ಸುತ್ತೂರು ಶ್ರೀಗಳ ಕರೆ

ಸರಗೂರು,ಅ.26– ಪ್ರತಿಯೊಬ್ಬರಲ್ಲೂ ಸತ್ಕಾರ್ಯಗಳ ಸಂಕಲ್ಪವಿರಬೇಕು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ತಿಳಿಸಿದರು.

ಮೈಸೂರು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಇಲ್ಲಿನ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಹಾಗೂ ದೀಕ್ಷಾ ಸಂಸ್ಕಾರ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿ, ಪ್ರಗತಿ ಶೀಲ ಸಮಾಜ ನಿರ್ಮಾಣಕ್ಕೆ ಜ್ಞಾನದ ಜೊತೆಗೆ ಸಂಸ್ಕಾರವು ಮುಖ್ಯ, ಮಕ್ಕಳಿಗೆ ಶಿಕ್ಷಣ ದೂರಕಿಸಿ ಕೊಡುವುದರೊಂದಿಗೆ ಸಂಸ್ಕಾರದ ಬಗ್ಗೆಯೂ ಅರಿವು ಮೂಡಿಸಬೇಕು ಎಂದರಲ್ಲದೆ, ಲೌಕಿಕ ಜೀವನ ಜೊತೆಗೆ ಅಧ್ಯಾತ್ಮಿಕತೆಯ ಒಲವು ಬೇಕು ಎಂದರು.

ಪ್ರತಿಭಾ ಪುರಸ್ಕಾರ ಎಂಬುದು ಮಕ್ಕಳಿಗೆ ಚೈತನ್ಯ ರೂಪಿ, ಇನ್ನೂ ಹೆಚ್ಚು ಕಲಿಯಬೇಕೆಂಬುದರ ಸ್ಫೂರ್ತಿ, ಮಕ್ಕಳ ಕಲಿಕೆಗೆ ಪೋಷಕರು ಹೆಚ್ಚು ಕಾಳಜಿಯನ್ನೊಂದಿ ಭವಿಷ್ಯದ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಶಕ್ತಿಯನ್ನು ಬಿಂಬಿಸಿದವರು ಡಾ.ರಾಜೇಂದ್ರ ಶ್ರೀಗಳು, 12ನೇ ಶತಮಾನದ ಶರಣರಂತೆ ಕಾಯಕ ತತ್ವವನ್ನು ಪ್ರತಿಪಾದಿಸುವುದರೊಂದಿಗೆ ಸೇವೆಯ ಮಹತ್ವವನ್ನು ತಿಳಿಸಿದ ಮಹಿಮರು ಎಂದರು.

ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ಹರವೆ ಮಠದ ಸರ್ಪ ಬೂಷಣಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ, ಪಡುವಲು ಮಠದ ಮಹದೇವ ಸ್ವಾಮೀಜಿ, ಹಂಚೀಪುರ ಕಿರಿಯ ಶ್ರೀ ತೋಂಟದಾರ್ಯ ಸ್ವಾಮೀಜಿ, ಸೇರಿದಂತೆ ಸಮಾರಂಭದಲ್ಲಿ ವಿವಿದ ಮಠಾಧೀಶರುಗಳು ಆರ್ಶಿರ್ವಚನ ನೀಡಿದರು.

ಶಾಸಕ ಗಣೇಶ್ ಪ್ರಸಾದ್, ಮಾಜಿ ಸಚಿವ ಎಂ.ಶಿವಣ್ಣ ಹಾಗೂ ಮಾಜಿ ಶಾಸಕ ಚಿಕ್ಕಣ್ಣ ಮಾತನಾಡಿದರು, ಇದಕ್ಕೂ ಮುನ್ನ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಂದಿಕಂಬ, ಮಂಗಳವಾದ್ಯ, ವೀರಗಾಸೆ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ರಾಜೇಂದ್ರ ಶ್ರೀಗಳ ಪುತ್ಥಳಿ ಮೆರೆವಣಿಗೆ ವೈಭವದಿಂದ ನಡೆಸಲಾಯಿತು. ಕಾರ್ಯಕ್ರಮದಲ್ಲಿ ರಾಜೇಂದ್ರ ಸ್ವಾಮಿಗಳವರ ಭಕ್ತ ಬಳಗದ ಗೌರವಾಧ್ಯಕ್ಷ ಡಿ.ಜಿ.ಶಿವರಾಜು, ಅಧ್ಯಕ್ಷ ಡಾ.ಮಹೇಶ್, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು ತಾಲೂಕು ಘಟಕದ ಅಧ್ಯಕ್ಷ ಕಾಟವಾಳು ವೀರಭದ್ರಪ್ಪ, ಕೋಟೆ ಅಧ್ಯಕ್ಷ ರುದ್ರಪ್ಪ, ಬಸವ ಬಳಗದ ತಾಲ್ಲೂಕು ಅಧ್ಯಕ್ಷ ಹಂಚೀಪುರ ಗಣಪತಿ, ಜೆಎಸ್ ಎಸ್ ಶಾಲಾ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ, ಮಹಾಸಭಾ ತಾಲೂಕು ಘಟಕದ ಮಹಿಳಾ ಅಧ್ಯಕ್ಷೆ ಜ್ಯೋತಿ ಯೋಗೀಶ್, ಅಕ್ಕನ ಬಳಗದ ತಾಲೂಕು ಅಧ್ಯಕ್ಷೆ ಸುನಂದರಾಜು, ವೀರಶೈವ ಮಹಾಸಭಾದ ನಿಕಟ ಪೂರ್ವ ಜಿಲ್ಲಾ ಅಧ್ಯಕ್ಷ ಕಾನ್ಯ ಶಿವಮೂರ್ತಿ, ರಾಜ್ಯ ವೀರಶೈವ ಮಹಾಸಭಾದ ನಿಕಟ ಪೂರ್ವ ಕೋಶಾಧ್ಯಕ್ಷ ವರುಣ ಮಹೇಶ್, ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಗುರುಸ್ವಾಮಿ, ಕಾರ್ಯದ್ಯಕ್ಷ ಸಿ.ಕೆ.ಗಿರೀಶ್, ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ಯುವಘಟಕದ ಅಧ್ಯಕ್ಷ ನದೀಶ್, ಶ್ರೀರಾಜೇಂದ್ರ ಸ್ವಾಮಿಗಳ ಭಕ್ತ ಬಳಗದ ಶಿವರಾಜಪ್ಪ, ಮಹದೇವಪ್ಪ ಪಟ್ಟಣ ಪಂಚಾಯಿತಿ ಪ್ರಭಾರ ಅಧ್ಯಕ್ಷ ಶಿವಕುಮಾರ್, ಸದಸ್ಯ ಶ್ರೀನಿವಾಸ್, ಶಿವಪ್ಪಾಜಿ, ಪರಶಿವಮೂರ್ತಿ, ಬಿ.ಎಂ.ಮಾದಪ್ಪ, ಕೃಷ್ಣ ಮೂರ್ತಿ, ಅಶೋಕ್, ಶಾಂತ ಮಲ್ಲು ನೂರಕಾಸ್ವಾಮಿ, ಚಂದ್ರಶೇಖರ್ ಉಪಸ್ಥಿತರಿದ್ದರು,

> ಜ್ಞಾನ ಪ್ರಸಾರದೊಂದಿಗೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿ, ವಿದೇಶಗಳಲ್ಲೂ ಶಿಕ್ಷಣ ಸಂಸ್ಥೆ ಸ್ಥಾಪನೆಯೊಂದಿಗೆ ಜ್ಞಾನ ಪ್ರಸಾರದಲ್ಲಿ ತೊಡಗಿಕೊಂಡಿರುವುದು ಪ್ರಶಂಸನೀಯ ಎಂದರು, ತ್ರಿವಿಧ ದಾಸೋಹದಲ್ಲಿ ಮಠಮಾನ್ಯಗಳ ಪಾತ್ರ ಅಪಾರವಿದೆ, ಶಿಕ್ಷಣದ ಜೊತೆಗೆ ಆರೋಗ್ಯವಲಯಕ್ಕೆ ಹೆಚ್ಚು ಮಹತ್ವ ನೀಡುತ್ತಿರುವುದು ಸಾರ್ವಜನಿಕ ಆರೋಗ್ಯ ಕಾಳಜಿಯನ್ನು ಬಿಂಬಿಸಿದೆ. –ಈಶ್ವರ್ ಬಿ.ಖಂಡ್ರೆ, ಅರಣ್ಯ ಸಚಿವ

ಅಂಚೆ ಇಲಾಖೆಯ ಮ್ಯಾರಾಥಾನ್‌ನಲ್ಲಿ ಸಾವಿರಾರು ಮಂದಿ ಭಾಗಿ

10 ಕಿ.ಮೀ ಓಟ ಪೂರೈಸಿದ ಸಂಸದ ಯದುವೀರ್



ಮೈಸೂರಿನಲ್ಲಿ ಭಾನುವಾರ ಅಂಚೆ ಇಲಾಖೆ ವತಿಯಿಂದ ಆಯೋಜಿಸಿದ್ದ ಮ್ಯಾರಾಥಾನ್‌ನಲ್ಲಿ ಪಾಲ್ಗೊಂಡಿರುವ ಓಟಗಾರರು.

ಮೈಸೂರು,ಅ.26(ಎಂಟಿವೈ)– ಅಂಚೆ ಇಲಾಖೆ ವಿಶ್ವ ಅಂಚೆ ದಿನ ಹಾಗೂ ಫಿಟ್ ನೆಸ್ ಇಂಡಿಯಾ ಅಭಿಯಾನದ ಅಂಗವಾಗಿ ಮೈಸೂರಿನಲ್ಲಿ ಭಾನುವಾರ ಆಯೋಜಿಸಿದ್ದ ಮ್ಯಾರಾಥಾನ್, ಹಾಫ್ ಮ್ಯಾರಾಥಾನ್ ಹಾಗೂ 10 ಕಿ.ಮೀ. ಓಟದ ಸ್ಪರ್ಧೆಯಲ್ಲಿ 3500ಕ್ಕೂ ಹೆಚ್ಚು ಮಂದಿ ಓಟಗಾರರು ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಅಂಚೆ ತರಬೇತಿ ಕೇಂದ್ರದ ಆವರಣದಲ್ಲಿ ಭಾನುವಾರ ಬೆಳಗ್ಗೆ ಮ್ಯಾರಥಾನ್ ಓಟದ ಸ್ಪರ್ಧೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಚಾಲನೆ ನೀಡಿದರು. ಬಳಿಕ ಮ್ಯಾರಾಥಾನ್, ಹಾಫ್ ಮ್ಯಾರಾಥಾನ್ ಹಾಗೂ 10 ಕಿ.ಮೀ. ಓಟದ ಸ್ಪರ್ಧೆಯಲ್ಲಿ ಪ್ರತ್ಯೇಕವಾಗಿ ಓಟಗಾರರು ಪಾಲ್ಗೊಂಡು ಗಮನ ಸೆಳೆದರು.

ಭಾರತೀಯ ಅಂಚೆ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಎನ್‌ಇಬಿ ಸ್ಪೋರ್ಟ್ಸ್ ಅಂಡ್ ಎಂಟರ್‌ಟೈನ್‌ಮೆಂಟ್ ಲಿಮಿಟೆಡ್ ವತಿಯಿಂದ ನಡೆದ ಮ್ಯಾರಾಥಾನ್ ಮತ್ತು ಓಟದ ಸ್ಪರ್ಧೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಹಿರಿಯ ನಾಗರಿಕರವರೆಗೂ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ಕ್ರೀಡಾ ಸ್ಫೂರ್ತಿ ಪ್ರದರ್ಶಿಸಿದರು.

ನಜರ್‌ಬಾದ್, ಲಲಿತ ಮಹಲ್ ರಸ್ತೆ ಇರ್ವಿನ್ ರಸ್ತೆ, ಮಲೆಮಹದೇಶ್ವರ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಓಟಗಾರರು ಮ್ಯಾರಾಥಾನ್ ಮತ್ತು ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ನಂತರ ಅಂಚೆ ತರಬೇತಿ ಕೇಂದ್ರದ ಆವರಣದಲ್ಲಿಯೇ ಮ್ಯಾರಾಥಾನ್ ಮತ್ತು ಓಟದ ಸ್ಪರ್ಧೆ ಅಂತ್ಯಗೊಂಡಿತು. ಈ ವೇಳೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಯದುವೀರ್ ಓಟ: ಮ್ಯಾರಾಥಾನ್ ಹಾಗೂ 10 ಕಿ.ಮೀ. ಓಟದ ಸ್ಪರ್ಧೆಗೆ ಚಾಲನೆ ನೀಡಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮ್ಯಾರಾಥಾನ್‌ನಲ್ಲಿ ಓಡುವ ಮೂಲಕ ಗಮನ ಸೆಳೆದರು. 101 ಸಂಖ್ಯೆಯ ಟಿ–ಷರ್ಟ್ ಧರಿಸಿ 10 ಕಿ.ಮೀ. ಓಟವನ್ನು 1 ಗಂಟೆ 16 ನಿಮಿಷ 45 ಸೆಕೆಂಡ್‌ನಲ್ಲಿ ಸಂಸದ ಯದುವೀರ್ ಅವರು ಪೂರ್ಣಗೊಳಿಸಿ ಗಮನ ಸೆಳೆದರು.

ಈ ಸಂದರ್ಭದಲ್ಲಿ ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್, ದಕ್ಷಿಣ ಕರ್ನಾಟಕ ವಿಭಾಗದ ಪೋಸ್ಟ್ ಮಾಸ್ಟರ್ ಜನರಲ್ ಡಾ. ಚಂದ್ರಶೇಖರ ಕಕುಮನು, ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಪೋಸ್ಟಾಲ್ ಟೆಕ್ನಾಲಜಿ ಸಂಸ್ಥೆಯ ಜನರಲ್ ಮ್ಯಾನೇಜರ್ ಡಾ. ಸರವಣ, ಡೈರೆಕ್ಟರ್ ಪೋಸ್ಟಾಲ್ ಸರ್ಕಲ್ ಸಂದೇಶ್ ಮಹದೇವಪ್ಪ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

- **ಮಹಿಳಾ ಹಾಫ್ ಮ್ಯಾರಾಥಾನ್ ಮುಕ್ತ ವಿಭಾಗ:** ಸುಧಾ ಖಂಡಿ(ಪ್ರ), ಮೀರಾ ಅಶೋಕ್(ದ್ವಿ), ಆರತ್ರಿಕ ಪೌಲ್(ತೃ)
- **ಮಹಿಳಾ ವಿಭಾಗದ ಮ್ಯಾರಾಥಾನ್:** ಬಿಜೋಯ ಬರ್ಮನ್(ಪ್ರ), ಹೆಚ್.ಕೆ.ಅನುರಾಧ(ದ್ವಿ), ಎನ್.ಕೆ.ಹರ್ಷಿತ(ತೃ).
- **ಪುರುಷರ ಹಾಫ್ ಮ್ಯಾರಾಥಾನ್ ಮುಕ್ತ ವಿಭಾಗ:** ಶೈಲೇಶ್ ಕುಶ್ವಾ(ಪ್ರ), ಎಸ್.ಎನ್.ಶ್ರೀಧರ(ದ್ವಿ), ವೈ.ಎಸ್.ದೀಕ್ಷಿತ್(ತೃ).
- **ಪುರುಷರ ವಿಭಾಗದ ಮ್ಯಾರಾಥಾನ್:** ಸಿ.ಎಸ್.ಲಕ್ಷ್ಮೀಶ(ಪ್ರ), ಅಕ್ಷಯ್ ಶ್ರೀಧರ್(ದ್ವಿತೀಯ), ಎಸ್.ಸಾತ್ವಿಕ್(ತೃ).
- **10 ಕಿ.ಮೀ. ಓಟದ ಸ್ಪರ್ಧೆ:** ಗಣಪತಿ(ಪ್ರ), ಎಸ್.ಸುಮಂತ್(ದ್ವಿತೀಯ), ಮನಶ ಬರ್ಮನ್(ತೃ).
- **10 ಕಿ.ಮೀ. ಮಹಿಳಾ ವಿಭಾಗದ ಓಟದ ಸ್ಪರ್ಧೆ:** ಎಂ.ವೀಣಾ(ಪ್ರ), ಆರ್.ರಚನಾ(ದ್ವಿತೀಯ), ಎನ್.ಆರ್.ಶೋಭಾ(ತೃ).

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡ್ಯೂಡ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಗ್ರೀನ್ (ಕ) + ಗಿಲ್‌ಮಾಲ್ (ಕ)	2+2 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬಿಳಿಚುಕ್ಕಿ ಹಳ್ಳಿಹಕ್ಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಬೆ.10.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ. **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

- **ಕಾಂತಾರ ಚಾಪ್ಟರ್ 1(ಕ) :** ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
- **ಕಾಂತಾರ ಚಾಪ್ಟರ್ 1(ಹಿ):** ಬೆ: 9.10ಕ್ಕೆ, ಮ.3.10ಕ್ಕೆ.
- **ಡ್ಯೂಡ್ (ತ):** ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
- **ಟೈಮ್ ಪಾಸ್ (ಕ):** ಬೆ: 11.15ಕ್ಕೆ
- **ತೆಲುಸು ಕಾದಾ (ತೆ):** ಮ: 12.20ಕ್ಕೆ, ರಾತ್ರಿ 7.20ಕ್ಕೆ
- **ಬೈಸನ್ ಕಾಳಮಂದಾನ್ (ತ):** ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
- **ಡೀಸೆಲ್ (ತ):** ಮ: 1.40ಕ್ಕೆ
- **ಮಹಾಯೋಧ ರಾಮ (ಹಿ):** ಮ: 1.50ಕ್ಕೆ
- **ಕೆ–ರ್‍ಯಾಂಪ್ (ತೆ):** ಸಂ: 4.15ಕ್ಕೆ, ರಾ: 10.10ಕ್ಕೆ
- **ಮಿತ್ರ ಮಂಡಳಿ (ತೆ):** ಸಂ: 4.40ಕ್ಕೆ
- **ಗುಡ್ ಫಾರ್ಚ್ಯೂನ್ (ಇ):** ಸಂ: 7.30ಕ್ಕೆ

ಗರುಡ ಮಾಲ್

- **ಕಾಂತಾರ ಚಾಪ್ಟರ್ 1(ಕ) :** ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
- **ಪ್ರೇಮಿಗಳ ಗಮನಕ್ಕೆ (ಕ):** ಬೆ: 11.05ಕ್ಕೆ
- **ಡ್ಯೂಡ್ (ತ):** ಮ: 12.50ಕ್ಕೆ, ರಾ: 7.10ಕ್ಕೆ
- **ಟೈಮ್ ಪಾಸ್ (ಕ):** ಮ: 1.50ಕ್ಕೆ
- **ಬೈಸನ್ ಕಾಳಮಂದಾನ್ (ತ):** ಮ: 3.40ಕ್ಕೆ, ರಾ.10.05ಕ್ಕೆ
- **ತೆಲುಸು ಕಾದಾ (ತೆ):** ಮ: 4.30ಕ್ಕೆ
- **ಕೆ–ರ್‍ಯಾಂಪ್ (ತೆ):** ರಾ: 7.20ಕ್ಕೆ
- **ಮಿತ್ರ ಮಂಡಳಿ (ತೆ):** ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಜಾಗೃತಿ ನಡಿಗೆ


ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಜಾಗೃತಿ ನಡಿಗೆ(ವಾಕ್‌ಥಾನ್) ನಡೆಸಲಾಯಿತು.

ಮೈಸೂರು, ಅ.26(ಎಂಕೆ)– ಮೈಸೂರಿನ ಕುಕ್ಕರಹಳ್ಳಿಕೆರೆ ಆವರಣದಲ್ಲಿ ಮೈಸೂರು ಜಿಮ್ ಅಸೋಸಿಯೇಷನ್, ಫಿಟ್ ಮೈಸೂರು, ಜಿಎಸ್‌ಎಸ್‌ಎಸ್ ಯೋಗ ರಿಸರ್ಚ್ ಫೌಂಡೇಷನ್ ಹಾಗೂ ಆಯುಷ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಾಗೃತಿ ನಡಿಗೆ(ವಾಕ್‌ಥಾನ್)ನಡೆಸಲಾಯಿತು.

ಕುಕ್ಕರಹಳ್ಳಿಕೆರೆಯ ಕುವೆಂಪು ಉದ್ಯಾನವನದ ಗೇಟ್ ಬಳಿ ಜಮಾವಣೆಗೊಂಡ ನೂರಾರು ಮಂದಿ, ಕೆರೆ ಸುತ್ತಲೂ 3 ಕಿಲೊ ಮೀಟರ್ ವಾಕಿಂಗ್ ಮಾಡುವುದರ ಜೊತೆಗೆ ವಾಯು ವಿಹಾರಿಗಳಿಗೆ ಪ್ರತಿನಿತ್ಯ ವಾಕಿಂಗ್ ಮಾಡುವುದರಿಂದಾಗುವ ಅನುಕೂಲತೆಗಳ ಬಗ್ಗೆ ತಿಳಿಸಿಕೊಡಲಾಯಿತು.

ಮೈಸೂರು ಜಿಮ್ ಅಸೋಸಿಯೇಷನ್‌ನ ಹರ್ಷ ಮಾತನಾಡಿ, 2026ರ ಜನವರಿ ತಿಂಗಳಲ್ಲಿ ಮೈಸೂರಿನಲ್ಲಿ ಬೃಹತ್ ವಾಕ್‌ಥಾನ್ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಸುಮಾರು 10 ಸಾವಿರ ಜನರನ್ನು ಒಂದೆಡೆ ಸೇರಿಸಿ, ಆರೋಗ್ಯದ ಅರಿವು ಮೂಡಿಸುವ ಕಾರ್ಯಕಮ ನಡೆಸಲಾಗುತ್ತದೆ. ಈ ನಿಟ್ಟಿನಲ್ಲಿ ವಾರಕೊಮ್ಮೆ ವಾಕ್‌ಥಾನ್ ಕಾರ್ಯಕ್ರಮದ ಮೂಲಕ ಜಾಗೃತಿ ಜೊತೆಗೆ ಸಂಘಟಿಸಲಾಗುತ್ತಿದೆ ಎಂದು ತಿಳಿಸಿದರು.

ಶ್ರೀ ಪತಂಜಲಿ ಮಹರ್ಷಿಗಳ ಸಂಸ್ಮರಣೋತ್ಸವ


ಮೈಸೂರಿನ ವಿಜಯನಗರ ಯೋಗ ಸಭಾಂಗಣದಲ್ಲಿ ಶ್ರೀ ಪತಂಜಲಿ ಮಹರ್ಷಿಗಳ ಸಂಸ್ಮರಣೋತ್ಸವ ಕಾರ್ಯಕ್ರಮ ನಡೆಯಿತು.

ಮೈಸೂರು, ಅ.26(ಎಂಕೆ)– ಮಹರ್ಷಿ ಪತಂಜಲಿ ಅವರು ಮನುಷ್ಯನ ಮಾನಸಿಕ ಒತ್ತಡಗಳನ್ನು ದೂರ ಮಾಡುವುದಕ್ಕಾಗಿಯೇ ಯೋಗಸೂತ್ರಗಳನ್ನು ಜಗತ್ತಿಗೆ ನೀಡಿದ್ದಾರೆ ಎಂದು ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಹೇಳಿದರು.

ಮೈಸೂರಿನ ವಿಜಯನಗರ ಯೋಗ ಸಭಾಂಗಣದಲ್ಲಿ ಹಿಮಾಲಯ ಪ್ರತಿಷ್ಠಾನ ಹಾಗೂ ಪ್ರಣವ ಯೋಗಧಾಮದ ವತಿಯಿಂದ ಆಯೋಜಿಸಿದ್ದ ಶ್ರೀ ಪತಂಜಲಿ ಮಹರ್ಷಿಗಳ ಸಂಸ್ಮರಣೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯೋಗಶಾಸ್ತ್ರಕ್ಕೆ ಪತಂಜಲಿ ಮಹರ್ಷಿ ನೀಡಿದ ಕೊಡುಗೆ ಸದಾ ಅಜರಾಮರ ಎಂದರು.

ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್ ಮಾತನಾಡಿ, ಯೋಗ ಎಂದರೆ ಆಸನಗಳು ಮತ್ತು ಪ್ರಾಣಯಾಮಕ್ಕೆ ಮಾತ್ರ ಸೀಮಿತವಾಗಿರುವ ಇಂದಿನ ಕಾಲಮಾನದಲ್ಲಿ ಯೋಗ ಸೂತ್ರಗಳ ಪಾರಾಯಣ ಕಾರ್ಯಕ್ರಮ ಏರ್ಪಡಿಸಿರುವುದು ಶ್ಲಾಘನೀಯ. ಯೋಗ ಶಿಕ್ಷಕರು ಯೋಗಶಾಸ್ತ್ರದಲ್ಲಿ ಹೆಚ್ಚಿನ ಅರಿವನ್ನು ಮೂಡಿಸಲು ಹೆಚ್ಚು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಪ್ರಣವ ಯೋಗಧಾಮದ ಸಂಸ್ಥಾಪಕ ಜಯಕುಮಾರ್ ಅವರು ಯೋಗ ಶಿಕ್ಷಕರಿಗೆ ಯೋಗ ಸೂತ್ರಗಳ ಪಾರಾಯಣ ಹಾಗೂ ಉಪನ್ಯಾಸ ನೀಡಿದರು. ಹಿರಿಯ ಯೋಗಾಚಾರ್ಯ ಎಸ್.ವಿ. ವೆಂಕಟೇಶಯ್ಯ, ಶ್ರೀ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನದ ಸಿಇಒ ಕೆ.ಆರ್.ಯೋಗ ನರಸಿಂಹನ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಕಾರ್ಯದರ್ಶಿ ಹರ್ಷವರ್ಧನ, ಉಪಾಧ್ಯಕ್ಷ ಕೃಷ್ಣ ಮೂರ್ತಿ, ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಮೈಸೂರು ಯೋಗ ಒಕ್ಕೂಟದ ಕಾರ್ಯದರ್ಶಿ ಯೋಗ ಕುಮಾರ್ ಮತ್ತಿತರರಿದ್ದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ನೋ ಪಾರ್ಕಿಂಗ್‌ನಲ್ಲಿ ಕಾರುಗಳ ಅಡ್ಡಾದಿಡ್ಡಿ ನಿಲುಗಡೆ

ಮಾರುಕಟ್ಟೆಗೆ ಹೋಗಿ ವಾಪಸ್ ಬರುವ ತನಕ ನಿಲ್ಲುವ ಕಾರುಗಳು



ಮೈಸೂರು, ಅ.26– (ಬಿಎಲ್‌ಯು) ಮೈಸೂರಿನ ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಮುಂದೆ ನೋ ಪಾರ್ಕಿಂಗ್‌ನಲ್ಲಿ ರಸ್ತೆಯುದ್ದಕ್ಕೂ ಹತ್ತಾರು ಕಾರುಗಳು ನಿಲ್ಲಿಸಿದ್ದು, ದಿನನಿತ್ಯ ಟ್ರಾಫಿಕ್ ಜಾಮ್ ಆಗುತ್ತಿದೆ. ವಾಹನ ನಿಲುಗಡೆಗೆ ಇಲ್ಲಿ ಅವಕಾಶವಿಲ್ಲ ಎಂದು ಸಂಚಾರ ಪೊಲೀಸರು ತಿಳಿ ಹೇಳಿದರೂ, ಬಹಳಷ್ಟು ಮಂದಿಗೆ ಡೋಂಟ್ ಕೇರ್. ಈ ಸಮಸ್ಯೆ ನಿವಾರಿಸಲು ಕ್ರಮ ಕೈಗೊಂಡು ಸುಗುಮ ಸಂಚಾರಕ್ಕೆ ಅನುವು ಮಾಡಿಕೊಡಲು ಪೊಲೀಸರಿಗೆ ಅದ್ಯಾವ ಪ್ರಭಾವ ಅಡ್ಡ ಬರುತ್ತಿದೆಯೋ ಗೊತ್ತಿಲ್ಲ.

ನಗರದ ಕೆ.ಆರ್.ವೃತ್ತದಿಂದ ಬನ್ನಿಮಂಟಪ ತನಕ ಇರುವ ರಾಜಬೀದಿ ಅಷ್ಟೇನು ವಿಶಾಲವಾಗಿಲ್ಲ. ರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಈ ರಸ್ತೆ ಈಗಿನ ವಾಹನಗಳ ಸಂಚಾರಕ್ಕೆ ಕಿರಿದಾಗಿದೆ. ರಸ್ತೆ ಮಧ್ಯೆ ಡಿವೈಡರ್ ಹಾಕಿರುವ ಹಿನ್ನೆಲೆ ಜೊತೆ ಜೊತೆಯಾಗಿ ಹೆಚ್ಚು ವಾಹನಗಳು ಸಾಗಲು ಸಾಧ್ಯವೇ ಇಲ್ಲ. ಸಯ್ಯಾಜಿರಾವ್ ರಸ್ತೆಯ ಅಕ್ಕ ಪಕ್ಕದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಕಾರು ಸೇರಿದಂತೆ ಭಾರೀ ವಾಹನಗಳ ನಿಲುಗಡೆಗೆ ಇಲ್ಲಿ ಅವಕಾಶವೇ ಇಲ್ಲ.

ಆದರೆ ಬಹಳಷ್ಟು ಚಾಲಕರು ಕಾರು ನಿಲ್ಲಿಸಿ ದೇವರಾಜ ಮಾರುಕಟ್ಟೆ ಒಳಗೆ ಹೋಗುತ್ತಾರೆ. ಚಿಕ್ಕ ಗಡಿಯಾರದಿಂದ ಧನ್ವಂತರಿ ರಸ್ತೆ ತಿರುವಿನ ತನಕ ಉದ್ದಕ್ಕೂ ಕಾರುಗಳು ನಿಂತಿರುತ್ತವೆ. ಇದರಿಂದ ಪ್ರತಿದಿನ ಬೆಳಗ್ಗೆಯಿಂದ ರಾತ್ರಿ ತನಕ ಟ್ರಾಫಿಕ್ ಜಾಮ್ ಸರ್ವೇ ಸಮಾನ್ಯವಾಗಿದೆ.

ನೋ ಪಾರ್ಕಿಂಗ್‌ನಲ್ಲಿ ಕಾರು ನಿಲ್ಲಿಸಿರುವ ಕಾರಣ ಕಿರಿದಾದ ರಸ್ತೆಯಲ್ಲಿ ಆಟೋ ಸೇರಿದಂತೆ ಇತರೆ ವಾಹನಗಳು ಸಾಗಲು ಸಾಧ್ಯವಾಗುತ್ತಿಲ್ಲ. ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ನಿಷಿದ್ಧ ಎಂದು ಸಂಚಾರಿ ಪೊಲೀಸರು ಮನದಟ್ಟುಮಾಡುತ್ತಾರೆ. ಆದರೆ ಅವರ ಸೂಚನೆಗೆ ಕವಡೆ ಕಾಸಿನ ಕಿಮ್ಮತ್ತು ಸಿಗುತ್ತಿಲ್ಲ

ವೀಲ್ ಲಾಕ್, ದಂಡಾಸ್ತ್ರವೊಂದೆ ಇದಕ್ಕೆ ಪರಿಹಾರ

ಈ ಮೊದಲು ಹೀಗೆ ನೋ ಪಾರ್ಕಿಂಗ್‌ನಲ್ಲಿ ಯಾವುದೇ ವಾಹನ ನಿಲ್ಲಿಸಿದರೆ ವೀಲ್ ಲಾಕ್ ಮಾಡಿ ನಂತರ ದಂಡ ವಸೂಲಿ ಮಾಡುತ್ತಿದ್ದರು. ಕೆಲವು ಸಂಚಾರ ಪೊಲೀಸರು ದಂಡ ಪಾವತಿಸುವಂತೆ ಸ್ಥಳದಲ್ಲೆ ನೋಟಿಸ್ ಜಾರಿ ಮಾಡುತ್ತಿದ್ದರು.

ಆದರೆ ಈಗ ವೀಲ್ ಲಾಕ್ ಮಾಡುತ್ತಿಲ್ಲ, ಜೊತೆಗೆ ದಂಡ ಪಾವತಿಸುವಂತೆ ನೋಟಿಸ್ ಕೂಡ ನೀಡುತ್ತಿಲ್ಲ. ಹೀಗೆ ಸಂಚಾರ ನಿಯಮ ಉಲ್ಲಂಘನೆ ಮಾಡುವವರಿಗೆ ಕಾನೂನು ಪಾಲನೆಯೆಂದರೆ ಕಾಲು ಕಸವಾಗಿದೆ. ವ್ಯವಸ್ಥಿತ ಹಾಗೂ ಶಿಸ್ತಿನ ಕಾನೂನು ಜಾರಿ ಮಾಡಲು ಪೊಲೀಸರು ಅವಶ್ಯಕವಾಗಿ ಕಠಿಣ ನಿರ್ಧಾರ ಕೈಗೊಳ್ಳಬೇಕಾಗಿದೆ. ಇಲ್ಲದಿದ್ದರೆ ಸಂಚಾರ ಅವ್ಯವಸ್ಥೆ ತಾಂಡವಾಡುತ್ತದೆ.

ಟೌನ್ ಹಾಲ್‌ನ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಲಾಟ್ ನಿರುಪಯುಕ್ತ



ಅರಮನೆ, ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸ್ ರಸ್ತೆ, ಅಶೋಕ ರಸ್ತೆ, ಗಾಂಧಿ ಚೌಕ ವೃತ್ತ ಸೇರಿದಂತೆ ನಗರದ ಹೃದಯ ಭಾಗದಲ್ಲಿ ಬೈಕ್, ಸ್ಕೂಟರ್, ಕಾರುಗಳ ನಿಲುಗಡೆಗೆ ಟೌನ್ ಹಾಲ್‌ನಲ್ಲಿ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಲಾಟ್ ನಿರ್ಮಾಣ ಮಾಡಲಾಗಿದೆ.

ಇಲ್ಲಿ ಸುಮಾರು 400 ಕ್ಕೂ ಹೆಚ್ಚು ವಾಹನಗಳನ್ನು ನಿಲ್ಲಿಸಬಹುದಾಗಿದೆ. ಪೇ ಅಂಡ್ ಪಾರ್ಕ್ ವ್ಯವಸ್ಥೆಯಲ್ಲಿ ತಮ್ಮ ವಾಹನ ನಿಲ್ಲಿಸಿ ಎಲ್ಲಿಗಾದರೂ, ಎಷ್ಟು ಹೊತ್ತಾದರೂ ಹೋಗಬಹುದು. ಇದರಿಂದ ತಮ್ಮ ವಾಹನ ಕಳುವಾಗುತ್ತದೆ ಎಂಬ ಆತಂಕವೂ ಇರುವುದಿಲ್ಲ. ಜೊತೆಗೆ ಸಂಚಾರ ದಟ್ಟನೆಯಿಂದ ಮುಕ್ತ ಮಾಡಬಹುದು.

ಆದರೆ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಲಾಟ್ ಉದ್ಘಾಟನೆಯಾದ ದಿನದಿಂದ ಇಲ್ಲಿಯವರೆಗೆ ಪ್ರತಿದಿನ ಬೆರಳಣಿಕೆಯಷ್ಟು ವಾಹನಗಳು ಮಾತ್ರ ನಿಲ್ಲುತ್ತವೆ. ಇದರಿಂದ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ನಿರ್ಮಾಣ ಮಾಡಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಲಾಟ್ ನಿರುಪಯುಕ್ತವಾಗಿದೆ. ಟೌನ್ ಹಾಲ್ ಮುಂಭಾಗದ ಹರ್ಷ ರಸ್ತೆಯಲ್ಲೂ ಅಡ್ಡಾದಿಡ್ಡಿಯಾಗಿ ಕಾರುಗಳನ್ನು ನಿಲ್ಲಿಸುತ್ತಾರೆ. ಆದರೆ ಅಣತಿ ದೂರದಲ್ಲಿರುವ ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ಮಾಡುವುದಿಲ್ಲ.

ಸಂಚಾರಿ ಪೊಲೀಸರು ಸುಗಮ ಸಂಚಾರ ವ್ಯವಸ್ಥೆ ಜಾರಿ ಮಾಡಲು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸುಗಮ ಸಂಚಾರ ವ್ಯವಸ್ಥೆ ಕಾಣಲು ಸಾಧ್ಯವಿಲ್ಲ.

ಕನ್ನಡ ಕರೋಕೆ ಹವ್ಯಾಸಿ ಗಾಯಕರಿಗೆ ಅವಕಾಶ

ಮೈಸೂರು: ಜನಚೈತನ್ಯ ಫೌಂಡೇಷನ್ ವತಿಯಿಂದ ಕನ್ನಡ ರಾಜ್ಯೋತ್ಸವ–2025 ಪ್ರಯುಕ್ತ ಕನ್ನಡ ಚಿತ್ರಗೀತೆ, ನಾಡಗೀತೆಗಳ ಕರೋಕೆ ಗಾಯನ ಸಂಗೀತ ಕಾರ್ಯಕ್ರಮವನ್ನು ನವೆಂಬರ್ ತಿಂಗಳಲ್ಲಿ ಆಯೋಜಿಸಲಾಗಿದೆ. 15 ವರ್ಷ ಮೇಲ್ಪಟ್ಟ ವಯಸ್ಸಿನವರು ಭಾಗವಹಿಸಬಹುದು. ಆಸಕ್ತ ಗಾಯಕರು ನೋಂದಣಿ ಮಾಡಿಸತಕ್ಕದ್ದು. ಮಾಹಿತಿಗೆ ಮೊ.: 9243 506024, 9972865037 ಸಂಪರ್ಕಿಸಿ.

ಎಟಿಎಂಇ ಕಾಲೇಜಿನಲ್ಲಿ ಐಇಇಇ ಪ್ರಾಜೆಕ್ಟ್ ಸಿಂಪೋಸಿಯಂ ಕಾರ್ಯಾಗಾರ



ಮೈಸೂರಿನ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಐಇಇಇ ಮಿನಿ ಪ್ರಾಜೆಕ್ಟ್ ಸಿಂಪೋಸಿಯಂ ಕಾರ್ಯಾಗಾರ ಆಯೋಜಿಸಲಾಗಿತ್ತು.

ಮೈಸೂರು, ಅ26(ಬಿಎಲ್‌ಯು)– ಮೈಸೂರಿನ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಐಇಇಇ ಮಿನಿ ಪ್ರಾಜೆಕ್ಟ್ ಸಿಂಪೋಸಿಯಂ ಕಾರ್ಯಾಗಾರ ಆಯೋಜಿಸಲಾಗಿತ್ತು.

ಸಿಂಪೋಸಿಯಂ ವಿದ್ಯಾರ್ಥಿಗಳಿಗೆ ತಮ್ಮ ನವೀನ ಪ್ರಾಜೆಕ್ಟ್ ಹಾಗೂ ಆವಿಷ್ಕಾರಾತ್ಮಕ ಚಿಂತನೆಗಳನ್ನು ಪ್ರದರ್ಶಿಸಲು ವೇದಿಕೆಯಾಗಿದ್ದ ಈ ಕಾರ್ಯಾಗಾರದಲ್ಲಿ 90 ತಂಡ ನೋಂದಾಯಿಸಿಕೊಂಡಿದ್ದವು. ಅಂತಿಮ ಪದರ್ಶನಕ್ಕೆ 58 ತಂಡಗಳು ಪ್ರದರ್ಶನಕ್ಕೆ ಆಯ್ಕೆಯಾಗಿದ್ದವು.

ಮೈಸೂರು, ಬೆಂಗಳೂರು, ತುಮಕೂರು, ಹಾಸನ, ರಾಮನಗರ, ಶಿವಮೊಗ್ಗ, ಬೆಳಗಾವಿ ಹಾಗೂ ಕೇರಳದಿಂದ ಬಂದಿದ್ದ ವಿವಿಧ ಕಾಲೇಜಿನ ವಿದ್ಯಾರ್ಥಿಗಳು 23 ಹಾರ್ಡ್‌ವೇರ್ ಮತ್ತು 35 ಸಾಫ್ಟ್‌ವೇರ್ ಪ್ರಾಜೆಕ್ಟ್‌ಗಳನ್ನು ಮಂಡಿಸಿದ್ದವು.

ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳು ಕೃತಕ ಬುದ್ಧಿಮತ್ತೆ, ಸ್ವಾಸ್ಥ್ಯತೆಯ ಅಭಿವೃದ್ಧಿ, ಎಂಬೆಡೆಡ್ ಸಿಸ್ಟಂ ಹಾಗೂ ಸಾಫ್ಟ್ ವೇರ್ ಅಭಿವೃದ್ಧಿ ವಿಚಾರಗಳು ಒಳಗೊಂಡಿದ್ದವು. ಅಂತಿಮವಾಗಿ ತಲಾ ಮೂರು ಸಾಫ್ಟ್‌ವೇರ್ ಹಾಗೂ ಹಾರ್ಡ್‌ವೇರ್ ತಂಡಗಳು ವಿಜೇತವಾಗಿದ್ದವು.

ಎಂಐಐಸಿಟಿ ಅಧ್ಯಕ್ಷ ರೋಸಾನಾ ಕಾಪುಟೋ, ಬರ್ನಡಾ ಮಾಲ್ಲಿಯಾ, ಅಲೋಕ್‌ಕುಮಾರ್ ದಾಸ್, ಶುಭ್ರ ಪ್ರಕಾಶ್ ಗಿರಿ, ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ.ಎಲ್. ಬಸವರಾಜ, ಡೀನ್ ಡಾ.ಭಾಗ್ಯಶ್ರೀ, ಸಂಯೋಜಕರಾದ ಡಾ.ಪಿ.ವಿನೋದ್ ಕುಮಾರ್ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಪುಣ್ಯಸ್ಮರಣೆ


ಮೈಸೂರಿನ ಬನ್ನಿಮಂಟಪದಲ್ಲಿ ಟಿ.ಎನ್.ನರಸಿಂಹಮೂರ್ತಿ ಅವರ 24ನೇ ವರ್ಷದ ಪುಣ್ಯಸ್ಮರಣೆ ನೆರವೇರಿಸಲಾಯಿತು. ಈ ವೇಳೆ ಡಾ.ಆಶಾ ಮಂಜುನಾಥ್, ಟಿಎನ್‌ಎನ್ ಮೊಮ್ಮಗ ಪ್ರಫುಲ್ ಕುಮಾರ್, ಪುತ್ರಿ ಎನ್.ಮಂಜುಳಾ, ಅಳಿಯ ಡಾ. ಶಿವರುದ್ರಸ್ವಾಮಿ ಪಾಟೀಲ್, ಎಂ ಪ್ರಶಾಂತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮುಂದಿನ ವಾರ ದಟ್ಟಗಳ್ಳಿ, ರೂಪಾನಗರ ಸುತ್ತಮುತ್ತಲಿನ ಬಡಾವಣೆಗಳಿಗೆ ಕಬಿನಿ ಕುಡಿಯುವ ನೀರು ಪೂರೈಕೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಚಾಲನೆ; ಶಾಸಕ ಜಿ.ಟಿ.ದೇವೇಗೌಡ ಘೋಷಣೆ



ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ದಶಮಾನೋತ್ಸವ ಸಮಾರೋಪ ಸಮಾರಂಭವನ್ನು ಸಂಸದ ಯದುವೀರ್ ಹಾಗೂ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಯಶಸ್ವಿಗೆ ನಾವು–ನೀವು ಎಲ್ಲರೂ ಕೈಜೋಡಿಸೋಣ

ಮೈಸೂರು, ಅ.26(ಎಸ್‌ಪಿಎನ್)– ನೂರು ವರ್ಷಗಳ ಹಿಂದೆಯೇ ಮೈಸೂರಿನ ಅಭಿವೃದ್ಧಿಗೆ ವಿಕಸಿತ ಮೈಸೂರು ಯೋಜನೆಯನ್ನು ನಮ್ಮ ಪೂರ್ವಜರು ಜಾರಿಗೊಳಿಸಿದ್ದರು. ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರ ವಿಕಸಿತ ಭಾರತ ಜಾರಿಗೊಳಿಸಿದ್ದು, ಇದರ ಯಶಸ್ವಿಗೆ ನಾವು–ನೀವು ಎಲ್ಲರೂ ಕೈಜೋಡಿಸೋಣ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದರು.

ಮೈಸೂರು–ಕೊಡಗು ಹೆದ್ದಾರಿ ಕಾಮಗಾರಿ ನಡೆಯುತ್ತಿದೆ. ಕೊಡಗಿನ ಅಭಿವೃದ್ಧಿ ಹೆಚ್ಚಿನ ಆದ್ಯತೆ ನೀಡಲಾಗಿದೆ . ಏಕೆಂದರೆ, ಕೊಡಗಿನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಹಾಗಾಗಿ ಅಲ್ಲಿನ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿದ್ದು, ಜೊತೆಗೆ ಮೈಸೂರಿನ ಅಭಿವೃದ್ಧಿಗೂ ಆದ್ಯತೆ ನೀಡಲಾಗುತ್ತಿದೆ ಎಂದರು.

10 ವರ್ಷದ ಹಿಂದೆ ದಟ್ಟಗಳ್ಳಿ ಪರಿಸರ ರಕ್ಷಣೆಗಾಗಿ ಗ್ರೀನ್ ಫೌಂಡೇಷನ್ ಸ್ಥಾಪಿಸಿ, ಇದರ ಮೂಲಕ ಸಾವಿರಾರು ಗಿಡ ನೆಟ್ಟು ಇತರರಿಗೆ ಈ ಸಂಸ್ಥೆ ಮಾದರಿಯಾಗಿದೆ. ಒಂದು ದೇಶದ ಪ್ರಗತಿಗೆ ಸೈನ್ಯ, ಆರ್ಥಿಕತೆ ಹಾಗೂ ಪರಿಸರ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು. ಅದರಲ್ಲೂ ಸ್ವದೇಶಿ ತಂತ್ರಜ್ಞಾನ ಬೆಳವಣಿಗೆಗೆ ಯುವಕರು ಹೆಚ್ಚಿನ ಗಮನ ನೀಡಬೇಕು ಎಂದು ಸಲಹೆ ನೀಡಿದರು.

ಮೈಸೂರು, ಅ.26(ಎಸ್‌ಪಿಎನ್)– ಮುಂದಿನ ವಾರ ದಟ್ಟಗಳ್ಳಿ, ರೂಪನಗರ ಸುತ್ತಮುತ್ತಲಿನ ಬಡಾವಣೆಗಳಿಗೆ ಕಬಿನಿ ಕುಡಿಯುವ ನೀರು ಪೂರೈಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಘೋಷಣೆ ಮಾಡಿದರು.

ಮೈಸೂರು ದಟ್ಟಗಳ್ಳಿಯ ಡಿಜಿಎಫ್ ವೃತ್ತದಲ್ಲಿ ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ದಶಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೈಸೂರು ಸಾಂಸ್ಕೃತಿಕ ರಾಜಧಾನಿ. ಅಂತೆಯೇ ಪರಿಸರಕ್ಕೂ ಆದ್ಯತೆ ನೀಡಲಾಗಿದೆ. ಕಳೆದ ಹತ್ತು ವರ್ಷಗಳ ಹಿಂದೆ ದಟ್ಟಗಳ್ಳಿ ಪರಿಸರ ರಕ್ಷಣೆ ಮಾಡುವ ದೃಷ್ಟಿಯಿಂದ ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ಸ್ಥಾಪಿಸಿದ್ದಾರೆ. ಇಲ್ಲಿಯವರೆಗೂ ಬಡಾವಣೆಯಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ಕೆಲಸ ಮಾಡುತ್ತಿರುವುದು ಸಂತೋಷದ ಕೆಲಸ ಎಂದರು.

ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಮಂದಗತಿ: ದಟ್ಟಗಳ್ಳಿ ಸುತ್ತಮುತ್ತಲಿನ ಪ್ರದೇಶದಲ್ಲಿ ಯುಜಿಡಿ, ರಾಜಕಾಲುವೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಇತರೆ ಸಮಸ್ಯೆಗಳ ಕುರಿತು ನನ್ನ ಗಮನದಲ್ಲಿದೆ. ಆದರೆ, ಪಂಚ ಗ್ಯಾರಂಟಿಗಳ ಯೋಜನೆ ಜಾರಿಯಿಂದ ಅಭಿವೃದ್ಧಿ ಯೋಜನೆ ಅನುದಾನ ಸಿಗುತ್ತಿಲ್ಲ. ಸಣ್ಣಪುಟ್ಟ ಅನುದಾನ ಬಿಡುಗಡೆಗೂ ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ನಡುವೆಯೂ ರಾಜ್ಯ ಸರ್ಕಾರ ಶಾಸಕರ ಅನುಧಾನ ನಿಧಿಗೆ ಅನುಧಾನ ಬಿಡುಗಡೆ ಮಾಡಲು ಒಪ್ಪಿದೆ ಎಂದರು.

32 ರಸ್ತೆ ಅಭಿವೃದ್ಧಿ: ದಟ್ಟಗಳ್ಳಿ 32 ರಸ್ತೆಗಳ ಅಭಿವೃದ್ಧಿಪಡಿಸಲಾಗಿದೆ. ಇನ್ನೆರಡು ರಸ್ತೆಗಳ ಅಭಿವೃದ್ಧಿಗೆ 2 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ. ಈ ಭಾಗದ ಕೆರೆಗಳ ಅಭಿವೃದ್ಧಿಗೂ ಅನುದಾನ ಬಿಡುಗಡೆಗೊಳಿಸಲಾಗಿದೆ. ಹಾಗಾಗಿ ನಿಮ್ಮ ಸಮಸ್ಯೆಗಳು ನನ್ನ ಗಮನದಲ್ಲಿದ್ದು, ಅನುದಾನ ಲಭ್ಯತೆ ಮೇರೆಗೆ ಅಭಿವೃದ್ಧಿಪಡಿಸಲಾಗುವುದು ಎಂದು ಇಲ್ಲಿನ ನಿವಾಸಿಗಳಿಗೆ ಶಾಸಕರು ಅಭಯ ನೀಡಿದರು. ದಟ್ಟಗಳ್ಳಿ ಬಡಾವಣೆಯಲ್ಲಿ 36 ಉದ್ಯಾನವನಗಳಿವೆ. ಇದರಲ್ಲಿ ಸೈನಿಕ ಉದ್ಯಾನವನ ಅಭಿವೃದ್ದಿಗೆ 1.25 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದರು.

ಪೌರಕಾರ್ಮಿಕರಿಗೆ ಸನ್ಮಾನ: ಶಿವು, ಮುತ್ತು, ಆರ್ಮುಗಂ, ಗಿರೀಶ್, ಮಾದೇವ,ನರಸಿಂಹ, ಗಣೇಶ, ರಾಜೇಂದ್ರ, ಶಂಕರ, ಗುರುಸಿದ್ದಪ್ಪ, ರಾಜು, ಪಿ.ಮಂಜು, ಆನಂದಪ್ಪ, ರಾಧ, ನಾಗಮಣಿ, ರಾಜಮ್ಮ, ಕುಮಾರಿ, ಸುಜಾತ, ಅಚಮ್ಮ, ಮಂಜುಳ, ಶ್ರೀನಿವಾಸ, ವೆಂಕಟೇಶ್, ಉಲ್ಲಾಸ, ಪ್ರವೀಣ್ ಕುಮಾರ್, ಕೆಂಪರಾಜ್, ಚೇತನ್, ಚಂದನ್‌ಗೌಡ, ಬನ್ನಾರಿ ಸೇರಿದಂತೆ ಇತರೆ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಬಹುಮಾನ ವಿತರಣೆ: ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ 10 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆಯಲ್ಲಿ ಪವನ್‌ಗೌಡ(ಪ್ರ), ಜಿ.ಆರ್.ಅನ್ವಿತಾ(ದ್ವಿ), ಚಿನ್ಮಯಿ(ತೃ)ಗೆ ಬಹುಮಾನ ನೀಡಲಾಗಿದೆ. 10 ವರ್ಷದೊಳಗಿನ ವಿದ್ಯಾರ್ಥಿಗಳಾದ ರಿಶಿತ್(ಪ್ರ), ಭಾನೋಗ ಶರ್ಮಾ(ದ್ವಿ), ಕೆ.ಆರ್.ಇಂಪನ(ತೃ) ಬಹುಮಾನ ಪಡೆದಿದಾರೆ. ಆರ್.ಅಶ್ವಿನಿ, ಎಸ್.ಶ್ವೇತಾ, ಲಕ್ಷ್ಮಿ, ಭೂಮಿಕಾ, ಸಾಯಿ ಅನ್ವಿತಾ, ಸುಮನ್ವಿ ಅವರಿಗೆ ಬಹುಮಾನ ವಿತರಿಸಲಾಯಿತು. ಹಾಗೂ ವಿವಿಧ ಕ್ಷೇತ್ರದ ಸಾಧಕರಾದ ನಾಗೇಂದ್ರ ಕುಮಾರ್, ಅರ್ಚನಾ ಹಾಗೂ ನಿವೃತ್ತ ಯೋಧ ಸಿ.ಕೆ.ರವಿ ಅವರನ್ನು ಸನ್ಮಾನಿಸಲಾಯಿತು.


ವೇದಿಕೆಯಲ್ಲಿ ದಟ್ಟಗಳ್ಳಿ ಗ್ರೀನ್ ಫೌಂಡೇಷನ್ ಅಧ್ಯಕ್ಷ ಎಂ.ಎನ್.ನಟರಾಜ್, ಕಾರ್ಯಾಧ್ಯಕ್ಷ ಆರ್.ನಾಗೇಂದ್ರ ಕುಮಾರ್, ಉಪಾಧ್ಯಕ್ಷ ಆರ್.ಕೆ.ರಾಜು, ಮುಖಂಡರಾದ ತೇಜಸ್ವಿನಾಯಕ್, ಎಚ್.ಟಿ.ನಟೇಶ್, ಪುರುಷೋತ್ತಮ್, ಎಂ.ರಮೇಶ್, ಡಾ.ಟಿ.ಎನ್.ಬಾಲಕೃಷ್ಣೇಗೌಡ, ಡಾ.ಹರೀಶ್.ಎಂ.ನಾಯಕ್, ಎಂ.ಆರ್.ಹರ್ಷ, ಎನ್.ಎಂ.ಶಿವಪ್ರಕಾಶ್, ಡೆವಿಡ್ ರಾಜ್ ಸೇರಿದಂತೆ ಇತರರಿದ್ದರು.

ಸರ್ಕಾರವನ್ನು ಟೀಕಿಸಿದ್ದ ಉದ್ಯಮಿಗಳೊಂದಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಮಹತ್ವದ ಸಭೆ

ಬೆಂಗಳೂರು ಸಮಸ್ಯೆಗಳ ಪರಿಹಾರದ ಬಗ್ಗೆ ಸುದೀರ್ಘ ಚರ್ಚೆ

ಬೆಂಗಳೂರು, ಅ.26– ಬೆಂಗಳೂರಿನ ಮೂಲಭೂತ ಸೌಕರ್ಯಗಳ ಕೊರತೆ, ರಸ್ತೆ ಗುಂಡಿಗಳು ಮತ್ತು ಕಸ ವಿಲೇವಾರಿ ಸಮಸ್ಯೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರದ ವಿರುದ್ಧ ಸರಣಿ ಪೋಸ್ಟ್‌ಗಳನ್ನು ಮಾಡಿ ಗಮನ ಸೆಳೆದಿದ್ದ ಬೆಂಗಳೂರು ನಗರದ ಪ್ರಮುಖ ಉದ್ಯಮಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಹತ್ವದ ಸಭೆ ನಡೆಸಿದರು.

ನಗರದ ಸಮಸ್ಯೆಗಳನ್ನು ಆಲಿಸಲು ಮತ್ತು ಅವುಗಳ ಪರಿಹಾರಕ್ಕೆ ಕ್ರಿಯಾ ಯೋಜನೆ ರೂಪಿಸಲು ಡಿಸಿಎಂ ಡಿ.ಕೆ. ಶಿವಕುಮಾರ್ ಈ ಸಭೆಯನ್ನು ಆಯೋಜಿಸಿದ್ದರು. ಸಭೆಯಲ್ಲಿ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ಇನ್ಫೋಸಿಸ್ ಮಾಜಿ ನಿರ್ದೇಶಕ ಮೋಹನ್‌ದಾಸ್ ಪೈ ಸೇರಿದಂತೆ ಹಲವು ಪ್ರಮುಖ ಉದ್ಯಮಿಗಳು ಭಾಗವಹಿಸಿದ್ದರು. ಜಿಬಿಎ (ಗವರ್ನೆನ್ಸ್ ಆಫ್ ಬೆಂಗಳೂರು ಆಕ್ಟ್) ಮುಖ್ಯ ಆಯುಕ್ತರು ಸೇರಿದಂತೆ ಹಿರಿಯ ಅಧಿಕಾರಿಗಳು ಕೂಡ ಉಪಸ್ಥಿತರಿದ್ದರು.



ಪ್ರಮುಖ ಉದ್ಯಮಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಹತ್ವದ ಸಭೆ ನಡೆಸಿದರು.

ಸಭೆಯ ಪ್ರಮುಖ ನಿರ್ಧಾರಗಳು ಮತ್ತು ಸಲಹೆಗಳು: ಉದ್ಯಮಿಗಳ ಮನೆಯಲ್ಲಿ ನಡೆದ ಸಭೆಯಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ಪ್ರತಿನಿತ್ಯ ಓಡಾಡುವ ಔಟರ್ ರಿಂಗ್ ರಸ್ತೆಯ ಸಮಗ್ರ ಅಭಿವೃದ್ಧಿಗೆ ಡಿಸಿಎಂ ಸೂಚನೆ ನೀಡಿದರು. ಈ ಕಾಮಗಾರಿಗೆ ಸುಮಾರು 500 ಕೋಟಿ ರೂ. ವೆಚ್ಚವಾಗುವ ನಿರೀಕ್ಷೆಯಿದೆ. ರಸ್ತೆಗಳಲ್ಲಿನ ಗುಂಡಿಗಳಿಂದಾಗುತ್ತಿರುವ ಸಮಸ್ಯೆಗಳ ಕುರಿತು ಉದ್ಯಮಿಗಳು ಮನವಿ ಮಾಡಿದ್ದು, ತಕ್ಷಣವೇ ಗುಂಡಿಗಳಿಗೆ ಮುಕ್ತಿ ನೀಡುವಂತೆ ಕ್ರಮ ಕೈಗೊಳ್ಳಲು ಡಿಸಿಎಂ ಸೂಚಿಸಿದರು. ನೆನೆಗುದಿಗೆ ಬಿದ್ದಿರುವ ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಉದ್ಯಮಿಗಳು ಸಲಹೆ ನೀಡಿದರು. ನಗರದ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮೆಟ್ರೋ ರೈಲುಗಳ ಸಂಖ್ಯೆಯನ್ನು ಮತ್ತು ಸಂಚಾರ ಆವರ್ತನವನ್ನು ಹೆಚ್ಚಿಸುವಂತೆ ಮನವಿ ಮಾಡಲಾಯಿತು.

ಉದ್ಯಮಿಗಳಿಂದ ಡಿಸಿಎಂಗೆ ಪ್ರಶಂಸೆ: ಸಭೆಯ ನಂತರ ಉದ್ಯಮಿಗಳು ಟ್ವೀಟ್‌ಗಳ ಮೂಲಕ ಡಿಸಿಎಂ ಡಿ.ಕೆ. ಶಿವಕುಮಾರ್ ಕ್ರಮವನ್ನು ಶ್ಲಾಘಿಸಿದರು. ಉದ್ಯಮಿ ಮೋಹನ್‌ದಾಸ್ ಪೈ ಅವರು ಟ್ವೀಟ್ ಮಾಡಿ, ಈ ಅದ್ಭುತ ಉಪಕ್ರಮಕ್ಕಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಧನ್ಯವಾದಗಳು. ನಾಗರಿಕರನ್ನು ಭೇಟಿ ಮಾಡುವುದು, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಪರಿಹರಿಸುವುದು ಉತ್ತಮ ರಾಜಕೀಯ ನಾಯಕರ ಕೆಲಸ. ನಿಮ್ಮ ಸಂವಾದಗಳು ಮತದಾರರು ಮತ್ತು ಅವರ ಪ್ರತಿನಿಧಿಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತಿವೆ. ಜಿಬಿಎ ರಚಿಸುವ ಮೂಲಕ ನೀವು ದಶಕಗಳಲ್ಲಿ ಯಾವುದೇ ಭಾರತೀಯ ನಗರದಲ್ಲಿ ಆಗದ ಅತಿದೊಡ್ಡ ಸುಧಾರಣೆಯನ್ನು ಪೂರ್ಣಗೊಳಿಸಿದ್ದೀರಿ. ಭರವಸೆಯಿಂದ ಭವಿಷ್ಯದತ್ತ ನೋಡುತ್ತಿದ್ದೇವೆ ಎಂದಿದ್ದಾರೆ.

ಉದ್ಯಮಿ ಕಿರಣ್ ಮಜುಂದಾರ್ ಶಾ ಅವರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ರಸ್ತೆಗಳು, ಓಆರ್‌ಆರ್, ಪಿಆರ್‌ಆರ್, ಒಳಚರಂಡಿ, ಸಂಚಾರ ಮತ್ತು ಕಸ ವಿಲೇವಾರಿ ಸೇರಿದಂತೆ ಪ್ರಮುಖ ಮೂಲಸೌಕರ್ಯ ಅಡಚಣೆಗಳನ್ನು ಸರಿಪಡಿಸಲು ಕ್ರಿಯಾ ಯೋಜನೆ ರೂಪಿಸಲು ಅತ್ಯಂತ ರಚನಾತ್ಮಕ ಸಭೆ ನಡೆಸಿದೆವು ಎಂದು ಟ್ವೀಟ್ ಮಾಡಿದ್ದಾರೆ.

ಮೂರು ತಿಂಗಳ ಜೇನುಗಾರಿಕೆ ತರಬೇತಿ

ಮೈಸೂರು, ಅ.26– 2025–26ನೇ ಸಾಲಿಗೆ ಭಾಗಮಂಡಲ ಹಾಗೂ ಬೀಳಗಿ ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿ ರೈತರ ಮಕ್ಕಳಿಗೆ 3 ತಿಂಗಳ ಜೇನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ನ.4ರಿಂದ ಫೆ.3, 2026ರವರೆಗೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲೆಗೆ ಪರಿಶಿಷ್ಟ ಜಾತಿ, ವರ್ಗದಡಿ 1 ಸಂಖ್ಯೆ ಗುರಿಯನ್ನು ನಿಗದಿಪಡಿಸಿದ್ದು, ಅಭ್ಯರ್ಥಿಗಳು ಕನಿಷ್ಠ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ 18ರಿಂದ 35 ವರ್ಷ ವಯಸ್ಸಿನ ರೈತರ ಮಕ್ಕಳು (ಪುರುಷ ಅಭ್ಯರ್ಥಿ) ಸಂಬಂಧಿಸಿದ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಥವಾ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಅವರನ್ನು ಸಂಪರ್ಕಿಸಿ ಅರ್ಜಿ ನಮೂನೆಗಳನ್ನು ಪಡೆದು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


‘ಭಾವ ಶರಧಿ’ ಕವನ ಸಂಕಲನ ಬಿಡುಗಡೆ

ಕವಿಗಳಿಗೆ ಎಂದೆಂದಿಗೂ ಸಾವಿಲ್ಲ: ಸತ್ಯಪ್ರಸಾದ್

ಮೈಸೂರು,ಅ.26(ಎಂಟಿವೈ)–ಕವಿಗಳಿಗೆ ಎಂದಿಗೂ ಸಾವಿಲ್ಲ. ತಮ್ಮ ಕೃತಿಗಳ ಮೂಲಕ ಕವಿಗಳು ಸದಾ ಜೀವಂತವಾಗಿರುತ್ತಾರೆ ಎಂದು ವಿಜಯವಿಠಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್. ಸತ್ಯಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಸಮಾರಂಭದಲ್ಲಿ ಎಸ್.ಎಲ್. ವರಲಕ್ಷ್ಮೀ ಮಂಜುನಾಥ್ ಅವರ ‘ಭಾವ ಶರಧಿ’ ಕವನ ಸಂಕಲನ ಕುರಿತು ಮಾತನಾಡಿದ ಅವರು, ವರಲಕ್ಷ್ಮೀ ಮಂಜುನಾಥ್ ಅವರು ಗದ್ಯ ಹಾಗೂ ಪದ್ಯ ಎರಡಲ್ಲೂ ಸಾಹಿತ್ಯ ರಚಿಸಿದ್ದಾರೆ. ಅವರ ಕವನಗಳಲ್ಲಿ ನವರಸ ಇದೆ. ಹಾಸ್ಯ ಸ್ಥಾಯಿಭಾವ ಆದಲ್ಲಿ ಕವಿ ಪ್ರಸ್ತುತವಾಗುತ್ತಾನೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಮಹಾಸಂತ ಸ್ವಾಮಿವಿವೇಕಾನಂದ ಸೇರಿದಂತೆ ಹಲವಾರು ಮಹನೀಯರ ಜೀವನ ದರ್ಶನವನ್ನು ಒಂದು ಪುಟದಲ್ಲಿ ಮಾಡಿಸಿದ್ದಾರೆ. ಶಿಕ್ಷಣ, ಆರೋಗ್ಯ, ಪರಿಸರ ಸೇರಿದಂತೆ ಬೇರೆ ಬೇರೆ ವಿಷಯಗಳನ್ನು ಕುರಿತು ಸಾಮಾಜಿಕ ಕಾಳಜಿಯಿಂದಲೇ ಬರೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮತದಾನದ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಎಲ್ಲರೂ ಮತದಾನ ಮಾಡಬೇಕೇ ಹೊರತು ‘ಮತಿದಾನ’ ಮಾಡಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮಗೆ ಸರಿ ಕಂಡವರನ್ನು ಆಯ್ಕೆ ಮಾಡಬೇಕು. ಶಾಲಾ–ಕಾಲೇಜುಗಳ ಗ್ರಂಥಾಲಯಗಳಲ್ಲಿ ಬುಕ್ ಟಾಕ್ ಏರ್ಪಡಿಸಬೇಕು. ಆ ಮೂಲಕ ಪುಸ್ತಕ ಓದುವ ಬಗ್ಗೆ ಆಸಕ್ತಿ ಉಂಟು ಮಾಡಬೇಕು. ಎಲ್ಲಾ ಬಾಷೆಗಳು ಗೊತ್ತಿರಬೇಕು. ಕನ್ನಡ ಹೃದಯಕ್ಕೆ ಹತ್ತಿರವಾಗಿರಬೇಕೆಂದರು.



ಮೈಸೂರಿನ ವಿಜಯವಿಠಲ ಪಪೂರ್ವ ಕಾಲೇಜಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನಿಂದ ನಡೆದ ಸಮಾರಂಭದಲ್ಲಿ ವರಲಕ್ಷ್ಮೀ ಮಂಜುನಾಥ್ ಅವರ ಮೂರು ಕೃತಿಗಳನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಸಂಪರ್ಕ, ಶ್ರೀಗಂಧ ವಲಯ ಪ್ರಮುಖ ಡಾ.ವಿ.ರಂಗನಾಥ್ ಬಿಡುಗಡೆ ಮಾಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿಚಾರ ಮಂಜರಿ–ವ್ಯಕ್ತಿ–ವಿಚಾರ–ಸಂಸ್ಕೃತಿ ಕುರಿತ ಲೇಖನಗಳ ಸಂಕಲನ ಕುರಿತು ಮಾತನಾಡಿ, ಎಸ್.ಎಲ್.ವರಲಕ್ಷ್ಮೀ ಮಂಜುನಾಥ್ ಅವರ ಆಳವಾದ ಅಧ್ಯಯನ, ಅಸಾಮಾನ್ಯ ಗ್ರಹಣಾಶಕ್ತಿ, ಎಲ್ಲಾ ಲೇಖನಗಳಲ್ಲೂ ಗೋಚರವಾಗುತ್ತದೆ. ನಮ್ಮ ಮಹಾಪುರುಷರು, ಹಬ್ಬ–ಹರಿದಿನಗಳು, ಸಂಸ್ಕೃತಿಯ ಬಗ್ಗೆ ತಿಳಿಯಬಹುದು ಎಂದರು.

ಜೀವನರಾಗ–ಕಥಾ ಸಂಕಲನ ಕುರಿತು ನಂಜನಗೂಡು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೊತ್ತಲವಾಡಿ ಶಿವಕುಮಾರ್ ಮಾತನಾಡಿ, ಜನಪ್ರಿಯತೆಗಿಂತ ಜನಮನ್ನಣೆ ಪಡೆಯುವುದು ಮುಖ್ಯ. ಏಕೆಂದರೆ ಜನಪ್ರಿಯತೆ ಹೋಗುತ್ತದೆ. ಆದರೆ ಜನಮನ್ನಣೆ ಉಳಿಯುತ್ತದೆ ಎಂದರು.

ಮೂರು ಕೃತಿಗಳನ್ನು ಬಿಡುಗಡೆ ಮಾಡಿದ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಸಂಪರ್ಕ ಹಾಗೂ ಶ್ರೀಗಂಧ ವಲಯ ಪ್ರಮುಖ ಡಾ.ವಿ.ರಂಗನಾಥ್ ಮಾತನಾಡಿ, ಪರಿಷತ್ ಮೂಲಕ 13 ಕೇಂದ್ರಗಳಲ್ಲಿ ಪ್ರತಿ ತಿಂಗಳು ಸಾಹಿತ್ಯ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದೇವೆ. ಸಾಹಿತ್ಯವನ್ನು ಓದುಗರ ಬಳಿಗೆ ತೆಗೆದುಕೊಂಡು ಹೋಗುವುದು ನಮ್ಮ ಉದ್ದೇಶ ಎಂದು ಹೇಳಿದರು.

ತಗಡೂರು ಗೋಪಿನಾಥ್, ಲೇಖಕಿ ವರಲಕ್ಷ್ಮೀ ಮಂಜುನಾಥ್ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಸಾಹಿತ್ಯ ಪರಿಷದ್ ಜಿಲ್ಲಾಧ್ಯಕ್ಷ ಎಸ್.ಸುಬ್ರಹ್ಮಣ್ಯ ವಹಿಸಿದ್ದರು. ಎಂ.ಎ.ಮಂಜುನಾಥ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಚೈತ್ರಾ ಮಹೇಶ್ ಪ್ರಾರ್ಥಿಸಿದರೆ, ಶೋಭಾ ನಾಗಶಯನ ಕಾರ್ಯಕ್ರಮ ನಿರೂಪಿಸಿದರು.

ಅಖಿಲ ಭಾರತೀಯ ಸಾಹಿತ್ಯಪರಿಷತ್ ನಂಜನಗೂಡು ತಾಲೂಕು ಘಟಕದ ಅಧ್ಯಕ್ಷ ನಂಜನಗೂಡು ಸತ್ಯನಾರಾಯಣ ಸ್ವಾಗತಿಸಿದರು. ಕನ್ನಿಕಾ ಮಹೇಶ್ ವಂದಿಸಿದರು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು